ನಮ್ಮ ದೇಶದ ಚರಿತ್ರೆ

(IV ಫೊರ್ಮು)

ಶೆಣೈ ಮತ್ತು ಬಾಳಿಗ

ಯು. ಆರ್. ಶೆಣೈ ಎಂಡ್ ಸನ್ಸ್
ರಥಬೀದಿ, ಮಂಗಳೂರು.

ನಮ್ಮ ದೇಶದ ಚರಿತ್ರೆ

ಜಿ. ಆರ್. ಶೆಣೈ, ಎಮ್. ಎ., ಎಲ್. ಟಿ.
ಬಿ. ಡಿ. ಮಾಧವ ಬಾಳಿಗ, ಬಿ. ಎ. ಎಲ್. ಟಿ.

*Approved by the Text Book Committee Madras, 14
for class use under Secondary & High Schools list vide Page 46 of the
Consolidated lists of approved books Vide Fort St. George Gazette
Dated ~~2nd June 1942~~ 14-5-1946.*

ಯು. ಆರ್. ಶೆಣೈ ಎಂಡ್ ಸನ್ಸ್
ರಥಬೀದಿ, ಮಂಗಳೂರು.

1946

ಕ್ರಯ 18-0

First Edition 1938
II Reprint 1946

Printed at the Sharada Press, Mangalore
P. I. C. S. K. 22
for
Messrs U. R. Shenoy & Sons,
P. I. C. Q. H. S. K. 3, May 1946.

ಮುನ್ನುಡಿ

ಈ ಪುಸ್ತಕವನ್ನು ಎಸ್. ಎಸ್. ಎಲ್. ಸಿ. ಬೋರ್ಡಿನವರು IV ಫೊರ್ಮಿಗೆಂದು ತಯಾರಿಸಿದ ಪಾಠಪಟ್ಟಿಗನುಸಾರವಾಗಿ ಬರೆದಿದ್ದೇವೆ. ಹಾಯಸ್ಕೂಲುಗಳಲ್ಲಿ ಎಲ್ಲ ವಿಷಯುಗಳನ್ನು ಮಾತೃಭಾಷೆಯಲ್ಲೇ ಕಲಿಸಬೇಕೆಂಬುದು ಈಗ ನಿರ್ವಿವಾದವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಪಾಠಗಳನ್ನು ಕಲಿಯುಲು ಸುಲಭವಾಗುವುದೆಂಬುದನ್ನು ನಾವು ಬೇರೆ ಹೇಳಬೇಕಾಗಿಲ್ಲ. ಆದರೆ ಕನ್ನಡದಲ್ಲಿ ಉಪಯುಕ್ತವಾದ ಪುಸ್ತಕಗಳ ಅಭಾವವು ಇದಕ್ಕೊಂದು ದೊಡ್ಡ ತಡೆಯಾದುದರಿಂದ ಇದನ್ನು ಹೋಗಲಾಡಿಸಲು ಪ್ರಯತ್ನಿಸಬೇಕಾದುದು ಶಿಕ್ಷಣ ಕ್ಷೇತ್ರದಲ್ಲಿರುವವರ ಕರ್ತವ್ಯವಾಗಿದೆ. ಪ್ರಕೃತ ಪ್ರಯತ್ನವು ಅಂತಹುದಾಗಿದೆ.

ಹಿಂದೂದೇಶದ ಚರಿತ್ರೆಯಲ್ಲಿ ಕಲಿಯಬೇಕಾದ ಅತಿ ಮುಖ್ಯ ವಿಷಯುಗಳನ್ನು ಮಾತ್ರ ಈ ಪುಸ್ತಕದಲ್ಲಿ ಕೊಟ್ಟಿರುತ್ತೇವೆ. ನಾಲ್ಕು ಸಾವಿರ ವರ್ಷಗಳಿಂದ ನಮ್ಮ ದೇಶದಲ್ಲಿ ನಡೆಯುತ್ತಲಿದ್ದ ವಿದ್ಯಮಾನಗಳನ್ನು ಇಂತಹ ಚಿಕ್ಕ ಪುಸ್ತಕದಲ್ಲಿ ಕೊಡುವಾಗ ತುಲನಾತ್ಮಕ ದೃಷ್ಟಿಯಿಂದ ವಿಷಯುಗಳ ಪ್ರಾಮುಖ್ಯತೆಗೆ ಗಮನ ಕೊಡುವುದು ಅತ್ಯಾವಶ್ಯಕವಾಗಿದೆ. ವಿದ್ಯಾರ್ಥಿಗಳಿಗೆ ಹಿಂದೂದೇಶದ ಇತಿಹಾಸದ ಸ್ಥೂಲವಾದ ಪರಿಚಯುವನ್ನು ಮಾಡಿಕೊಡುವುದೇ ಪ್ರಕೃತ ಪುಸ್ತಕದ ಉದ್ದೇಶವಾಗಿದೆ.

ಈ ಪುಸ್ತಕದ ಹಸ್ತಪ್ರತಿಯನ್ನು ತಯಾರಿಸುವುದರಲ್ಲಿಯೂ ಚಿತ್ರಗಳನ್ನು ಬರೆಯುವುದರಲ್ಲಿಯೂ ನಮಗೆ ನೆರವಾದ ಶ್ರೀ. ಎಸ್. ಕೃಷ್ಣರಾಯ ಶೆಣೈಯವರಿಗೂ, ಕೆಲವು ಪಡಿಯಚ್ಚುಗಳನ್ನು ಒದಗಿಸಿ ಪುಸ್ತಕವನ್ನು ಸುಂದರವಾಗಿಯೂ ಶೀಘ್ರವಾಗಿಯೂ ಮುದ್ರಿಸಿದ ಶಾರದಾ ಪ್ರೆಸ್ಸಿನ ಮಾಲಿಕರಿಗೂ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳು.

ಕೆನರಾ ಹಾಯಸ್ಕೂಲ್,
ಮಂಗಳೂರು.
1-11-1938

ಜಿ. ಆರ್. ಶೆಣೈ, ಎಂ. ಎ., ಎಲ್. ಟಿ.
ಬಿ. ಡಿ. ಮಾಧವ ಬಾಳಿಗ, ಬಿ.ಎ.,ಎಲ್.ಟಿ.

ಭೂಮಿಯಿದೆ. ಈ ಪ್ರದೇಶದಲ್ಲಿ ಸಿಂಧೂನದಿಯ ಬಯಲುಭೂಮಿ (ಸಿಂಧ ಮತ್ತು ಪಂಜಾಬ) ಗಂಗಾನದಿಯ ಬಯಲುಭೂಮಿ (ಸಂಯುಕ್ತ ಪ್ರಾಂತ, ಬಿಹಾರ ಮತ್ತು ಬಂಗಾಳ) ಮತ್ತು ರಜಪುತಾನ ಇವೆ. ಇವುಗಳಲ್ಲಿ ಗಂಗಾನದಿಯ ಬಯಲು ಭೂಮಿಯು ಬಹಳ ಫಲವತ್ತಾಗಿರುವುದರಿಂದ, ಹಿಂದೂದೇಶದ ಮುಖ್ಯ ಮುಖ್ಯ ಪಟ್ಟಣಗಳೆಲ್ಲ ಅಲ್ಲಿಯೇ ನೆಲೆಸಿದ್ದು ಅದು ಜನಸಂದಣಿಯಿಂದ ಕಿಕ್ಕಿರಿದ ಪ್ರದೇಶವಾಗಿದೆ. ಹಿಂದೂಗಳು ಅದೊಂದು ಪವಿತ್ರ ಪ್ರದೇಶವೆಂದು ಭಾವಿಸುತ್ತಾರೆ. ಪಂಜಾಬದಲ್ಲಿ ಸಾಕಷ್ಟು ಮಳೆಯು ಬೀಳದಿರುವ ಕಾರಣ ನದಿಯ ನೀರಿನ ಸಹಾಯದಿಂದಲೇ ವ್ಯವಸಾಯವು ಸಾಗುವುದು. ಅಲ್ಲಿ ಹೊರದೇಶದವರ ಆಕ್ರಮಣದ ಭೀತಿಯು ಹೆಚ್ಚು. ರಜಪುತಾನವು ಶೀರ ಮರುಭೂಮಿಯಾಗಿದೆ ಅಫಘಾನ ಅರಸರು ದಿಲ್ಲಿಯಲ್ಲಿ ರಾಜ್ಯವನ್ನು ಸ್ಥಾಪಿಸಿದ ಮೇಲೆ ಮೊದಲು ಅಲ್ಲಿ ಆಳಿಕೊಂಡಿದ್ದ ರಜಪೂತರು ಈ ಮರುಭೂಮಿಗೆ ಬಂದು ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಯತ್ನಿಸಿದರು. ವಿಂಧ್ಯ ಮತ್ತು ಅರಾವಳಿ ಪರ್ವತಗಳ ನಡುವಿನ ಪ್ರದೇಶವೇ ಮಾಳವ ತಪ್ಪಲು ಭೂಮಿಯು. ಇಲ್ಲಿಂದಲೇ ಚಂಬಲ್ ನದಿಯು ಹುಟ್ಟಿ ಹರಿದು, ಯಮುನಾ ನದಿಯನ್ನು ಸೇರುವುದು. ರಜಪುತಾನದ ಪಶ್ಚಿಮಕ್ಕೆ ಗುಜರಾಥ ಮತ್ತು ಕಾಠಿಯಾವಾಡ ಪ್ರದೇಶಗಳಿವೆ.

ಉತ್ತರ ಬಯಲುಭೂಮಿ

ನರ್ಮದಾ ಮತ್ತು ತುಂಗಭದ್ರಾ ನದಿಗಳ ನಡುವಣ ಪ್ರದೇಶಕ್ಕೆ ದಕ್ಷಿಣವೆಂದು ಹೆಸರು. ಇದು ಉತ್ತರದಲ್ಲಿ ವಿಂಧ್ಯಪರ್ವತದಿಂದಲೂ ಪೂರ್ವ, ಪಶ್ಚಿಮಗಳಲ್ಲಿ ಪೂರ್ವ, ಪಶ್ಚಿಮ ಘಟ್ಟಗಳಿಂದಲೂ ಆವರಿಸಲ್ಪಟ್ಟ ಪೀಠಭೂಮಿಯು. ಇಲ್ಲಿಯ ಮಣ್ಣು ಕರಿಮಣ್ಣು; ಮಳೆಯೂ ವಿಶೇಷವಾಗಿಲ್ಲ. ಆದುದರಿಂದ ಹತ್ತಿ ಮತ್ತು ಎಣ್ಣೆಯ ಬೀಜಗಳನ್ನು ಬೆಳೆಸಲು ಅನುಕೂಲವಾದ ಸ್ಥಳವಿದು. ಇಲ್ಲಿ ಮುಂಬಾಯಿ, ಮಧ್ಯಪ್ರಾಂತ, ಓರಿಸ್ಸಾಪ್ರಾಂತಗಳಲ್ಲದೆ ಹೈದರಾಬಾದ ಸಂಸ್ಥಾನವೂ ಇರುತ್ತವೆ. ಇಲ್ಲಿಯ ವ್ಯಾಪಾರವೆಲ್ಲ ಮುಂಬಾಯಿ ಬಂದರದ ಮೂಲಕವೇ ನಡೆಯುವುದು. ಹಿಂದೆ ಈ ಪ್ರದೇಶದಲ್ಲಿ ಯಾವಾಗಲೂ ಸ್ವತಂತ್ರ ರಾಜ್ಯಗಳಿದ್ದವು.

ದಕ್ಷಿಣ

ತುಂಗಭದ್ರಾ ನದಿಯ ದಕ್ಷಿಣಕ್ಕೆ ಕನ್ಯಾಕುಮಾರಿ ಭೂಶಿರದ ವರೆಗಿನ ಪ್ರದೇಶಕ್ಕೆ ಚರಿತ್ರೆಯಲ್ಲಿ ದಕ್ಷಿಣ ಹಿಂದೂದೇಶವೆಂದು ಹೆಸರಿದೆ.

ದಕ್ಷಿಣ ಹಿಂದೂದೇಶ

ಇದರಲ್ಲಿ ಪೂರ್ವ ಪಶ್ಚಿಮ ಕರಾವಳಿಗಳ ಪ್ರದೇಶಗಳಲ್ಲದೆ, ಮೈಸೂರು ಪೀಠಭೂಮಿ ಮತ್ತು ಕಾವೇರಿ ನದಿಯ ಬಯಲುಗಳೇ ಮುಖ್ಯವಾಗಿವೆ. ಇಲ್ಲಿಯೂ ಹಿಂದೆ ಸ್ವತಂತ್ರವಾದ ರಾಜ್ಯಗಳಿದ್ದುವು. ಈ ರಾಜ್ಯಗಳಿಗೂ, ದಕ್ಷಣದ ರಾಜ್ಯಗಳಿಗೂ ಪದೆ ಪದೆ ಯುದ್ಧಗಳು ಆಗುತ್ತಲೆ ಇದ್ದುವು.

ಹಿಂದೂದೇಶದ ಚರಿತ್ರೆಯೆಂದರೆ ಉತ್ತರ ಹಿಂದುಸ್ಥಾನದ, ದಕ್ಷಣದ ಮತ್ತು ದಕ್ಷಿಣ ಹಿಂದೂದೇಶದ ಚರಿತ್ರೆ. ಕೆಲವೊಮ್ಮೆ ಉತ್ತರ ಹಿಂದೂದೇಶದ ಅರಸರು ಉಳಿದ ಪ್ರದೇಶಗಳ ಅರಸರನ್ನು ಜಯಿಸಿ ತಮ್ಮ ಮೇಲ್ಮೆಯನ್ನು ಸಾಧಿಸುತಿದ್ದರು. ಆದರೆ ಬಹುಕಾಲ ಅವರ ಸಾರ್ವಭೌಮತೆಯು ಉಳಿಯುತ್ತಿರಲಿಲ್ಲ. ಹೀಗಾಗಿ ನಾವು ಹಿಂದೂದೇಶದ ಚರಿತ್ರೆಯನ್ನು ಕಲಿಯುವಾಗ, ಇಲ್ಲಿ ಸ್ಥಾಪಿತವಾದ ದೊಡ್ಡ ಸಾಮ್ರಾಜ್ಯಗಳ ಚರಿತ್ರೆಯನ್ನೂ, ಈ ಚಿಕ್ಕ ದೊಡ್ಡ ಸಂಸ್ಥಾನಗಳ ಚರಿತ್ರೆಯನ್ನೂ ಓದಬೇಕಾಗಿದೆ.

ಹಿಂದೂದೇಶವು ಬಹಳ ವಿಶಾಲವಾದ ದೇಶವಾಗಿದ್ದರೂ, ಇಲ್ಲಿಯ ಜನರಲ್ಲಿ ವಿಶೇಷವಾದ ಭೇದಭಾವಗಳಿದ್ದರೂ, ಇಲ್ಲಿಯ ಜನರ ಆಚಾರ ವಿಚಾರ, ನಡೆನುಡಿ, ರೀತಿನೀತಿಗಳಿಗೂ, ಈ ದೇಶದ ಹೊರಗಿನ ಜನರ ಜೀವನದ ರೀತಿಗೂ ಬಹಳ ವ್ಯತ್ಯಾಸವಿದೆ. ನಮ್ಮ ದೇಶದ ಜನರಲ್ಲಿ ಇಷ್ಟು ವಿವಿಧತೆಯಿದ್ದರೂ ಕೂಡ ಅವರಲ್ಲಿ ತಾವು ಒಂದೇ ಜನಾಂಗದವರು, ಎಂಬ ಒಂದು ರೀತಿಯ ಐಕ್ಯಮತ್ಯವನ್ನು ಕಂಡುಕೊಳ್ಳಬಹುದು. ಈ ದೇಶದ ಚರಿತ್ರೆಯನ್ನು ಓದಿದರೆ ಈ ರೀತಿಯ ಭಾವನೆಯು ಜನರಲ್ಲಿರುವುದನ್ನೂ, ಇಲ್ಲಿಯ ಜೀವನದಲ್ಲಿಯ ಸಮಾನತೆಯನ್ನೂ ಅರಿತುಕೊಳ್ಳಬಹುದು.

ಹಿಂದೂದೇಶದ ಬಲು ಪ್ರಾಚೀನಕಾಲದ ಚರಿತ್ರೆಯನ್ನು ಕೂಡ ನಾವು ಗೊತ್ತುಮಾಡಿಕೊಳ್ಳಬಹುದು. ಭೂಲೋಕದ ಇತರ ಯಾವ ದೇಶದವರ ಸಂಸ್ಕೃತಿಯೂ ಈ ದೇಶದವರಷ್ಟು ಪುರಾತನವಾಗಿಲ್ಲ. ಉಳಿದ ದೇಶಗಳ ಜನರು ನಾಗರಿಕತೆಯಲ್ಲಿ ಕಾಲಿಡುವ ಮೊದಲೆ

ಹಿಂದೂದೇಶದವರು ನಾಗರಿಕತೆಯ ತುಟ್ಟತುದಿಯನ್ನೇರಿದ್ದರು; ಅವರು ಒಳ್ಳೆ ಸುಧಾರಿತರಾಗಿ ಜೀವನವನ್ನು ಕೈಕೊಂಡಿದ್ದರು ಎಂದು ಹೇಳಲು ಸಾಕಷ್ಟು ಪ್ರಮಾಣಗಳಿವೆ.

ದ್ರಾವಿಡರು

ಐದು ಸಾವಿರ ವರ್ಷಗಳ ಹಿಂದೆ ನಿರ್ಮಿಸಲ್ಪಟ್ಟ ಕೆಲವು ದೊಡ್ಡ ದೊಡ್ಡ ಪಟ್ಟಣಗಳ ಕುರುಹುಗಳು ಈಗಾಗಲೆ ನಮ್ಮ ದೇಶದಲ್ಲಿ ದೊರಕಿವೆ. ಸಿಂಧೂನದಿಯ ದಡದಲ್ಲಿ ಈಗಿನ ಸಕ್ಕರ್ ಪಟ್ಟಣದ ಹತ್ತಿರ ಮೊಹೆಂಜೆಡೆರೊ ಎಂಬಲ್ಲಿ ನೆಲವನ್ನು ಅಗೆದಾಗ ಬಲು ಹಿಂದಿನ ಕಾಲದ ಮಾರ್ಗಗಳೂ, ಇಟ್ಟಿಗೆಗಳಿಂದಲೆ ಮಾಡಲ್ಪಟ್ಟ ಮನೆಗಳೂ, ಆಗಿನ ಕಾಲದ ಜನರು ಉಪ



ಮೊಹೆಂಜೆಡೆರೊವಿನ ಕುರುಹುಗಳು

ಯೋಗಿಸುತ್ತಿದ್ದ ಮಣ್ಣಿನ ಮಡಿಕೆಗಳೂ, ಕಲ್ಲು ಕಂಚುಗಳಿಂದ ರಚಿತವಾದ ಸಾಧನ ಸಾಮಗ್ರಿಗಳೂ, ಆಭರಣಗಳೂ, ಇಟ್ಟಿಗೆಗಳ ಮೇಲೂ ಮಡಿಕೆಗಳ ಮೇಲೂ ಅವರು ಕೆತ್ತಿದ ಚಿತ್ರಗಳೂ ದೊರಕಿವೆ. ಇದರಿಂದೆಲ್ಲ ಆ ಕಾಲದಲ್ಲಿ ವಾಸವಾಗಿದ್ದ ಜನರು ಅತ್ಯಂತ ನಾಗರಿಕರಾಗಿ

ದ್ದರೆಂದು ಸ್ಪಷ್ಟವಾಗದೆ? ಆ ಜನರನ್ನೆ ನಾವು ದ್ರಾವಿಡರೆಂದು ಕರೆಯುತ್ತೇವೆ. ಅವರು ಉತ್ತರ ಹಿಂದುಸ್ಥಾನದಲ್ಲೆಲ್ಲಾ ಹಬ್ಬಿದ್ದರು. ಅವರು ಅಲ್ಲಲ್ಲಿ ಕಾಡುಗಳನ್ನೆಲ್ಲಿ ಕಡಿದು ಮನೆಗಳನ್ನು ಕಟ್ಟಿ ವ್ಯವಸಾಯದಿಂದ ಜೀವಿಸುತಿದ್ದಿರಬೇಕು. ಅವರು, ತಮಗಿಂತಲೂ ಮೊದಲು ಇಲ್ಲಿ ವಾಸವಾಗಿದ್ದ ಕರಿಯ ಮೂಲನಿವಾಸಿಗಳನ್ನು ಕಾಡುಗುಡ್ಡಗಳಿಗೆ ಅಟ್ಟಿದ್ದಿರಬೇಕು. ಈ ಜನರು ತಮ್ಮ ಅನಾಗರಿಕ ರೀತಿಯ ಜೀವನವನ್ನೆ ಅವಲಂಬಿಸಿ ಕಾಡುಗಳಲ್ಲೆ ವಾಸಿಸತೊಡಗಿದರು. ಈಗಲೂ ಅವರ ವಂಶಜರು ನಮ್ಮ ದೇಶದ ಕೆಲಭಾಗಗಳಲ್ಲಿ ವಾಸಿಸುತ್ತಾರೆ. ಮಧ್ಯಪ್ರಾಂತದ ಸಂತಾಳರೂ, ನೀಲಗಿರಿಯ ತೋಡರೂ ಅವರ ವಂಶದವರಾಗಿರಬೇಕು.

ವೈದಿಕ ಸಂಸ್ಕೃತಿ: ಅನೇಕ ಶತಮಾನಗಳ ತರುವಾಯ ಉತ್ತರ ಹಿಂದುಸ್ಥಾನದಲ್ಲಿ ನೆಲೆಸಿದ್ದ ದ್ರಾವಿಡರು ಅಪಾಯಕ್ಕೀಡಾದರು.

ಆರ್ಯರು

ಮೊಹೆಂಜೊದೆರೊ ಪಟ್ಟಣವು ಹಾಳುಬಿದ್ದಿತು. ಅದರ ನಾಶಕ್ಕೆ ಕಾರಣಗಳೇನೆಂಬುದನ್ನು ಕಂಡುಹಿಡಿಯಲು ನಮಗೆ ಶಕ್ಯವಿಲ್ಲ. ಆದರೆ ದ್ರಾವಿಡರು ವಾಸವಾಗಿದ್ದ ಸಿಂಧೂ ನದಿಯ ಬಯಲುಭೂಮಿಯಲ್ಲಿ, ಆರ್ಯರೆಂಬ ಹೊಸ ಜನರು ಖೈಬರ್ ಕಣಿವೆಯ ಮಾರ್ಗವಾಗಿ ಬಂದು ನೆಲೆನಿಂತರು. ಈ ಆರ್ಯರು ಕುರಿದನಗಳನ್ನು ಮೇಯಿಸಿ ಜೀವಿಸುತ್ತಲಿದ್ದ ಸಂಚಾರೀ ಜನರಾಗಿದ್ದರು. ಅವರು ತಮ್ಮ ಹುಟ್ಟೂರುಗಳನ್ನು ಸುಮಾರು ಮೂರು ಸಾವಿರ ವರ್ಷಗಳ ಹಿಂದೆಯೆ ಬಿಟ್ಟು ಬೇರೆ ಬೇರೆ ಪಂಗಡಗಳಾಗಿ ಯುರೇಸಿಯದ ಬೇರೆ ಬೇರೆ ದೇಶಗಳಲ್ಲಿ ಸಂಚರಿಸುತ್ತ ಅಲ್ಲಿಯ ಮೂಲನಿವಾಸಿಗಳನ್ನು ಕೊಂದೋ, ಓಡಿಸಿಯೋ ಆ ಪ್ರದೇಶಗಳಲ್ಲಿ ತಾವು ವಾಸಿಸತೊಡಗಿದರು. ಈಗ ಯುರೋಪಿನಲ್ಲಿ ಹೆಚ್ಚಿನ ಜನರು ಇಂತಹ ಆರ್ಯಪಂಗಡಗಳ ವಂಶಜರೇ ಆಗಿರುವರು. ಹೀಗೆಯೆ, ಈ ಆರ್ಯರು ಮೆಸಪೊಟೆಮಿಯ, ಪರ್ಶಿಯಾ ದೇಶಗಳಲ್ಲಿಯೂ ನೆಲೆಸಿ, ಕಟ್ಟಕಡೆಗೆ ಹಿಂದೂದೇಶಕ್ಕೂ ಬಂದು ಪಂಜಾಬದಲ್ಲಿ ನೆಲೆನಿಂತರು.

ಪಂಜಾಬದಲ್ಲಿ ನೆಲೆನಿಂತ ಆರ್ಯರ ಜೀವನಕ್ರಮದ ವಿಷಯಗಳು ವೇದಗಳೆಂಬ ಅವರ ಗ್ರಂಥಗಳಿಂದ ನಮಗೆ ತಿಳಿದುಬರುತ್ತವೆ. ಈ ಗ್ರಂಥಗಳಲ್ಲಿ ಅವರ ದೇವತಾ ಪ್ರಾರ್ಥನೆಗಳು ಅವರ ಭಾಷೆ

ಯಾದ ಸಂಸ್ಕೃತದಲ್ಲಿ ಬರೆದಿಡಲ್ಪಟ್ಟಿವೆ. ಆರ್ಯರು ಇಂದ್ರ, ಅಗ್ನಿ, ವರುಣ, ವಾಯು, ಸೂರ್ಯ, ಉಷಾ ಮೊದಲಾದ ದೇವತೆಗಳನ್ನು ಆರಾಧಿಸುತ್ತಿದ್ದರು. ಈ ದೇವತೆಗಳನ್ನು ಆರಾಧಿಸುವಾಗ ಯಜ್ಞಗಳನ್ನು ಮಾಡಿ ಅವುಗಳಲ್ಲಿ ತಾವು ತಿನ್ನುವ ವಸ್ತುಗಳನ್ನು ಆಹುತಿಯಾಗಿ ಕೊಡುತ್ತಿದ್ದರು. ಜೇನು, ತುಪ್ಪ, ಗೋದಿರೊಟ್ಟಿ, ಹಣ್ಣುಹಂಪಲುಗಳನ್ನೂ ಕೆಲವೊಮ್ಮೆ ಆಡು ಕುದುರೆಗಳ ಮಾಂಸವನ್ನೂ ಅರ್ಪಿಸುತ್ತಿದ್ದರು. ಆಗಿನ ಅವರ ಪ್ರಾರ್ಥನೆಯ ಶ್ಲೋಕಗಳನ್ನೇ ನಾವು ಮಂತ್ರಗಳೆಂದು ಕರೆಯುತ್ತೇವೆ.

ಅವರ ಮತ

ವೇದಗಳಲ್ಲಿ ಒಂದಾದ ಋಗ್ವೇದದೊಳಗಿನ ಮಂತ್ರಗಳನ್ನು ಓದಿದರೆ ಆರ್ಯರಿಗೂ ಪಂಜಾಬದ ನಿವಾಸಿಗಳಾದ ದ್ರಾವಿಡರಿಗೂ, ಗೋಚರಾವು ಮತ್ತು ಹೊಲಗಳ ಕುರಿತು ಆಗಾಗ ಯುದ್ಧಗಳಾಗುತ್ತಿದ್ದುವೆಂದು ತಿಳಿದುಬರುವುದು. ಆರ್ಯರು ದ್ರಾವಿಡರನ್ನು ಮ್ಲೇಂಛರು, ಅಸುರರು, ನಾಗರು, ದಸ್ಯುಗಳು ಎಂದು ಮುಂತಾಗಿ ಸಂಬೋಧಿಸಿ ಹೀಯಾಳಿಸುತ್ತಿದ್ದರು. ಅವರೊಳಗಾಗುತ್ತಿದ್ದ ಯುದ್ಧಗಳಲ್ಲಿ ಆರ್ಯರೇ ಹೆಚ್ಚಾಗಿ ವಿಜಯಿಗಳಾಗಿದ್ದರೆಂದು ತಿಳಿದುಬರುತ್ತದೆ. ದ್ರಾವಿಡರ ಆರಾಧನೆಯ ದೇವತೆಗಳೆ ಬೇರೆಯಾಗಿದ್ದರು. ಮರುಗ, ಮಾರಿಯಮ್ಮ ಮೊದಲಾದ ದೇವತೆಗಳು ರೋಗಗಳ ಅಧಿದೇವತೆಗಳೆಂಬ ನಂಬುಗೆಯಿಂದ ಅವರನ್ನು ಪೂಜಿಸಿ, ದ್ರಾವಿಡರು ಕುರಿ ಕೋಳಿಗಳನ್ನು ಬಲಿಕೊಡುತ್ತಿದ್ದರು. ಅವರ ಪೂಜಾವಿಧಿಯೆ ಬೇರೆಯಾಗಿದ್ದಿತು. ಇಂತಹ ನಾಗರಿಕತೆಯ ವ್ಯತ್ಯಾಸದಿಂದಾಗಿ ಆರ್ಯ ದ್ರಾವಿಡರೊಳಗಿನ ವೈಷಮ್ಯವು ಬೆಳೆದು ಬಂದಿತು. ಹೊಸ ಹೊಸ ಆರ್ಯ ಪಂಗಡಗಳು ಬರುತ್ತಲೆ ದ್ರಾವಿಡರಲ್ಲಿ ಅನೇಕರು ಆ ಪ್ರದೇಶವನ್ನೆ ತೊರೆದು ಹಿಂದೂದೇಶದ ಇತರ ಪ್ರದೇಶಗಳಿಗೆ ತೆರಳಬೇಕಾಯಿತು.

ಕೆಲವು ಶತಮಾನಗಳೊಳಗೆ ಆರ್ಯರೂ ಸುತ್ತಮುತ್ತ ವ್ಯಾಪಿಸಿದರು. ಅವರು ಗಂಗಾ, ಯಮುನಾ ಬಯಲುಗಳಿಗೆ ಹೋಗಿ ವಾಸಿಸತೊಡಗಿ ಅಲ್ಲಿಯೂ ತಮ್ಮ ದೊಡ್ಡ ರಾಜ್ಯಗಳನ್ನು ಸ್ಥಾಪಿಸಿದರು. ಉತ್ತರ ಹಿಂದುಸ್ಥಾನವೆಲ್ಲ ಮೆಲ್ಲಮೆಲ್ಲನೆ ಆರ್ಯರಿಂದ ತುಂಬಿ ಆರ್ಯಾವರ್ತವೆನಿಸಿತು. ದ್ರಾವಿಡರು ಹೆಚ್ಚಾಗಿ ದಕ್ಷಿಣ ಹಿಂದೂದೇಶದಲ್ಲಿಯೇ

ಒಳಗೊಂಡುದರಿಂದ, ಈಗ ಹೆಚ್ಚಾಗಿ ದಕ್ಷಿಣ ಹಿಂದೂದೇಶದ ಜನರು ದ್ರಾವಿಡರ ವಂಶದವರೆನ್ನಬಹುದು. ಇಂದಿಗೂ ಅವರ ಭಾಷೆಗಳೂ, ಹಲವು ಪದ್ಧತಿಗಳೂ ಪ್ರಾಚೀನ ದ್ರಾವಿಡರವಾಗಿವೆ.

ಆರ್ಯಾವರ್ತ

ಆರ್ಯರ ರಾಜ್ಯಗಳು ಗಂಗಾ ಯಮುನಾ ತೀರಗಳಲ್ಲಿ ಬೆಳೆಯುತ್ತಾ ಬಂದುವು. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ಹಸ್ತಿನಾವತಿ, ಪಾಂಚಾಲ, ಕೋಸಲ, ವಿದೇಹ, ಅಂಗ, ವಂಗ ಮೊದಲಾದುವುಗಳು. ಈ ರಾಜ್ಯಗಳ ಅರಸರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವುದಕ್ಕೋಸ್ಕರ ಪರಸ್ಪರ ಕಾದಾಡುತಿದ್ದರು. ಕೆಲವು ಅರಸರು ತಾವು ಚಕ್ರವರ್ತಿಗಳಾಗಬೇಕೆಂದು ರಾಜಸೂಯ, ಅಶ್ವಮೇಧ ಮೊದಲಾದ ಮಹಾ ಯಾಗಗಳನ್ನು ಮಾಡುತಿದ್ದರು. ಆಗಿನ ಕಾಲದ ಯಜ್ಞಗಳಾದರೋ ಬಲು ಪ್ರಯಾಸದಿಂದಲೂ ವಿಜೃಂಭಣೆಯಿಂದಲೂ ನಡೆಯುತಿದ್ದುವು. ಯಜ್ಞಕಾಲದಲ್ಲಿ ಪಠಿಸಬೇಕಾಗಿದ್ದ ಮಂತ್ರಗಳನ್ನೂ ಯಜ್ಞಮಾಡುವ ರೀತಿಗಳನ್ನೂ ಕೆಲವರೆ ಮಾತ್ರ ಕಲಿತುಕೊಂಡಿದ್ದರು. ಅವರು ಬ್ರಾಹ್ಮಣರೆಂದು ಕರೆಯಲ್ಪಡತೊಡಗಿದರು. ಅವರು ಮತಸಂಬಂಧವಾದ ಮತ್ತು ಧಾರ್ಮಿಕ ವಿಷಯಗಳನ್ನೆಲ್ಲ ತಿಳಿದ ಜ್ಞಾನಿಗಳಾಗಿದ್ದರು. ಯುದ್ಧವಿದ್ಯೆಯನ್ನು ಕಲಿತು ರಾಜ್ಯಭಾರದಲ್ಲಿ ಕೈಹಾಕುತ್ತಿದ್ದ ಜನರು ಕ್ಷತ್ರಿಯರೆನಿಸಿಕೊಂಡರು. ವ್ಯಾಪಾರ, ವ್ಯವಸಾಯ ವೃತ್ತಿಗಳನ್ನವಲಂಬಿಸಿದವರು ವೈಶ್ಯರೆಂದೂ, ಇತರ ಕೆಲಸಗಳನ್ನು ಮಾಡಿ ಜೀವಿಸುವ ಉಳಿದ ಜನರು ಶೂದ್ರರೆಂದೂ ಅನಿಸಿದರು. ಹೀಗೆ ಬೇರೆ ಬೇರೆ ವರ್ಣಗಳು ತಲೆದೋರಿದುವು. ಕಾಲಕ್ರಮೇಣ ಈ ವರ್ಣಗಳೊಳಗೆ ಹಲವು ಜಾತಿಗಳಾಗಿ, ಈಗಲಾದರೋ ಹಿಂದೂದೇಶದಲ್ಲಿ ಅಸಂಖ್ಯಾತ ಜಾತಿಗಳು ಇರುತ್ತವೆ.

ಸಾಹಿತ್ಯ

ಆ ಕಾಲದಲ್ಲಿ ವೈದಿಕ ಸಾಹಿತ್ಯವೂ ಬೆಳೆಯುತ್ತ ಬಂದಿತು. ಯಜ್ಞಗಳು ಹೆಚ್ಚಿದಂತೆ ಮಂತ್ರಗಳೂ ಹೆಚ್ಚಿದುವು. ಈ ಮಂತ್ರಗಳೆಲ್ಲವೂ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳೆಂದು ವಿಂಗಡಿಸಲ್ಪಟ್ಟುವು. ಕೆಲವು ಜ್ಞಾನಿಗಳು ವೇದ ಮಂತ್ರಗಳ ಗೂಢಾರ್ಥವನ್ನು ತಿಳಿದು ಅವುಗಳ ತತ್ವಗಳನ್ನು ವಿವರಿಸಿ ಉಪನಿಷತ್ತುಗಳೆಂಬ ಗ್ರಂಥಗಳನ್ನು ಬರೆ

ದರು. ಹಿಂದೂಮತದ ಉಚ್ಚತತ್ತ್ವಗಳೆಲ್ಲವೂ ಈ ಉಪನಿಷತ್ತುಗಳಲ್ಲಿ ಅಡಕವಾಗಿವೆ. ಆತ್ಮ, ಪರಮಾತ್ಮ, ಜನ್ಮ ಮುಂತಾದ ಅಗಾಧ ವಿಷಯಗಳನ್ನು ಈ ಗ್ರಂಥಗಳಲ್ಲಿ ಗುರುಶಿಷ್ಯರೊಳಗಿನ ಸಂವಾದದ ರೂಪದಲ್ಲಿ ಕೊಟ್ಟಿರುತ್ತಾರೆ.

ಆಗಿನ ಕಾಲದ ರಾಜರೊಳಗೆ ಹುಟ್ಟಿದ ವಾದವಿವಾದಗಳನ್ನೂ ಯುದ್ಧಗಳನ್ನೂ ವಿವರಿಸಿ, ಅದರೊಡನೆ ಆಗಿನ ಸಾಮಾಜಿಕ ಜೀವನದ ಚಿತ್ರವನ್ನು ನಮ್ಮ ಮುಂದಿಡುವ ರಾಮಾಯಣ, ಮಹಾಭಾರತಗಳೆಂಬ ಗ್ರಂಥಗಳು ಈಗಲೂ ಕೂಡ ಜನರ ಪ್ರೀತ್ಯಾದರಗಳಿಗೆ ಪಾತ್ರವಾಗಿವೆ. ರಾಮಾಯಣದೊಳಗಿನ ಶ್ರೀ ರಾಮಚಂದ್ರ ಮತ್ತು ಸೀತಾದೇವಿಯ ಕತೆಯೂ, ಮಹಾಭಾರತದೊಳಗಿನ ಕುರುಕ್ಷೇತ್ರ ಯುದ್ಧ ವಿಷಯವೂ ಚಿಕ್ಕ ಬಾಲಕರಿಗೆ ಕೂಡ ತಿಳಿದಿದೆ. ಅವುಗಳಲ್ಲಿ ಹಿಂದೂಮತದ ಎಷ್ಟೋ ತತ್ವಗಳು ಕತೆಗಳ ರೂಪದಲ್ಲಿ ವರ್ಣಿಸಲ್ಪಟ್ಟಿವೆ. ಜನರು ಯಾವ ರೀತಿಯಲ್ಲಿ ಜೀವಿಸಬೇಕು, ಎಂತಹ ಧರ್ಮವನ್ನು ಅನುಸರಿಸಬೇಕು ಎಂಬುದನ್ನು ಮನುಧರ್ಮಶಾಸ್ತ್ರ ಮುಂತಾದ ಧರ್ಮಶಾಸ್ತ್ರಗಳಲ್ಲಿಯೂ, ಗೃಹ್ಯಸೂತ್ರ ಮುಂತಾದ ಸೂತ್ರಗಳಲ್ಲಿಯೂ ವಿವರವಾಗಿ ಉಲ್ಲೇಖಿಸಿರುತ್ತದೆ. ಇವೆಲ್ಲವುಗಳನ್ನು ಓದಿದರೆ ಎರಡು ಸಾವಿರ ವರ್ಷಗಳ ಹಿಂದೆ ಹಿಂದುಸ್ಥಾನದಲ್ಲಿ ವಾಸಿಸುತ್ತಿದ್ದ ಜನರು ಎಷ್ಟು ನಾಗರಿಕರಾಗಿದ್ದರೆಂದೂ ಅವರು ತಮ್ಮ ಪಾರಮಾರ್ಥಿಕ ಜ್ಞಾನವನ್ನು ಎಷ್ಟು ಬೆಳೆಯಿಸಿಕೊಂಡಿದ್ದರೆಂದೂ ನಮಗೆ ಖಚಿತವಾಗುವುದು.

---

2. ಹೊಸ ಮತಗಳು

ಸಾಮಾನ್ಯವಾಗಿ ಹಿಂದೂದೇಶದ ಚರಿತ್ರೆಯನ್ನು ಕ್ರಿಸ್ತ ಪೂರ್ವ ಆರನೆಯ ಶತಮಾನದ ಆದಿಯಿಂದ ಆರಂಭಿಸುತ್ತಾರೆ. ಅಷ್ಟರೊಳಗೆ

ಸನ್ಯಾಸಿಗಳು

ಆರ್ಯ ಅನಾರ್ಯರೊಳಗೆ ಸಂಪರ್ಕವು ಬೆಳೆದು ಅವರ ಆಚಾರವಿಚಾರಗಳೂ, ಕ್ರಮಕಟ್ಟಲೆಗಳೂ ಒಟ್ಟಿಗೆ ಕಲೆತು ಹೋಗಿದ್ದುವು. ಆರ್ಯ ಧರ್ಮದ ಮೂಲತತ್ವಗಳೂ ಹಿಂದೂದೇಶದಲ್ಲೆಲ್ಲ ಪ್ರಚಾರವಾಗಿದ್ದುವು. ಆರ್ಯರ ದೇವತೆ

ಗಳಲ್ಲಿ ನಂಬುಗೆ, ಯಜ್ಞಗಳು, ಜಾತಿ ಭೇದಗಳು, ಆರ್ಯರ ಜೀವನ ಕ್ರಮಗಳು ಸರ್ವಸಾಧಾರಣವಾಗಿ ಇಡಿ ದೇಶವಲ್ಲಿ ವ್ಯಾಪಿಸಿದ್ದುವು. ಕೆಲವು ಜ್ಞಾನಿಗಳು ಸಂಸಾರಸುಖದಲ್ಲಿ ಹುರುಳಿಲ್ಲವೆಂದು ಬಗೆದು ಅರಣ್ಯಗಳಿಗೆ ಹೋಗಿ ಮನುಷ್ಯ ಜೀವನದಲ್ಲಿರುವ ಗೂಢಾರ್ಥವನ್ನು ತಿಳಿಯಲೋಸುಗ ತಪಸ್ಸುಮಾಡಿ ತಮ್ಮ ಅನುಭವದಿಂದ ದೊರೆತ ಅಭಿಪ್ರಾಯಗಳನ್ನು ಜನರಿಗೆ ಹೇಳುತಿದ್ದರು. ಇದರಿಂದಾಗಿ ಪಾರಮಾರ್ಥಿಕ ಜ್ಞಾನವು ಬೆಳೆಯಿತು. ಅನೇಕ ಸನ್ಯಾಸಿಗಳು ಅರಣ್ಯಗಳಲ್ಲಿಯೆ ಇದ್ದು ಜ್ಞಾನಾರ್ಜನೆಯಲ್ಲಿಯೆ ಮಗ್ನರಾಗುತಿದ್ದರು. ಇವರಲ್ಲಿ ಇಬ್ಬರು ಸನ್ಯಾಸಿಗಳ ಬೋಧನೆಯಿಂದ ದೇಶದ ಮೇಲೆ ಅತ್ಯಧಿಕ ಪರಿಣಾಮವುಂಟಾಯಿತೆನ್ನಬಹುದು. ಅವರೇ ಮಹಾವೀರನು ಮತ್ತು ಗೌತಮ ಬುದ್ಧನು.



ಮಹಾವೀರ

ಜೈನಮತ: — ಮಹಾವೀರನು ಅಂಗದೇಶದ ವೈಸಾಲಿಯಲ್ಲಿ ರಾಜಕುಮಾರನಾಗಿ ಹುಟ್ಟಿದನು. ಅವನು ಚಿಕ್ಕಂದಿನಲ್ಲಿಯೆ ಲೌಕಿಕ ವಿಚಾರಗಳಲ್ಲಿ ತನಗೆ ಅಭಿರುಚಿಯಿಲ್ಲದಿರುವುದನ್ನೇ ತೋರಿಸುತ್ತ, ಮೂವತ್ತನೆ ವಯಸ್ಸಿನಲ್ಲಿ ಅರಮನೆಯನ್ನೂ ರಾಜ್ಯವನ್ನೂ ತೊರೆದು ಅರಣ್ಯಕ್ಕೆ ಹೋಗಿ ಪಾರ್ಶ್ವನಾಥನೆಂಬ ಸನ್ಯಾಸಿಯು ಆರಂಭಿಸಿದ ಸನ್ಯಾಸಪಂಥವನ್ನು ಸೇರಿ ಬಹಳ ಕಠಿಣವಾದ ತಪಸ್ಸನ್ನು ಮಾಡಿದನು. ಈ ರೀತಿ ಅಸಹನೀಯವಾದ ಕಷ್ಟಗಳನ್ನಾದರೂ ಲೆಕ್ಕಿಸದೆ, ಇಂದ್ರಿಯಗಳನ್ನು ನಿಗ್ರಹಿಸಿ ಕೈವಲ್ಯವನ್ನು ಪಡೆದು ಜಿನನೆನಿಸಿಕೊಂಡನು. ಹಲವು ವರ್ಷ

ಮಹಾವೀರ
ಕ್ರಿ ಪೂ. 600–527

ಗಳ ವರೆಗೆ ಅವನು ಅರಣ್ಯದಲ್ಲಿ ಅನ್ನಬಟ್ಟೆಗಳ ಗೊಡವೆಯಿಲ್ಲದೆ ದಿಗಂಬರನಾಗಿ ಅಲೆದನು. ಕೊನೆಗೆ ಕಾಡನ್ನು ಬಿಟ್ಟು ನಾಡಿಗೆ ಬಂದು ತಾನು ಕಂಡುಕೊಂಡ ತತ್ವಗಳನ್ನು ಜನರಿಗೆ ಬೋಧಿಸುತ್ತಾ ಬಂದನು. ಅವನ ತತ್ವಗಳನ್ನು ಅನೇಕರು ಕೈಕೊಂಡರು. ಎಷ್ಟೋ ಹೆಂಗುಸರೂ ಗಂಡಸರೂ ಸಂಸಾರವನ್ನು ತ್ಯಜಿಸಿ ಸನ್ಯಾಸಿಗಳಾದರು. ಅವನ ಸನ್ಯಾಸ ಪಂಥವನ್ನು ಸೇರಿದವರು ತೀಕ್ಷ್ಣವಾದ ಬ್ರಹ್ಮಚರ್ಯವನ್ನೂ ಸ್ವಾರ್ಥ ತ್ಯಾಗವನ್ನು ಕೈಕೊಂಡು ಬಲು ಕಠಿಣವಾದ ನಿಯಮಗಳಿಗೆ ಬದ್ಧರಾಗಿ ನಡೆದರು. ಇಂದ್ರಿಯ ನಿಗ್ರಹವೆ ಅವರ ಮುಖ್ಯ ಧ್ಯೇಯ. ಅಹಿಂಸಾ ಪರಮೋಧರ್ಮವೆ ಅವರ ಮುಖ್ಯ ತತ್ವ. ಇತರ ಅನೇಕರು ಸನ್ಯಾಸಿಗಳಾಗದೆ ಅವನ ಧರ್ಮಕ್ಕೆ ಸೇರಿ ಜೈನರಾದರು. ಇವರು ಅಹಿಂಸಾ ತತ್ವವನ್ನೇ ಆಚರಿಸುತ್ತಾರೆ. ಜೈನರು ಕೈವಲ್ಯವನ್ನು ಪಡೆದ ಮಹಾವೀರನಂತಹ ಇಪ್ಪತ್ತನಾಲ್ಕು ತೀರ್ಥಂಕರರನ್ನು ಆರಾಧಿಸುತ್ತಾರೆ.

ಜೈನಮತವು ಮೊದಲು ಮಗಧದಲ್ಲಿಯೆ ಪ್ರಚಾರದಲ್ಲಿದ್ದಿತು. ಮೆಲ್ಲಮೆಲ್ಲನೆ ಅದು ಹಿಂದೂದೇಶದ ಇತರ ಭಾಗಗಳಲ್ಲಿಯೂ ಹಬ್ಬಿತು. ಮಹಾವೀರನ ನಿರ್ವಾಣದ ತರುವಾಯ ಇತರ ಜೈನಯತಿಗಳು ಅವನ ತತ್ವಗಳನ್ನು ಜನರಿಗೆ ಬೋಧಿಸುತ್ತಾ ಬಂದುದರಿಂದ ಜೈನಮತವು ಇಂದಿಗೂ ಹಿಂದೂದೇಶದಲ್ಲಿ ಉಳಿದಿದೆ. ಹಿಂದೂದೇಶದ ಕೆಲವು ಅರಸರೂ ಈ ಮತವನ್ನು ಅಂಗೀಕರಿಸಿ ಅದನ್ನು ಪ್ರೋತ್ಸಾಹಿಸಿ ಬೆಳೆಸಿದರು. ಹೀಗಾಗಿ ಜೈನ ಮೂರ್ತಿಗಳನ್ನೂ ಬಸದಿಗಳನ್ನೂ ನಾವು ಹಿಂದೂದೇಶದಲ್ಲಿ ಎಲ್ಲೆಲ್ಲೂ ನೋಡಬಹುದು. ಜೈನಮತವು ಮುಖ್ಯವಾಗಿ ಗುಜರಾಥ, ಮೈಸೂರುಗಳಲ್ಲಿ ಇನ್ನೂ ಪ್ರಬಲವಾಗಿಯೆ ಇದೆ.

ಬೌದ್ಧಮತ:—ಗೌತಮ ಬುದ್ಧನು ಬೌದ್ಧಮತ ಸಂಸ್ಥಾಪಕನು. ಅವನು ಕಪಿಲವಸ್ತುವೆಂಬ ಊರಿನ ಅರಸುಮಗನಾಗಿದ್ದನು.

ಬುದ್ಧನು
ಕ್ರಿ. ಪೂ. 581–501

ಚಿಕ್ಕಂದಿನಲ್ಲಿಯೆ ಅವನು ಸಾಧುಸ್ವಭಾವದವನೂ ಭೂತದಯಾಪರನೂ ಆಗಿದ್ದನು. ಅರಮನೆಯಲ್ಲಿ ಸಕಲ ಸುಖಭೋಗಗಳನ್ನು ಅನುಭವಿಸಿ ಪ್ರಾಯ ಭರಿತನಾದ ಮೇಲೆ ಯಶೋಧರೆ ಎಂಬವಳನ್ನು ಮದುವೆಯಾದನು. ಅವರಿಗೆ ರಾಹುಲನೆಂಬ ಒಂದು ಮಗುವೂ ಹುಟ್ಟಿತು. ಆದರೆ ತಾನು

ಅನುಭವಿಸುತ್ತಿದ್ದ ಈ ಸುಖಗಳ ನಡುವೆ, ಇತರ ಜೀವಿಗಳು ತನ್ನಂತೆ ಸುಖಿಸುವುವೆ ಎಂಬ ಸಂಶಯವು ಅವನನ್ನು ಆಗಾಗ ಪೀಡಿಸುತ್ತಿದ್ದಿತು. ಒಂದು ದಿನ ಆತನು ಕಪಿಲವಸ್ತು ಪಟ್ಟಣದಲ್ಲಿ ತಿರುಗುತ್ತಿದ್ದಾಗ ಜನರ ಜೀವನದಲ್ಲಿ ತುಂಬಿರುವ ದುಃಖಗಳನ್ನು ಕಂಡು ಮರುಗಿದನು. ಆ ದಿನ ವೈಶಾಖ ಹುಣ್ಣಿಮೆಯ ರಾತ್ರಿ. ಜನರ ದುಃಖನಿವಾರಣೋಪಾಯವನ್ನು ಕಂಡುಹಿಡಿಯಬೇಕೆಂದು ನಿಶ್ಚಯಿಸಿ ಯಾರಿಗೂ ತಿಳಿಸದೆ ಒಬ್ಬಂಟಿಗನಾಗಿ ಅರಣ್ಯಕ್ಕೆ ಹೋದನು.

ಬೌದ್ಧತತ್ತ್ವ

ಅಲ್ಲಿ ಏಳು ವರ್ಷಗಳ ವರೆಗೆ ಸನ್ಯಾಸಿಯಾಗಿ ಅಲೆದನು; ತಪಸ್ಸುಗೈದನು; ವೇದಶಾಸ್ತ್ರಗಳನ್ನೆಲ್ಲಾ ಓದಿದನು. ಕೊನೆಗೆ ಗಯಾ ಎಂಬ ಊರಿನ ಅರಣ್ಯದಲ್ಲಿ ಒಂದು ಅಶ್ವತ್ಥದ ಮರದಡಿಯಲ್ಲಿ ಧ್ಯಾನಮಗ್ನನಾಗಿ ಕುಳಿತಿದ್ದಾಗ ಅವನಿಗೆ ಜ್ಞಾನೋದಯವಾಯಿತು. ಅಂದಿನಿಂದ ಅವನು ಬುದ್ಧನಾದನು. ಸಂತೋಷದಿಂದ ಆತನು ಕಾಡನ್ನು ಬಿಟ್ಟು ಕಾಶಿಗೆ ಬಂದು ಸಾರನಾಥದಲ್ಲಿ ತನ್ನ ತತ್ತ್ವಗಳನ್ನು ವಿವರವಾಗಿ ಜನರಿಗೆ ಬೋಧಿಸಿದನು. ಆ ಮೇಲೆ ತನ್ನ ಉಳಿದ ಜೀವಮಾನವನ್ನು ತನ್ನ ಮತಪ್ರಚಾರದಲ್ಲಿಯೆ ಕಳೆದನು. ಊರಿಂದೂರು ಅಲೆದನು; ದೈಹಿಕ ಸುಖಗಳ ಗೊಡವೆಯೆ ಅವನಿಗಿರಲಿಲ್ಲ. ಅನೇಕರು ಅವನ ತತ್ತ್ವಗಳನ್ನು ಸ್ವೀಕರಿಸಿದರು "ಜನನಮರಣಗಳ ಬಂಧನದಿಂದ ಮುಕ್ತಿ ಹೊಂದುವುದೆ ಜೀವನದ ಮುಖ್ಯ ಧ್ಯೇಯ. ಅದನ್ನು ಕಠಿಣವಾದ ತಪಸ್ಸಿನಿಂದಾಗಲಿ, ಲೌಕಿಕ ಸುಖ ಭೋಗಗಳಿಂದಾಗಲಿ ದೊರಕಿಸಿಕೊಳ್ಳಲಾಗುವುದಿಲ್ಲ. ಪರೋಪಕಾರ, ಅಹಿಂಸೆ, ದಾನಧರ್ಮ, ಸ್ವಾರ್ಥತ್ಯಾಗ ಮುಂತಾದ



ಧ್ಯಾನಮಗ್ನನಾದ ಬುದ್ಧನು

(Copyright reserved by the Archaeological Survey of India)

ಸದ್ಗುಣಗಳಿಂದಲೆ ಮುಕ್ತಿಯು ಲಭಿಸುವುದು. ಪರರಿಗೆ ಕೇಡನ್ನು ಮಾಡದಿರುವುದೆ ನಮ್ಮ ಮುಖ್ಯ ಧರ್ಮ" ಎಂದು ಮುಂತಾಗಿ ಆತನು ಬೋಧಿಸಿದನು.



ಬುದ್ಧನ ನಿರ್ವಾಣ

ಬೌದ್ಧಸಂಘ

ಬೌದ್ಧಧರ್ಮದಲ್ಲಿ ಜಾತಿಭೇದಗಳಿಲ್ಲ. ಅವರು ಯಜ್ಞಾದಿಗಳನ್ನು ದೇವಪೂಜೆಯನ್ನು ಮಾಡುವುದಿಲ್ಲ. ಒಳ್ಳೆ ಜೀವನವನ್ನು ಕೈಕೊಳ್ಳುವುದೇ ಅವರ ಮುಖ್ಯ ತತ್ವವಾಗಿದ್ದಿತು. ಬುದ್ಧನ ತತ್ವಗಳನ್ನು ಸಂಪೂರ್ಣ ಪರಿಪಾಲಿಸುವುದಕ್ಕಾಗಿ ಅನೇಕರು ಸನ್ಯಾಸಿಗಳಾದರು. ಅವರು ಸಂಸಾರವನ್ನು ತೊರೆದು ಮಠಗಳನ್ನು ಕಟ್ಟಿ ಅಲ್ಲಿ ನಿಂತು ಬುದ್ಧನು ಬೋಧಿಸಿದ ತತ್ವಗಳಿಗನುಸಾರವಾಗಿ ಜೀವಿಸಿ ಬೌದ್ಧಧರ್ಮವನ್ನು ಪ್ರಚಾರಕ್ಕೆ ತಂದರು. ಈ ಬೌದ್ಧ ಸನ್ಯಾಸಿ ಸನ್ಯಾಸಿನಿಗಳ ವರ್ಗವನ್ನು ಬೌದ್ಧ ಸಂಘವೆಂದು ಕರೆಯುತ್ತಾರೆ.

ಬುದ್ಧಂ ಶರಣಂ ಗಚ್ಛಾಮಿ ।
ಧರ್ಮಂ ಶರಣಂ ಗಚ್ಛಾಮಿ ।
ಸಂಘಂ ಶರಣಂ ಗಚ್ಛಾಮಿ ।

ಎಂಬುದೇ ಅವರ ಪ್ರಮಾಣವು —

ಬಹುಬೇಗನೆ ಬೌದ್ಧ ಮತವು ಹಿಂದುಸ್ಥಾನದಲ್ಲಿ ಪಸರಿಸಿತು. ಆಗ ಗಂಗಾನದಿಯ ಬಯಲು ಪ್ರದೇಶದಲ್ಲಿ ಹಲವು ರಾಜ್ಯಗಳಿದ್ದುವು. ಕೋಸಲ, ಕಾಶಿ, ಮಗಧ, ವೈಸಾಲಿ, ಅಂಗ, ವಂಗ, ಮೊದಲಾದುವುಗಳೆ ಮುಖ್ಯವಾಗಿದ್ದುವು. ಇವುಗಳಲ್ಲಿ ಮಗಧರಾಜ್ಯದ ಅರಸನೇ ಶ್ರೇಷ್ಠನಾಗಿದ್ದು ಅವನು ಕೋಸಲ, ಕಾಶಿ, ಅಂಗ, ವೈಸಾಲಿ ರಾಜ್ಯಗಳನ್ನು ಜಯಿಸಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ್ದನು. ಬುದ್ಧನ ಕಾಲದಲ್ಲಿ ಮಗಧದಲ್ಲಿ ಬಿಂಬಿಸಾರನು ಆಳುತಿದ್ದನು. ಅವನ ತರುವಾಯ ಅವನ ಮಗನಾದ ಅಜಾತಶತ್ರುವು ಪಟ್ಟಕ್ಕೆ ಬಂದನು. ಅವರಿಬ್ಬರಿಗೂ ಬುದ್ಧನ ಮೇಲೆ ತುಂಬಾ ಗೌರವವಿದ್ದುದರಿಂದ ಬೌದ್ಧ ಮತವನ್ನು ಪ್ರೋತ್ಸಾಹಿಸಿದರು. ಹೀಗಾಗಿ ಬೌದ್ಧಮತವು ಬಲು ಬೇಗನೆ ಪ್ರಚಾರಕ್ಕೆ ಬಂದಿತು. ಬುದ್ಧನು ತಾನು ಊರೂರುಗಳಲ್ಲಿ ಅಲೆದುದಲ್ಲದೆ ತನ್ನ ಶಿಷ್ಯರನ್ನೂ ಮತಪ್ರಚಾರಕ್ಕಾಗಿ ನಾಲ್ದೆಸೆಗಳಿಗೂ ಕಳುಹಿಸಿದನು. ಬುದ್ಧನು ತನ್ನ ಎಂಭತ್ತನೆ ವರ್ಷ ಪ್ರಾಯದಲ್ಲಿ ಕುಶಿನಗರವೆಂಬ ಗ್ರಾಮದಲ್ಲಿ ನಿರ್ವಾಣ ಹೊಂದಿದನು. ಆಗ ಅವನ ಪ್ರಮುಖ ಶಿಷ್ಯರು ಒಂದು ಸಭೆ ಸೇರಿ ಬುದ್ಧನ ಹೇಳಿಕೆಗಳನ್ನೆಲ್ಲಾ ಬರೆದಿಟ್ಟರು.

ಪ್ರಚಾರ

---

3. ಮೌರ್ಯ ಸಾಮ್ರಾಜ್ಯ

ಗ್ರೀಕರು. ಗಂಗಾನದಿಯ ಬಯಲಲ್ಲಿದ್ದಂತೆ ಸಿಂಧೂನದಿಯ ಬಯಲಲ್ಲಿಯೂ ಅನೇಕ ಹಿಂದೂ ರಾಜ್ಯಗಳಿದ್ದುವು. ಅವುಗಳೊಳಗೆ ಯಾವಾಗಲೂ ಯುದ್ಧಗಳಾಗುತಿದ್ದುದರಿಂದ ಅವುಗಳು ಬಲಹೀನವಾಗಿಯೇ ಇದ್ದುವು. ಹೀಗಾಗಿ ಹಿಂದೂದೇಶದ ಹೊರ ರಾಜ್ಯಗಳಲ್ಲಿ ರಾಜ್ಯಾಪೇಕ್ಷಿಯಾದ ಅರಸನು ಇದ್ದಿದ್ದರೆ ಸಿಂಧೂ ನದಿಯ ಪ್ರದೇಶವನ್ನು ಜಯಿಸಲು ಅವನಿಗೆ ಅಸಾಧ್ಯವಾಗುತಿದ್ದಿಲ್ಲ. ಕ್ರಿ. ಪೂ. 5ನೇ ಶತಮಾನದಲ್ಲಿ ಪರ್ಶಿಯಾ ಸಾಮ್ರಾಜ್ಯವು ಪಶ್ಚಿಮ ಏಷಿಯದಲ್ಲೆಲ್ಲಾ ಹೆಸರುಗೊಂಡಿದ್ದಿತು. ಅದರ ಸಮ್ರಾಟನಾದ ಡೇರಿಯಸನು ಹಿಂದುಸ್ಥಾನದಲ್ಲಿ ಸಿಂಧೂನದಿಯವರೆಗಿನ

ಅಲೆಕ್ಸಾಂಡರನು

ಪ್ರದೇಶಗಳನ್ನು ಜಯಿಸಿ ತನ್ನ ವಿಸ್ತಾರವಾದ ಸಾಮ್ರಾಜ್ಯಕ್ಕೆ ಸೇರಿಸಿ ದನು. ಪರ್ಷಿಯಾ ಸಾಮ್ರಾಜ್ಯವು ಕ್ರಿ. ಪೂ. 334ರಲ್ಲಿ ಗ್ರೀಸ್ ದೇಶದ ಅರಸನಾದ ಅಲೆಕ್ಸಾಂಡರ ಎಂಬವನ ವಶವಾಯಿತು. ಅವನು ಒಳ್ಳೆಯ ಯೋಧನೂ, ಧೀರನೂ ರಾಜ್ಯವನ್ನು ವಿಸ್ತರಿಸಬೇಕೆಂಬ ಕಾಂಕ್ಷೆಯುಳ್ಳ ವನೂ ಆಗಿದ್ದನು. ಕ್ರಿ. ಪೂ. 326ರಲ್ಲಿ ಅಲೆಕ್ಸಾಂಡರನು ಸೈನ್ಯ ಸಮೇತ ನಾಗಿ ಖೈಬರ್ ಕಣಿವೆಯ ಹಾದಿಯಾಗಿ ಹಿಂದೂದೇಶಕ್ಕೆ ಬಂದನು. ಪಂಜಾಬದ ಝೀಲಮ್ ನದಿಯ ಪ್ರದೇಶದಲ್ಲಿ ಚಿಕ್ಕದೊಂದು ರಾಜ್ಯವನ್ನು ಆಳುತ್ತಿದ್ದ ಧೀರನಾದ ಪೋರಸನು ಅಲೆಕ್ಸಾಂಡರನನ್ನು ಎದುರಿಸಿ ಸೋತು ಹೋದನು. ಆದರೆ ಅಲೆಕ್ಸಾಂಡರನು ರಾಜ್ಯವನ್ನು ಅವನಿಗೆ ಮರಳಿ ಕೊಟ್ಟು ಮುಂದುವರಿದು ಬಿಯಸ್ ನದಿಯ ತನಕ ಹೋದನು. ಅವನಿಗೆ ಇನ್ನೂ ಮುಂದರಿದು ಹೋಗಿ ಪ್ರಬಲವಾದ ಮಗಧ ರಾಜ್ಯವನ್ನು ಜಯಿಸಬೇಕೆಂಬ ಕುತೂಹಲವಿದ್ದಿತು. ಮಗಧದಲ್ಲಿ ಬಿಂಬಿಸಾರನ ವಂಶ ದವರನ್ನು ನಿರ್ಮೂಲಗೊಳಿಸಿದ ನಂದರ ಕುಟುಂಬದವರು ರಾಜ್ಯವನ್ನು ಆಳುತ್ತಿದ್ದರು. ಅವರೊಡನೆ ಅಪರಿಮಿತ ಸೈನ್ಯವಿದ್ದಿತು; ಆನೆಗಳಿದ್ದವು; ಅಪಾರ ಸಂಪತ್ತಿದ್ದಿತು. ಜನರೆಲ್ಲರೂ ಅವರಿಗೆ ಹೆದರುತ್ತಿದ್ದರು.


ಆದರೆ ಅಲೆಕ್ಸಾಂಡರನು ಬಿಯಸ್ ನದಿಯನ್ನು ದಾಟಲಿಲ್ಲ. ಅವನ ಗ್ರೀಕ್ ಸೈನಿಕರು ತಮಗೆ ಊರಿಗೆ ಮರಳಲು ಆಸೆಯಾಗಿದೆ ಯೆಂದು ಹಟಹಿಡಿದು ಮುಂದುವರಿಯಲು ಒಪ್ಪಲಿಲ್ಲ. ಅಲೆಕ್ಸಾಂಡ ರನು ನಿರಾಶನಾಗಿ ಹಿಂದುಸ್ಥಾನದಿಂದ ಮರಳಬೇಕಾಯಿತು. ಇಲ್ಲಿಯ ರಾಜ್ಯದ ವ್ಯವಸ್ಥೆಗಾಗಿ ಕೆಲವು ಗ್ರೀಕ್ ಸೈನಿಕರನ್ನು ಇಟ್ಟು ಸಿಂಧೂ ನದಿಯನ್ನನುಸರಿಸಿ, ಕರಾವಳಿಗೆ ಬಂದು ಅಲ್ಲಿಂದ ಆತನು ಬೆಬಿಲೋನಿಗೆ ಪ್ರಯಾಣ ಬೆಳೆಸಿದನು. ಅಫಘಾನಿಸ್ಥಾನದ ಬಾಲ್ಕ್ ಪ್ರಾಂತದಲ್ಲಿಯೂ ಅನೇಕ ಗ್ರೀಕರು ನೆಲೆಸಿಂತರು. ಅವರನ್ನು ಯವನರೆಂದೂ ಅವರು ವಾಸಮಾಡಿದ ದೇಶವನ್ನು ಬೆಕ್ಟ್ರಿಯಾವೆಂದೂ ಕರೆಯತೊಡಗಿದರು. ಅಲೆಕ್ಸಾಂಡರನು ಬೆಬಿಲೋನಿಗೆ ಮುಟ್ಟಿದ ಒಂದೆ ವರ್ಷದಲ್ಲಿ ತನ್ನ 32ನೇ ವರ್ಷ ಪ್ರಾಯದಲ್ಲಿ ಸತ್ತುಹೋದನು. ಇಷ್ಟು ಚಿಕ್ಕ ವಯಸ್ಸಿ ನಲ್ಲಿಯೆ ನೈಲ್ ನದಿಯಿಂದ ಡೆನ್ಯೂಬ್ ಸಿಂಧೂ ನದಿಗಳ ವರೆಗಿನ ಪ್ರದೇಶಗಳನ್ನು ಜಯಿಸಿ ಹೆಸರಾದ ವೀರನವನು. ಅವನ ಮರಣಾ

ನಂತರ ಅವನ ಸಾಮ್ರಾಜ್ಯವನ್ನು ಅವನ ಮೂವರು ಸೇನಾಧಿಪತಿಗಳು ಹಂಚಿಕೊಂಡರು. ಪೂರ್ವ ಪ್ರದೇಶವೆಲ್ಲ ಸೆಲ್ಯೂಕಸ ಎಂಬ ಪ್ರಬಲ ಸರದಾರನಿಗೆ ದೊರಕಿತು.

ಚಂದ್ರಗುಪ್ತನು (321-297)—ಅಲೆಕ್ಸಾಂಡರನು ಸತ್ತ ವರ್ತಮಾನವು ಪಂಜಾಬಿಗೆ ಮುಟ್ಟಿದೊಡನೆ ಅಲ್ಲಿಯ ಜನರು ದಂಗೆಯೆದ್ದು

ರಾಜ್ಯ ಸ್ಥಾಪನೆ ಕ್ರಿ. ಪೂ. 321

ಗ್ರೀಕರನ್ನು ಸೋಲಿಸಿ ಸ್ವತಂತ್ರರಾದರು. ಚಂದ್ರಗುಪ್ತ ಮೌರ್ಯನೆಂಬ ವೀರನೆ ಆ ಪ್ರದೇಶದ ಅರಸನಾದನು. ಈತನು ನಂದರ ವಂಶದವನಾಗಿದ್ದರೂ ಅವನ ತಾಯಿಯಾದ ಮುರಾದೇವಿಯು ಕೀಳುಜಾತಿಯವಳಾಗಿದ್ದಳು. ಅವನನ್ನು ಏನೊ ಕಾರಣದಿಂದ ನಂದರು ತಮ್ಮ ರಾಜ್ಯದಿಂದ ಓಡಿಸಿದ್ದರು. ಅವನೂ, ಅವನ ಮಿತ್ರನೂ ಸಹಾಯಕನೂ ಆದ ಚಾಣಿಕ್ಯನೆಂಬ ಬ್ರಾಹ್ಮಣನೂ, ಪಂಜಾಬಿಗೆ ಬಂದು ಅಲೆಕ್ಸಾಂಡರನ ಪಾಳ್ಯದಲ್ಲಿ ಸೇರಿಕೊಂಡಿದ್ದರು. ಅಲೆಕ್ಸಾಂಡರನು ಸತ್ತ ಮೇಲೆ ಸಮಯವನ್ನು ಸಾಧಿಸಿ ಚಂದ್ರಗುಪ್ತನು ದಂಗೆಯಲ್ಲಿ ಸೇರಿಕೊಂಡು ಸಿಂಧೂನದಿಯ ಪ್ರದೇಶವನ್ನು ಜಯಿಸಿಕೊಂಡನು. ಆ ತರುವಾಯ (ಕ್ರಿ. ಪೂ. 321) ಅವನ ಗುಪ್ತಚಾರರು ಮಗಧವನ್ನು ಸೇರಿ ನಂದರಿಗೆ ವಿರೋಧವಾಗಿ ಒಳಸಂಚನ್ನು ನಡೆಸಿ, ಗೊಂದಲ ಹುಟ್ಟಿಸಿ, ನಂದರನ್ನೆಲ್ಲಾ ಕೊಂದು ಕ್ರಾಂತಿಯನ್ನು ಎಬ್ಬಿಸಿದರು. ಇದರಿಂದ ಚಂದ್ರಗುಪ್ತನು ವಿಶಾಲವಾದ ಮಗಧರಾಜ್ಯವನ್ನು ದೊರಕಿಸಿಕೊಂಡನು. ಪಾಟಲಿಪುತ್ರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ದೊಡ್ಡದೊಂದು ಸೈನ್ಯವನ್ನು ಇಟ್ಟುಕೊಂಡನು. ಅವನ ಸೈನ್ಯದಲ್ಲಿ ಎಂಭತ್ತು ಸಾವಿರ ರಾಹುತರೂ, ಎರಡು ಲಕ್ಷ ಕಾಲಾಳುಗಳೂ, ಎಂಟು ಸಾವಿರ ರಥಗಳೂ, ಆರು ಸಾವಿರ ಆನೆಗಳೂ ಇದ್ದುವಂತೆ! ಮುಂದೆ ಸೆಲ್ಯೂಕಸನು ತನ್ನ ಸಾಮ್ರಾಜ್ಯದಿಂದ ಕಳೆದುಹೋದ ಪಂಜಾಬನ್ನು ಮರಳಿ ಪಡೆಯುವುದಕ್ಕಾಗಿ ದಂಡೆತ್ತಿ ಬಂದಾಗ ಚಂದ್ರಗುಪ್ತನು ಅವನನ್ನು ಸೋಲಿಸಿ ಪಂಜಾಬ ಮಾತ್ರವಲ್ಲದೆ ಅವನಿಂದ ಬಲೂಚಿಸ್ಥಾನ ಜೆಕ್ಟ್ರಿಯಾ ದೇಶಗಳನ್ನೂ ಪಡೆದು ತನ್ನ ಸಾಮ್ರಾಜ್ಯವನ್ನು ಹಿಂದುಕುಶ್ ಪರ್ವತಗಳ ವರೆಗೆ ವಿಸ್ತರಿಸಿದನು. ಸೆಲ್ಯೂಕಸನು ಚಂದ್ರಗುಪ್ತನೊಡನೆ ಮೈತ್ರಿಯನ್ನು ಬೆಳೆಸಿ, ಚಂದ್ರಗುಪ್ತನಿಂದ ಮುಂದೆ


ಅಶೋಕನ ಸಾಮ್ರಾಜ್ಯ.
ತಕ್ಷಶಿಲೆ
ಸಿಂಧೂನದಿ
ಮಥುರೆ
ಶ್ರಾವಸ್ತಿ
ಕಪಿಲವಸ್ತು
ಕುಶಿನಗರ
ವೈಶಾಲಿ
ಪಾಟಲಿಪುತ್ರ
ಪ್ರಯಾಗ
ಕಾಶಿ
ಗಂಗಾನದಿ
ಗಯೆ
ಮಗಧ
ಮಾಳವ
ಸಾಂಚಿ
ಗಿರಿನಾರು
ಕೃಷ್ಣಾನದಿ
ಸಿದ್ಧಾಪುರ
ಮಂಗಳೂರು
ಕಾವೇರಿಪಟ್ಟಣ
ಸಿಂಹಳ

ತನ್ನ ಸಹಾಯಕ್ಕೆಂದು ಐನೂರು ಆನೆಗಳನ್ನು ಪಡೆದು ಹಿಂದಿರುಗಿದನು. ಸೆಲ್ಯೂಕಸನ ರಾಯಭಾರಿಯಾದ ಮೆಗಸ್ತನೀಸ್ ಎಂಬ ಗ್ರೀಕನು ಪಾಟಲಿಪುತ್ರದಲ್ಲಿದ್ದು ತಾನು ನೋಡಿದ ಎಲ್ಲ ಸಂಗತಿಗಳನ್ನು ಬರೆದಿಟ್ಟನು.

ರಾಜ್ಯಭಾರ

ಚಂದ್ರಗುಪ್ತನ ರಾಜ್ಯವು ಹಿಂದುಕುಶ್ ಪರ್ವತದಿಂದ ವಿಂಧ್ಯ ಪರ್ವತದ ತನಕವೂ, ಅರಬಿ ಸಮುದ್ರದಿಂದ ಬಂಗಾಳ ಅಖಾತದ ವರೆಗೂ ಹಬ್ಬಿಕೊಂಡಿದ್ದ ವಿಶಾಲ ಸಾಮ್ರಾಜ್ಯವಾಗಿದ್ದಿತು. ಇಷ್ಟು ದೊಡ್ಡ ರಾಜ್ಯವನ್ನು ಚಂದ್ರಗುಪ್ತನು ಚಾಣಕ್ಯನ ಸಹಾಯದಿಂದ ಬಲು ಚೆನ್ನಾಗಿ ಆಳುತಿದ್ದನು. ಪ್ರತಿ ಒಂದು ಊರಿನ ವ್ಯವಸ್ಥೆಯನ್ನು ಕೈಕೊಳ್ಳಲು ಒಂದೊಂದು ಪಂಚಾಯತ ಸಭೆಯಿದ್ದಿತು. ಪಾಟಲಿಪುತ್ರ, ಉಜ್ಜಯಿನಿ, ತಕ್ಷಶಿಲೆ, ಕಾಶಿ, ಪ್ರಯಾಗ ಮುಂತಾದ ದೊಡ್ಡ ದೊಡ್ಡ ಶಹರುಗಳಲ್ಲಿಯೂ ಸುವ್ಯವಸ್ಥಿತವಾದ ಪಂಚಾಯತಗಳಿದ್ದುವು. ರಾಜ್ಯದಲ್ಲಿ ನಡೆಯುವ ಎಂತಹ ವಿಶೇಷ ಸಂಗತಿಯನ್ನಾದರೂ ಗುಪ್ತಚಾರರು ಅರಸನಿಗೆ ತಿಳಿಸುತಿದ್ದರು. ರಾಜ್ಯದಲ್ಲಿ ಶಾಂತಿಯು ನೆಲೆಗೊಂಡಿದ್ದಿತು. ಕಳ್ಳಕಾಕರು ಬಲು ಕಡಿಮೆ; ಅನ್ಯಾಯಗಳು ನಡೆಯುತ್ತಿರಲಿಲ್ಲ. ಜನರೆಲ್ಲರೂ ಸದ್ಗುಣಶಾಲಿಗಳಾಗಿದ್ದು ಧರ್ಮಾವಲಂಬಿಗಳಾಗಿದ್ದರು. ಪಾಪ ಕರ್ಮಕ್ಕೆ ಎಲ್ಲರೂ ಹೇಸುತಿದ್ದರು. ಅಪರಾಧಿಗಳಿಗೆ ಸರಕಾರದ ಕಠಿಣ ಶಿಕ್ಷೆಯಿದ್ದಿತು. ಅರಸನು ಸಾಮ್ರಾಜ್ಯವನ್ನು ಪ್ರಾಂತಗಳಾಗಿ ವಿಂಗಡಿಸಿ, ಪ್ರತಿ ಒಂದು ಪ್ರಾಂತಕ್ಕೆ ಒಬ್ಬ ಮಂಡಲಾಧಿಕಾರಿಯನ್ನು ನೇಮಿಸಿದ್ದನು. ಇದರಿಂದ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಒಳ್ಳೆ ವ್ಯವಸ್ಥೆಯಿದ್ದಿತು. ಜನರು ಸಾಮಾನ್ಯವಾಗಿ ಸುಖಸಂಪತ್ತಿನಿಂದಿದ್ದರೆಂದು ಹೇಳಬಹುದು. ಹೆಚ್ಚಿನ ಜನರು ಹಿಂದೂ ಧರ್ಮಾನುಯಾಯಿಗಳಾಗಿ ಜಾತಿಕಟ್ಟಳೆಗಳನ್ನು ಮೀರುತ್ತಿರಲಿಲ್ಲ. ಅನೇಕರು ಬೌದ್ಧ, ಜೈನ ಮತಗಳನ್ನು ಅವಲಂಬಿಸಿದ್ದರು. ಅವರಲ್ಲಿ ಅನೇಕ ಸನ್ಯಾಸಿಗಳು ಮಠಗಳನ್ನು ಕಟ್ಟಿಸಿ ಧರ್ಮ ಪ್ರಚಾರ ಮಾಡುತಿದ್ದರು. ಚಂದ್ರಗುಪ್ತನು ತನ್ನ ಕೊನೆಗಾಲದಲ್ಲಿ ಜೈನ ಮತವನ್ನವಲಂಬಿಸಿ, ಮಗಧದಲ್ಲಿ ಕ್ಷಾಮವುಂಟಾದಾಗ ಮಗನಾದ ಬಿಂದುಸಾರನಿಗೆ ಪಟ್ಟಕಟ್ಟಿ, ತಾನು ಸನ್ಯಾಸಿಯಾಗಿ ಇತರ ಜೈನಯತಿಗಳೊಡನೆ ಶ್ರವಣಬೆಳಗೊಳಕ್ಕೆ ಬಂದು ತಪಸ್ಸುಮಾಡಿದನೆಂದು ಜೈನರು ಹೇಳುತ್ತಾರೆ.

ಅಶೋಕನು. (ಕ್ರಿ. ಪೂ. 273-232)- ಬಿಂದುಸಾರನ ಆಳ್ವಿಕೆಯಲ್ಲಿ ದಕ್ಷಿಣವು ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿರಬೇಕು. ಅವನ ತರುವಾಯ ಅವನ ಮಗನಾದ ಅಶೋಕನು ಸಿಂಹಾಸನವನ್ನೇರಿದನು. ಇವನು ರಾಜ್ಯವಿಸ್ತಾರವನ್ನು ಬಹಳವಾಗಿ ಕಾಂಕ್ಷಿಸುತಿದ್ದುದರಿಂದ ಪಟ್ಟಕ್ಕೆ ಬಂದ ಒಂಬತ್ತನೆ ವರ್ಷದಲ್ಲಿಯೆ ಬಲು ಖ್ಯಾತಿಯಿಂದ ಮೆರೆಯುತ್ತಿದ್ದ ಕಳಿಂಗ ರಾಜ್ಯದ ಮೇಲೆ ದಂಡೆತ್ತಿ ಹೋಗಿ, ಅನೇಕರನ್ನು ಕೊಂದು ಹೊಲಗದ್ದೆಗಳನ್ನು ಹಾಳುಮಾಡಿ ಮನೆ ಮಠಗಳನ್ನು ಭಸ್ಮೀಭೂತವನ್ನಾಗಿ ಮಾಡಿ,

ಕಳಿಂಗ ಯುದ್ಧ
ಕ್ರಿ. ಪೂ. 261




ಕಲ್ಲಿನ ಮೇಲಿನ ಬರಹ
(Copyright reserved by the Archaeological Survey of India)

ಕಳಿಂಗವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಆದರೆ ಈ ಕ್ರೂರ ಕೃತ್ಯದ ಪರಿಣಾಮವು ಮಾತ್ರ ವಿಪರೀತವಾಯಿತು. ಕಳಿಂಗದಲ್ಲಿ ಜನರಿಗೆ ಉಂಟಾದ ಕಷ್ಟನಷ್ಟಗಳ ಅರಿವು ಅಶೋಕನಿಗಾದೊಡನೆ ಅವನು ಬೇಸರಗೊಂಡು ಪಶ್ಚಾತ್ತಾಪದಿಂದ ಕಳವಳಿಸಿದನು. ಬುದ್ಧನು ಬೋಧಿಸಿದ್ದ ತತ್ವಗಳು ಅವನಿಗೆ ಸರಿ ಎಂದು ಅನ್ನಿಸಿದುವು. ಯುದ್ಧದಿಂದ ದೇಶವನ್ನು ಜಯಿಸುವುದಕ್ಕಿಂತಲೂ, ಪ್ರೀತಿಯಿಂದ ಜನರ ಮನಸ್ಸನ್ನು ಒಲಿಸುವುದೇ ಮೇಲೆಂದು ನಿರ್ಧರಿಸಿ, ಅಶೋಕನು ಬೌದ್ಧಮತಾವಲಂಬಿಯಾದನು.

ಬೌದ್ಧಮತ ಪ್ರಸಾರ

ಅಶೋಕನು ಬೌದ್ಧಮತವನ್ನವಲಂಬಿಸಿದುದು ಹಿಂದೂದೇಶದ ಇತಿಹಾಸದಲ್ಲಿ ಅತಿ ಪ್ರಾಮುಖ್ಯವಾದ ವಿಷಯವಾಗಿದೆ. ಅಂದಿನಿಂದ ಅವನ ಜೀವನದ ರೀತಿಯೆ ಬದಲಾಯಿತು. ಅರಮನೆಯ ಸುಖಗಳನ್ನೆಲ್ಲಾ ತೊರೆದು ಬೌದ್ಧಭಿಕ್ಷುಗಳಂತೆ ಸಾದಾ ಜೀವನವನ್ನು ಕೈಕೊಂಡನು. ಯತಿಯಾಗಿದ್ದರೂ ರಾಜ್ಯದ ಕೆಲಸಗಳಲ್ಲಿ ಬೇಸರವನ್ನು ತಾಳಲಿಲ್ಲ. ಬೌದ್ಧ ಯಾತ್ರಾಸ್ಥಳಗಳನ್ನೆಲ್ಲಾ ಸಂದರ್ಶಿಸಿದನು; ತನ್ನ ಸಾಮ್ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಬೌದ್ಧ ಸ್ತೂಪಗಳನ್ನೂ ಮಠಗಳನ್ನೂ ಕಟ್ಟಿಸಿದನು. ಅನುವು ದೊರೆತಾಗ ರಾಜ್ಯದಲ್ಲಿ ಸಂಚರಿಸಿ, ಬೌದ್ಧಮತ ತತ್ವಗಳನ್ನು ಜನರಿಗೆ ಬೋಧಿಸಿದನು. ಮತ ಪ್ರಚಾರಕ್ಕಾಗಿ ಬೋಧಕರನ್ನು ಇತರ ದೇಶಗಳಿಗೆ ಕಳುಹಿಸಿದನು. ತನ್ನ ಸಾಮ್ರಾಜ್ಯದಲ್ಲಿ ಪ್ರಾಣಿ ಹಿಂಸೆಯನ್ನು ನಿಲ್ಲಿಸಿದನು; ಯುದ್ಧಗಳಿಗೆ ತಿಲಾಂಜಲಿಯನ್ನಿತ್ತನು; ಪ್ರಜೆಗಳ ಹಿತಕ್ಕಾಗಿ ಹಗಲಿರುಳೂ ಪ್ರಯತ್ನಿಸಿದನು; ದೇಶದಲ್ಲೆಲ್ಲಾ ರಸ್ತೆಗಳನ್ನೂ ಛತ್ರಗಳನ್ನೂ, ಆಸ್ಪತ್ರೆಗಳನ್ನೂ, ಅರವಟ್ಟಿಗೆಗಳನ್ನೂ ಸ್ಥಾಪಿಸಿ ಜನರಿಗೆ ಸೌಕರ್ಯಗಳನ್ನು ಒದಗಿಸಿದನು. ಅವನ ಕಾಲದಲ್ಲಿ ಅನೇಕ ಬೌದ್ಧ ಯತಿಗಳು ಹಿಂದೂದೇಶದಿಂದ ಹೊರಟು ಪರ್ಶಿಯಾ, ಬೆಬಿಲೋನ್, ಪೆಲಿಸ್ಟಾಯಿನ್, ಸಿರಿಯಾ, ಇಜಿಪ್ಟ್ ದೇಶಗಳಿಗೆ ಹೋಗಿ ಬೌದ್ಧಮತ ಪ್ರಚಾರವನ್ನು ಮಾಡಿದರು. ಅಶೋಕನ ಮಗನಾದ ಮಹೇಂದ್ರನು ಬೌದ್ಧ ಸನ್ಯಾಸಿಯಾಗಿ ಸಿಂಹಳ ದ್ವೀಪಕ್ಕೆ ಹೋಗಿ ಅಲ್ಲಿಯ ಅರಸನನ್ನೂ ಪ್ರಜೆಗಳನ್ನೂ ಬೌದ್ಧಧರ್ಮಕ್ಕೆ ಮತಾಂತರಗೊಳಿಸಿದನು. ಅಂದಿನಿಂದಲೂ ಸಿಂಹಳದ ಜನರು ಬೌದ್ಧರಾಗಿರುತ್ತಾರೆ.



ಸಾರನಾಥದಲ್ಲಿಯ ಸ್ತೂಪ

ಬೌದ್ಧಮತದ ತತ್ವಗಳು ಶಾಶ್ವತವಾಗಿ ಜನರಿಗೆ ಕಾಣಸಿಗ
ಲೆಂದು ಅಶೋಕನು ಹಲವೆಡೆಗಳಲ್ಲಿ ಕಲ್ಲಿನ ಅಥವಾ ಕಬ್ಬಿಣದ ಕಂ
ಗಳನ್ನು ಸ್ಥಾಪಿಸಿ, ಅವುಗಳ ಮೇಲೆ ತನ್ನ ಬೋಧನೆಯನ್ನು ಕೆತ್ತಿಸಿದನ
ಡ್ಡಗಳ ಬದಿಗಳಲ್ಲಿರುವ ಗವಿಗಳಲ್ಲಿಯೂ ಬಂಡೆಗಳ ಮೇಲೂ ಅಂತ
ಬರಹಗಳನ್ನು ಬರೆಯಿಸಿದನು. ಈಗಲೂ ಅವುಗಳು ಅಲ್ಲಲ್ಲಿಯೇ ಉ
ದಿವೆ. ಇವುಗಳಿಂದ ಅವನಿಗೆ ಬೌದ್ಧಮತದ ಮೇಲಿದ್ದ ದೃಢವಿಶ್ವಾಸ
ಅವನ ಕರುಣಾಪೂರ್ಣತೆಯೂ, ಸ್ವಾರ್ಥತ್ಯಾಗವೂ ವ್ಯಕ್ತವಾಗುವುವು.

ಅಶೋಕನ ಮರಣಾನಂತರ ಪಟ್ಟಕ್ಕೆ ಬಂದ ಅರಸರು ದುರ್ಬ
ಲರಾದ್ದ ಕಾರಣ ಮೌರ್ಯ ಸಾಮ್ರಾಜ್ಯವು ಬಿಲ್ಲೆಬಿಲ್ಲೆ
ಯಾಯಿತು. ರಾಜಧಾನಿಯಿಂದ ದೂರದರ
ಪ್ರಾಂತಗಳು ಒಂದೊಂದಾಗಿ ದಂಗೆಯೆದ್ದು ಸ್ವತಂ
ವಾದುವು. ವಾಯುವ್ಯ ಪ್ರಾಂತದಲ್ಲಿ ಪರದೇಶೀಯ
ಪಂಗಡಗಳು ಬಂದು ನೆಲೆಸಿದುವು. ಹೀಗಾಗಿ ಅಶೋಕನು ಸ
ನಾಲ್ವತ್ತೈದು ವರ್ಷಕಾಲದಲ್ಲಿಯೇ ಮೌರ್ಯ ಸಾಮ್ರಾಜ್ಯವು ಅಳಿ
ಹಿಂದೂದೇಶದಲ್ಲಿ ಅನೇಕ ಚಿಕ್ಕ ಚಿಕ್ಕ ರಾಜ್ಯಗಳು ಹುಟ್ಟಿ ಬೆ
ಪರಸ್ಪರ ಕಾದಾಡತೊಡಗಿದುವು. ಅಲ್ಲಿಂದ ಮುಂದೆ ಎಂಟು ಶತಮಾ
ನಗಳ ತನಕ ಹಿಂದೂದೇಶದಲ್ಲಿ ಬಹಳ ವಿಸ್ತೃತವಾದ ಸಾಮ್ರಾಜ್ಯ
ಇದ್ದಿರಲಿಲ್ಲ.

ಅವನತಿ
ಕ್ರಿ. ಪೂ. 232-186

ಅಶೋಕನ ಪ್ರಯತ್ನದಿಂದಾಗಿ ಬೌದ್ಧಮತವು ಹಿಂದೂದೇಶದಲ್ಲಿ
ಪ್ರಚಾರಕ್ಕೆ ಬಂದಿತು. ಹಿಂದೂ ಧರ್ಮವು ಕೆಳಗಾಗಿ ಬೌದ್ಧಮ
ನಮ್ಮ ದೇಶದ ಮತವಾಗಿ ಪರಿಣಮಿಸಿತು.

---

4. ಮೌರ್ಯ ಸಾಮ್ರಾಜ್ಯದ ತರುವಾಯ

ಅಶೋಕನು ಸತ್ತ ನಾಲ್ವತ್ತೈದು ವರ್ಷಗಳಲ್ಲಿಯೇ ಮೌ
ಸಾಮ್ರಾಜ್ಯವು ಕೊನೆಗಂಡಿತು. ಪಂಜಾಬ ಮತ್ತು ವಾಯುವ್ಯ ಪ್ರ
ಗಳೆಲ್ಲವೂ ಬೆಕ್ಟ್ರಿಯದ ಅರಸನ ಕೈಕೆಳಗೆ ಸ್ವತಂತ್ರವಾದುವು. ದಕ್ಷಿ
ಆಂಧ್ರರೆಂದೂ ಶಾತವಾಹನರೆಂದೂ ಕರೆಯಲ್ಪಡುವ ರಾಜವ

ವರ ವಶವಾಯಿತು. ಕಳಿಂಗವೂ ಸ್ವತಂತ್ರವಾಯಿತು. ಮಗಧರಾಜ್ಯದಲ್ಲಿ ಮೌರ್ಯವಂಶದ ಬಲಹೀನನಾದ ಬೃಹದ್ರಥನು ತನ್ನ ಸಾಮಂತರನ್ನು ಸೇನಾಧಿಪತಿಗಳನ್ನು ಅಂಕೆಯಲ್ಲಿಟ್ಟುಕೊಳ್ಳಲು ಅಶಕ್ತನಾಗಿದ್ದುದರಿಂದ ಕ್ರಿ. ಪೂ. 185ರಲ್ಲಿ ಮೌರ್ಯ ಸೇನಾಪತಿಯೂ ಅವಂತಿಯ ಅರಸನೂ ಆದ ಪುಷ್ಯಮಿತ್ರನು ಆತನನ್ನು ಕೊಂದು ತಾನೆ ಪಟ್ಟವನ್ನೇರಿದನು.

ಪುಷ್ಯಮಿತ್ರ
ಕ್ರಿ. ಪೂ. 185-149

ಪುಷ್ಯಮಿತ್ರನು ಮಗಧರಾಜ್ಯವನ್ನು ಶತ್ರುಗಳಿಂದ ರಕ್ಷಿಸಲಿಕ್ಕೆ ಬಹಳ ಹೆಣಗಾಡಿದನು. ಬೆಕ್ಟ್ರಿಯದ ಅರಸನಾದ ಮಿನಾಂಡರನು ಮಗಧದ ಮೇಲೆ ದಂಡೆತ್ತಿ ಬಂದಾಗ ಅವನನ್ನು ಸೋಲಿಸಿ ಓಡಿಸಿದನು. ಕಳಿಂಗದ ರಾಜನೂ ಮಗಧವನ್ನು ಗೆದ್ದುಕೊಳ್ಳಲು ಪ್ರಯತ್ನಿಸಿದನು. ಪುಷ್ಯಮಿತ್ರನು ತನ್ನ ಪರಾಕ್ರಮವನ್ನು ಪ್ರದರ್ಶಿಸಲು ಬಹಳ ವಿಜೃಂಭಣೆಯಿಂದ ಒಂದು ಅಶ್ವಮೇಧ ಯಾಗವನ್ನು ಜರಗಿಸಿದನು. ಅವನು ಹಿಂದೂ ಧರ್ಮಕ್ಕೆ ತುಂಬಾ ಪ್ರೋತ್ಸಾಹವಿತ್ತನು. ಅವನ ಪುರೋಹಿತನಾದ ಪತಂಜಲಿಯು ಯೋಗಶಾಸ್ತ್ರವನ್ನೂ ಸಂಸ್ಕೃತ ವ್ಯಾಕರಣವನ್ನೂ ಬರೆದಿದ್ದನು. ಪುಷ್ಯಮಿತ್ರನ ವಂಶದವರು ಮಗಧವನ್ನು ನೂರಹನ್ನೆರಡು ವರ್ಷಗಳ ವರೆಗೆ ಆಳಿದರು. ಅವರ ಕೊನೆಯ ಅರಸನನ್ನು ಅವನ ಮಂತ್ರಿಯು ಕೊಂದಿಕ್ಕಿ ತಾನೆ ಅರಸನಾದನು. ಈ ಕಣ್ವವಂಶದ ಅರಸರು ನಾಲ್ವತ್ತೈದು ವರ್ಷ (ಕ್ರಿ. ಪೂ. 73-28) ಪಾಟಲಿಪುತ್ರದಲ್ಲಿ ಆಳಿದರು. ಕೊನೆಗೆ ಮಗಧರಾಜ್ಯವು ಶಾತವಾಹನರ ಸಾಮ್ರಾಜ್ಯಕ್ಕೆ ಸೇರಿತು.

ಶಾತವಾಹನರು

ಶಾತವಾಹನರು ಅಶೋಕನ ಮರಣಾನಂತರದಿಂದಲೆ ದಕ್ಷಿಣದಲ್ಲಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸುತ್ತಾ ಬಂದು ನಾನ್ನೂರ ಐವತ್ತು ವರ್ಷಗಳ ಕಾಲ ದಕ್ಷಿಣವನ್ನು ಆಳಿದರು. ಅವರ ವಂಶದ ಅರಸರ ಹೆಸರುಗಳೂ ಅವರ ಕಾರ್ಯಕಲಾಪಗಳೂ ನಮಗಿನ್ನೂ ತಿಳಿದಿಲ್ಲ. ಪರಾಕ್ರಮಶಾಲಿಗಳಾಗಿದ್ದ ಹಲವು ಅರಸರು ಆ ವಂಶದಲ್ಲಿ ಹುಟ್ಟಿರಬೇಕು. ಅವರ ವಿಜಯದಿಂದಾಗಿ ವಿಂಧ್ಯಪರ್ವತದಿಂದ ಕನ್ಯಾಕುಮಾರಿಯ ವರೆಗಿನ ಪ್ರದೇಶವೆಲ್ಲವೂ ಅವರ ಸಾಮ್ರಾಜ್ಯಕ್ಕೆ ಸೇರಿತು. ಆದರೆ ಕ್ರಿ. ಪೂ. ಮೊದಲನೆ

ಶತಮಾನದ ಆದಿಯಲ್ಲಿ ಶಕರೆಂದು ಕರೆಯಲ್ಪಡುವ ಮಧ್ಯ ಏಷಿಯದ
ಅನಾಗರಿಕ ಪಂಗಡದವರು ಖೈಬರ್, ಬೋಲಾನ್ ಕಣಿವೆಗಳ ಮಾರ್ಗ
ವಾಗಿ ಹಿಂದೂದೇಶಕ್ಕೆ ಬಂದು ಸಿಂಧ, ಕಾಠಿಯಾವಾಡ, ಗುಜರಾಥ,
ಮಾಳವ ಪ್ರದೇಶಗಳಲ್ಲಿ ನೆಲೆನಿಂತು ರಾಜ್ಯಭಾರಮಾಡಲು ಯತ್ನಿಸಿದರು.
ಅವರು ವಿಂಧ್ಯಪರ್ವತಗಳನ್ನು ದಾಟಿ ಇನ್ನೂ ದಕ್ಷಿಣಕ್ಕೆ ಹೋಗಲೆಳಸಿ
ದಾಗ ಶಾತವಾಹನ ಸಮ್ರಾಟರು ಅವರನ್ನು ತಡೆದರು. ಶಕರಿಗೂ
ಆಂಧ್ರರಿಗೂ ಅನೇಕ ಯುದ್ಧಗಳು ನಡೆದಿರಬೇಕು. ಹೀಗಾಗಿ ಕೊನೆಗೆ
ಇಬ್ಬರೂ ಬಲಗುಂದಿದರು. ಕ್ರಿ. ಶ. 50ರಲ್ಲಿ ಪಂಜಾಬದಲ್ಲಿ ಆಗ ನೆಲೆ
ನಿಂತ ಕುಷಾಣರು ಶಕರಾಜ್ಯಗಳನ್ನು ಗೆದ್ದುಕೊಂಡರು. ಕುಷಾಣರು
ಅಧಿಕಾರದಲ್ಲಿದ್ದಷ್ಟು ಕಾಲ ಅಂದರೆ ಸಾಧಾರಣ ಕ್ರಿ. ಶ. 150ರ ವರೆಗೆ
ಶಕರು ಅವರ ಅಧೀನದಲ್ಲಿದ್ದರು. ಕುಷಾಣರ ಅಧಿಕಾರವು ಕಡಿಮೆ
ಯಾದೊಡನೆ ಶಕರು ಮರಳಿ ಸ್ವತಂತ್ರರಾಗಿ ಮಧ್ಯ ಹಿಂದೂದೇಶದಲ್ಲಿ
ತಮ್ಮ ರಾಜ್ಯಗಳನ್ನು ಸ್ಥಿರಪಡಿಸಿ ಬೆಳೆಸಿದರು. ಅದೇ ಸಮಯದಲ್ಲಿ ಆಂಧ್ರ
ಸಾಮ್ರಾಜ್ಯವು ಬಲಗುಂದಿದುದರಿಂದ ದಕ್ಷಿಣದಲ್ಲಿ ಅನೇಕ ಚಿಕ್ಕ ದೊಡ್ಡ
ರಾಜ್ಯಗಳು ಸ್ಥಾಪಿತವಾದುವು. ಬನವಾಸಿಯಲ್ಲಿ ಕದಂಬರೂ, ಕಾಂಚಿ
ಯಲ್ಲಿ ಪಲ್ಲವರೂ ತಮ್ಮ ರಾಜ್ಯವನ್ನು ವಿಸ್ತರಿಸಿ ಹೆಸರುವಾಸಿಯಾದರು.

ಈ ಎರಡು ಶತಮಾನಗಳಲ್ಲಿ ಬೌದ್ಧಧರ್ಮವು ಮೆಲ್ಲಮೆಲ್ಲನೆ
ಪ್ರಚಾರವಾಗುತ್ತಾ ಬಂದಿತು. ಶಾತವಾಹನ ಅರಸರು ಬೌದ್ಧ
ಮತಕ್ಕೆ ತುಂಬಾ ಪ್ರೋತ್ಸಾಹವನ್ನು ಕೊಡುತ್ತಿದ್ದರು.

ಬೌದ್ಧ ಸಂಘಗಳು

ಅವರ ಕಾಲದಲ್ಲಿ ಬೌದ್ಧ ಭಿಕ್ಷುಗಳಿಗಾಗಿ ಕಟ್ಟಿಸಿದ
ಭವ್ಯವಾದ ಭವನಗಳ, ವಿಹಾರಗಳ ಮತ್ತು ಚೈತ್ಯಾಲಯಗಳ ಕುರುಹು
ಗಳನ್ನು ಅಮರಾವತಿ ನಾಸಿಕ ಮುಂತಾದ ಊರುಗಳಲ್ಲಿ ನಾವು ಕಾಣ
ಬಹುದು. ಉತ್ತರ ಹಿಂದೂದೇಶದಲ್ಲಿಯೂ ಬೌದ್ಧಮತವು ಜನಪ್ರಿಯ
ವಾಗುತ್ತಾ ಬರುತ್ತಿತ್ತು. ಬೆಕ್ಟ್ರಿಯದ ಅರಸರ ಪ್ರಬಲವಾದ ಬೆಂಬಲವು
ಅದಕ್ಕೆ ದೊರೆತುದರಿಂದ ಹಿಂದೂದೇಶದ ಹೊರಗೂ ಆ ಮತವು ಪ್ರಚಾರ
ವಾಗಲಾರಂಭಿಸಿತು. ಬೆಕ್ಟ್ರಿಯದ ಜನರು ಹಿಂದೆ ಅಲ್ಲಿ ನೆಲೆನಿಂತ ಗ್ರೀಕ
ವಂಶದವರಾಗಿದ್ದರು. ಅವರಿಗೆ ಕಲ್ಲಿನಿಂದ ಸುಂದರವಾದ ಮೂರ್ತಿಗ
ಳನ್ನು ಮಾಡುವುದಕ್ಕೆ ಬರುತ್ತಿದ್ದಿತು. ಹೀಗಾಗಿ ಅವರು ಬೌದ್ಧರಾದೊಡ


ಕನಿಷ್ಕನ ಸಾಮ್ರಾಜ್ಯ.
ತಕ್ಷಶಿಲಾ
ಕಾಶ್ಮೀರ
ಮಥುರೆ
ಮಾಲವ
ಮಗಧ
ನಾಸಿಕ
ಕಳಿಂಗ
ಮಂಗಳೂರು

ಬುದ್ಧನ ಮತ್ತು ಬೋಧಿಸತ್ವರ ವಿಗ್ರಹಗಳನ್ನು ನಿರ್ಮಿಸಿ, ದೇ
ಲಯಗಳಲ್ಲಿರಿಸಿ ಪೂಜಿಸತೊಡಗಿದರು. ಹೀಗಾಗಿ ಮೊದಲು ಬೌ
ಯಾದವನ್ನು ಆರಾಧಿಸುತ್ತಿದ್ದವರೂ ಬೆಟ್ಟದ ಪದ್ಧತಿಯನ್ನು
ಬುದ್ಧನನ್ನು ಆರಾಧಿಸಲಾರಂಭಿಸಿದರು. ಈ ಬದಲಾವಣೆಯಿಂದ
ದೊಳಗೆ ಮಹಾಯಾನ ಮತ್ತು ಹೀನಯಾನ ಎಂಬ ಎರಡು ಪ
ಪಂಗಡಗಳು ಹುಟ್ಟಿದುವು. ಹೀನಯಾನ ಪಂಥದವರು ಬು
ಮೂರ್ತಿಗಳನ್ನು ಪೂಜಿಸದೆ ಹಳೆಯ ಪದ್ಧತಿಗಳನ್ನೆ ಅನುಸ
ರಿಸಿದರು. ಮಹಾಯಾನ ಪಂಥದವರು ಬುದ್ಧನನ್ನು ಬೋಧಿಸತ್ವ
ಆರಾಧಿಸಿ ಅವರಿಂದ ಶ್ರೇಯಸ್ಸು ಪಡೆಯಬಹುದೆಂದು ನಂಬಿದ
ಅವರು ಹೊಸ ಗ್ರಂಥಗಳನ್ನು ಬರೆದು ಬೌದ್ಧಧರ್ಮದ ವಿ
ನಾದ ತಮ್ಮ ಈ ಹೊಸ ಅಭಿಪ್ರಾಯಗಳನ್ನು ದೇಶದಲ್ಲೆಲ್ಲಾ ಪ್ರ
ಪಡಿಸಿದರು.

ಮಹಾಯಾನ ಪಂಥವನ್ನು ಪ್ರಚಾರಮಾಡಿದವರಲ್ಲಿ ಕನಿಷ್ಕ
ಕುಶಾನ ಅರಸನೆ ಪ್ರಮುಖನಾಗಿದ್ದನು. ಕುಶಾನ ಸಂಗಡ

ಕನಿಷ್ಕ 78–119

ಮಧ್ಯ ಏಷಿಯಾದಿಂದ ಬಂದು ಪೆಶಾವರ, ...
ಮತ್ತು ಪಂಜಾಬದಲ್ಲಿ ನೆಲೆನಿಂತು ಪಶ್ಚಿಮ ಹಿ
ದೇಶದ ಸಿಂಹಾಸನವನ್ನು ಸಾಮಂತರಾಗಿ ...
ದ್ದರು. ಕನಿಷ್ಕನು ಕಾಶ್ಮೀರ, ಮಾಳವ ಮತ್ತು ಗಂಗಾ ಯಮುನಾ
ಗಳ ನಡುವಣ ಪ್ರದೇಶವನ್ನು ಗೆದ್ದುಕೊಂಡು ಕುಶಾನರ ಕೀರ್ತಿ
ಹೆಚ್ಚಿಸಿದನು. ಅಲ್ಲದೆ ಹಿಂದೂದೇಶದ ಹೊರಗಿನ ಸಾಕ್ಷ ...
ರಾಜ್ಯಗಳನ್ನು ಗೆದ್ದುಕೊಂಡು ತನ್ನ ಸಾಮ್ರಾಜ್ಯವನ್ನು ಬೆಳೆಯಿಸಿದ

ಕನಿಷ್ಕನು ಬೌದ್ಧಮತಾವಲಂಬಿಯಾಗಿ ಮಹಾಯಾನ
ವನ್ನು ಎಲ್ಲಾ ದೇಶಗಳಲ್ಲಿ ಪ್ರಚಾರಗೊಳಿಸಲು ಬಹಳ ಪ್ರಯತ್ನಿ

ಮಹಾಯಾನ ಪ್ರಚಾರ

ತನ್ನ ಸಾಮ್ರಾಜ್ಯದ ಅನೇಕ ಭಾಗಗಳಲ್ಲಿ
ಭಿಕ್ಷುಗಳಿಗಾಗಿ ಅನೇಕ ಸುಂದರವಾದ
ಗಳನ್ನು ಕಟ್ಟಿಸಿದನು. ಅವನ ಆಸ್ಥಾನದಲ್ಲಿ ಪ
ಅಶ್ವಘೋಷ ಮತ್ತು ವಸುಮಿತ್ರ ಮೊದಲಾದ ಅನೇಕ ಬೌದ್ಧ
ಗಳಿಗೆ ಹೆಚ್ಚಿನ ಪ್ರೋತ್ಸಾಹವು ದೊರೆಯುತ್ತಿತ್ತು. ಅವನ ಕಾ

ನೇಕ ಬೌದ್ಧಭಿಕ್ಷುಗಳು ಒಕ್ಸಸ್ ನದಿ ಪ್ರದೇಶಕ್ಕೂ, ಕಾಬೂಲ ಸ್ವಾಂ ತಕ್ಕೆ, ಟಿಬೆಟ್ ಮೊದಲಾದ ಪ್ರದೇಶಗಳಿಗೂ ಹೋಗಿ ಜನರನ್ನು ಬೌದ್ಧ ಮತಕ್ಕೆ ಸೇರಿಸಿದ್ದರು. ಕೆಲವರು ಟಿಬೇಟು, ಮಂಗೋಲಿಯಾ, ಚೀನಾ, ಕೊರಿಯಾ ಮತ್ತು ಜಪಾನು ದೇಶಗಳಿಗೆ ಹೋಗಿ ಮೆಲ್ಲಮೆಲ್ಲನೆ ಆ ದೇಶಗಳ ಜನರನ್ನು ಒಂದೆರಡು ಶತಮಾನಗಳೊಳಗಾಗಿ ಬೌದ್ಧಮತಕ್ಕೆ ಸೇರಿಸಿದರು. ಈ ಮತಪ್ರಚಾರ ದಲ್ಲೆಲ್ಲಾ ಅನೇಕ ಬೌದ್ಧ ದೇವಾಲಯಗಳು ನಿರ್ಮಿತ ವಾಗಿ ಅವುಗಳಲ್ಲಿ ಸುಂದರ ವಾದ ಮೂರ್ತಿಗಳು ಪ್ರತಿಷ್ಠಿತ ವಾದುವು. ಬೌದ್ಧ ತತ್ವಗಳನ್ನು ಬೋಧಿಸುವುದಕ್ಕಾಗಿ ಅನೇಕ ಗುರುಕುಲಗಳು ಸ್ಥಾಪಿತವಾ ದುವು. ಆ ಕಾಲದಲ್ಲಿ ಬೌದ್ಧ ಮತಕ್ಕೆ ತಕ್ಷಶಿಲೆಯು ವಿಶ್ವ ವಿದ್ಯಾಲಯವೆ ಕೇಂದ್ರ ಸ್ಥಳ ವಾಗಿತ್ತು. ಅಲ್ಲಿ ದೇಶವಿದೇಶ ಗಳಿಂದ ಸಾವಿರಾರು ವಿದ್ಯಾ ರ್ಥಿಗಳು ಬಂದು ಸಕಲ ವಿದ್ಯಾ ಪಾರಂಗತರಾದ ಬೌದ್ಧಭಿಕ್ಷು ಗಳಿಂದ ಮತಸಂಬಂಧವಾದ ವಿದ್ಯೆಗಳನ್ನು ಮಾತ್ರವಲ್ಲದೆ ಆಯುರ್ವೇದ, ವ್ಯಾಕರಣ, ಛಂದಸ್ಸು, ಶಿಲ್ಪಶಾಸ್ತ್ರ ಮೊದಲಾದ ಸಕಲ ವಿದ್ಯೆಗಳನ್ನು ಕಲಿಯುತ್ತಿದ್ದರು. ಆಗ ಸುತ್ತಮುತ್ತ ದೇಶಗಳಿಗೆ ಹಿಂದೂಸ್ಥಾನವು ನಾಗರಿಕತೆಯ ಕೇಂದ್ರವಾಗಿತ್ತು. ಹಿಂದೂದೇಶವು ಪವಿತ್ರ ಭೂಮಿಯೆಂದು ಹಲವರು ಭಾವಿಸಿದ್ದರು. ಧರ್ಮವು ಸಂಸ್ಕೃತಿಯ ಪ್ರಚಾರದಿಂದಾಗಿ ಮಧ್ಯ ಏಶಿಯಾದ ಅನೇಕ ನಾಗರಿಕ ಜನರು ಸುಧಾರಣೆಹೊಂದಿದರು.



ಬುದ್ಧನ ಮೂರ್ತಿ
(Copyright reserved by the Archaeological Survey of India)

ಕುಷಾಣ ಸಾಮ್ರಾಜ್ಯವು ಉತ್ತರ ಹಿಂದೂದೇಶದಲ್ಲಿ ಮೆರೆಯ ತಿದ್ದಾಗ ದಕ್ಷಿಣದಲ್ಲಿ ಶಾತವಾಹನ ಸಾಮ್ರಾಜ್ಯವು ವೈಭವದಿಂದಿತ್ತು ಕನಿಷ್ಕನು ಸತ್ತ ಕೆಲವು ವರ್ಷಗಳಲ್ಲಿಯೆ ಕುಷಾಣ ಸಾಮ್ರಾಜ್ಯ ಅಳಿದುದರಿಂದ ಪಶ್ಚಿಮ ಹಿಂದೂದೇಶದಲ್ಲಿ ಶಕರು ಮರಳಿ ಪ್ರಬಲರಾದರ ಅದೇ ಸಮಯದಲ್ಲಿ ಶಾತವಾಹನರ ಸಾಮ್ರಾಜ್ಯವು ಕೊನೆಗಂ ದಕ್ಷಿಣದಲ್ಲಿ ಅನೇಕ ಚಿಕ್ಕ ರಾಜ್ಯಗಳು ಬೆಳೆದುವು. ಹೀಗೆ ಕ್ರಿ. 300ರ ಸಮಯದಲ್ಲಿ ಹಿಂದೂದೇಶದಲ್ಲಿ ಸಾಮ್ರಾಜ್ಯವಾವುದೂ ಇರ ಅನೇಕ ರಾಜ್ಯಗಳಿದ್ದು ಅವುಗಳೊಳಗೆ ಜಗಳಗಳಾಗುತ್ತಲೇ ಇದ್ದುವು.

---

5. ಗುಪ್ತರ ಸಾಮ್ರಾಜ್ಯ

ಹಿಂದೂದೇಶದಲ್ಲಿ ಅನೇಕ ರಾಜ್ಯಗಳಿದ್ದುದರಿಂದ ಆಗುತಿ ಗೊಂದಲವನ್ನು ನಿವಾರಿಸಿ, ಒಂದೆ ಸಾಮ್ರಾಜ್ಯವನ್ನು ಸ್ಥಾಪಿಸಲು ಕ್ರಿ. ನಾಲ್ಕನೆ ಶತಮಾನದ ಆದಿಯಲ್ಲಿ ಪಾಟಲಿಪುತ್ರ ಚಂದ್ರಗುಪ್ತನೆಂಬ ಗುಪ್ತವಂಶದ ಮಹತ್ವಾಕಾಂ ಯಾದ ಅರಸನು ಪ್ರಯತ್ನಿಸಿದನು. ಚಂದ್ರಗುಪ್ತ

ಚಂದ್ರಗುಪ್ತ
320-330

ತನ್ನ ಚಿಕ್ಕ ರಾಜ್ಯದ ನೆರೆಗಿರುವ ಪ್ರಬಲರಾದ ಲಿಚ್ಛವಿ ಜನರ ಅರಸ ಮಗಳನ್ನು ಮದುವೆಯಾದನು. ಅಂದು ಮೊದಲು ಅವನ ಖ್ಯಾತಿ ಆರಂಭವಾಯಿತು. ಲಿಚ್ಛವಿಯರ ಸಹಾಯದಿಂದ ಅವನು ಸುತ್ತಲಿ ರಾಜ್ಯಗಳನ್ನು ಗೆದ್ದು, ಬಂಗಾಳ ಅಖಾತದಿಂದ ಪ್ರಯಾಗದ ವರೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಅವನು ಪಟ್ಟಕ್ಕೆ ಬಂದಂದಿನಿಂ ಒಂದು ಹೊಸ ಶಕವೆ ಪ್ರಾರಂಭವಾಯಿತು.

ಚಂದ್ರಗುಪ್ತನ ತರುವಾಯ ಅವನ ಪ್ರೀತಿಯ ಮಗನಾ ಸಮುದ್ರಗುಪ್ತನು ಪಟ್ಟಕ್ಕೆ ಬಂದನು. ಅವನಿಗೆ ತನ್ನ ಸಾಮ್ರಾಜ್ಯವನ ಬೆಳೆಸಬೇಕೆಂಬ ಬಯಕೆಯು ಬಹಳವಾಗಿದ್ದಿತ ಅವನ ದಿಗ್ವಿಜಯವನ್ನು ವಿವರಿಸುವ ಒಂ ಸಂಸ್ಕೃತ ಪದ್ಯವು, ಅಶೋಕನು ಅಲ್ಲಾಹಾಬಾ

ಸಮುದ್ರಗುಪ್ತ
330-380

ನಲ್ಲಿ ಇರಿಸಿದ ಕಂಬದ ಮೇಲೆ ಕೆತ್ತಲ್ಪಟ್ಟಿದೆ. ಸಮುದ್ರಗುಪ್ತನು ಉತ್ತ ಹಿಂದೂದೇಶದ ಒಂಭತ್ತು ಅರಸರನ್ನು ಸೋಲಿಸಿ ಅವರ ರಾಜ್ಯಗಳ


ಗುಪ್ತರ ಸಾಮ್ರಾಜ್ಯ
ತಕ್ಷಶಿಲೆ
ಮಥುರಾ
ಅಯೋಧ್ಯೆ
ಮಾಳವ
ಪ್ರಯಾಗ
ನಲಂದ
ಗಯೆ
ಶಕರು
ಬನವಾಸಿ
ಮಂಗಳೂರು
ಕದಂಬರು
ಕಾಂಚಿ

ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು ಅದನ್ನು ಸಟ್ಲೇಜ್ ನದಿಯ ತನ
ವಿಸ್ತರಿಸಿದನು. ಅನಂತರ ತನ್ನ ಸಮರಶಕ್ತಿಯನ್ನು ಎಲ್ಲಾ ರಾಜ್ಯಗ
ಳ್ಳಿಯೂ ಪ್ರದರ್ಶಿಸಲೋಸ್ಕರ ದಕ್ಷಿಣ ಹಿಂದೂದೇಶಕ್ಕೆ ದಂಡೆತ್ತಿ ಹೋ
ಕಳಿಂಗ, ವೆಂಗಿ, ಪಲ್ಲವ ಮತ್ತು ಚೋ
ರಾಜರನ್ನು ಸೋಲಿಸಿ ತನಗೆ ದೊರೆ
ಅಪಾರ ದ್ರವ್ಯವನ್ನು ಮಹಾರಾಷ್ಟ್ರ
ಮಾರ್ಗವಾಗಿ ಹೋಗಿ ಪಾಟಲಿಪುತ್ರ
ಮರಳಿದನು. ಅಲ್ಲದೆ ಅವನು ಒಂದ
ಅಶ್ವಮೇಧ ಯಾಗವನ್ನೂ ಮಾಡಿದನು
ಇದರಿಂದ ಅವನ ಹೆಸರು ಹಿಂದೂದೇ
ಶದಲ್ಲೆಲ್ಲಾ ಪ್ರಖ್ಯಾತವಾಯಿತು. ಅವ
ಆಸ್ಥಾನಕ್ಕೆ ಸಿಂಹಳ ದ್ವೀಪದಿಂದ ರಾಯ
ಭಾರಿಗಳು ಬಂದು ತಮ್ಮ ದೇಶದ ಬೌ
ಯಾತ್ರಿಕರ ಸೌಕರ್ಯಕ್ಕಾಗಿ ಗಯೆ
ಯಲ್ಲಿ ಒಂದು ಮಠವನ್ನು ಕಟ್ಟಿಸಲ
ಅನುಮತಿಯನ್ನು ಪಡೆದರು.



ಸಮುದ್ರಗುಪ್ತ

ಸಮುದ್ರಗುಪ್ತನ ತರುವಾಯ ಅವನ ಮಗನಾದ ಎರಡನೆಯ
ಚಂದ್ರಗುಪ್ತನು ಪಶ್ಚಿಮದಲ್ಲಿ ಮಥುರಾ, ಮಾಳವ, ಗುಜರಾಥ ಮತ್ತ
ಕಾಠಿಯಾವಾಡದ ಶಕರಾಜರನ್ನು ಕೊಂದು, ಅವ

ವಿಕ್ರಮಾದಿತ್ಯ
380–414

ರಾಜ್ಯಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿ ವಿ
ಕ್ರಮಾದಿತ್ಯನೆಂಬ ಬಿರುದನ್ನು ಧರಿಸಿ ಜಗದ್ವಿಖ್ಯಾ
ತನಾದನು. ಅವನು ಉಜ್ಜಯಿನಿಯನ್ನು ತನ್ನ ರಾಜಧಾನಿಯನ್ನಾಗಿ ಮಾ
ಡಿಕೊಂಡು ಸುಮಾರು ಮೂವತ್ತನಾಲ್ಕು ವರ್ಷ ವೈಭವದಿಂದ ರಾ
ಜ್ಯವನ್ನಾಳಿದನು. ಗುಪ್ತ ಅರಸರು ದಯಾಳುಗಳೂ, ನಿಷ್ಪಕ್ಷಪಾತಿಗಳ
ಧರ್ಮಪರಿಪಾಲಕರೂ ಎಂದು ಹೆಸರುಗೊಂಡಿದ್ದರು. ಅವರು ಪ್ರಜೆಗ
ಮೇಲೆ ಹೆಚ್ಚಿನ ಕರಗಳನ್ನು ಹೊರಿಸುತ್ತಿರಲಿಲ್ಲ. ಅಪರಾಧಿಗಳಿಗೆ ಕಠಿ
ಶಿಕ್ಷೆಯನ್ನು ವಿಧಿಸುತ್ತಿರಲಿಲ್ಲ. ವ್ಯಾಪಾರಿಗಳಿಗೆ ಬಹಳ ಪ್ರೋತ್ಸಾ
ಹವನ್ನು ಕೊಡುತ್ತಿದ್ದರು. ಆ ಕಾಲದಲ್ಲಿ ಹಿಂದೂದೇಶದ ಅನೇಕ ವ

ಕರೂ ಯತಿಗಳೂ ಜಾವಾ, ಸುಮಾತ್ರಾ ಮತ್ತು ಕಂಬೋಡಿಯಾ ಪ್ರದೇಶಗಳಿಗೆ ಹೋಗಿ ಅಲ್ಲಿ ನೆಲೆಸಿಂತು ಹಿಂದೀ ಸಂಸ್ಕೃತಿಯನ್ನು ಅಲ್ಲಿಯೂ ಹರಡಿಸಿದರು. ವಿಕ್ರಮಾದಿತ್ಯನ ಆಸ್ಥಾನದಲ್ಲಿ ವಿದ್ವಾಂಸರಿಗೂ ಕವಿಗಳಿಗೂ ಯತಿಗಳಿಗೂ ಆಶ್ರಯವಿದ್ದಿತು. ಮಹಾಕವಿ ಕಾಳಿದಾಸನು ಈ ವಿಕ್ರಮಾದಿತ್ಯನ ಆಸ್ಥಾನದಲ್ಲಿಯೆ ಇದ್ದಿರಬೇಕೆಂದು ಚರಿತ್ರಕಾರರು ಊಹಿಸುತ್ತಾರೆ.



ವಿಕ್ರಮಾದಿತ್ಯ

ಫಾಹಿಯಾನ

ವಿಕ್ರಮಾದಿತ್ಯನ ಕಾಲದಲ್ಲಿ ಫಾಹಿಯಾನನೆಂಬ ಚೀನಾದೇಶದ ಬೌದ್ಧಯತಿಯು ಹಿಂದೂದೇಶದ ಯಾತ್ರೆಗಾಗಿ ತನ್ನ ದೇಶದಿಂದ ಹೊರಟು ನೆಲಮಾರ್ಗವಾಗಿ ಬಹು ಪ್ರಯಾಸದಿಂದ ಪ್ರಯಾಣಮಾಡಿ ಪಾಮಿರನ್ನು ದಾಟಿ ತಕ್ಷಶಿಲೆಗೆ ಬಂದನು. (ಕ್ರಿ.ಶ.399-414) ಅಲ್ಲಿಂದ ಬೌದ್ಧರಿಗೆ ಪವಿತ್ರವಾದ ಕ್ಷೇತ್ರಗಳನ್ನೆಲ್ಲಾ ಸಂದರ್ಶಿಸಿದನು. ಅವನು ಪಾಟಲಿಪುತ್ರದಲ್ಲಿ ಮೂರು ವರ್ಷಗಳನ್ನೂ ತಾಮ್ರಲಿಪ್ತಿಯಲ್ಲಿ ಎರಡು ವರ್ಷಗಳನ್ನೂ ಶಾಸ್ತ್ರಾಧ್ಯಯನದಲ್ಲಿ ಕಳೆದು ಜಲಮಾರ್ಗವಾಗಿ ಸಿಂಹಳಕ್ಕೆ ಹೋದನು. ಅವನು ಒಂಭತ್ತು ವರ್ಷ ಕಾಲ ಹಿಂದೂದೇಶದಲ್ಲಿ ಉಳಿದು, ತಾನು ಕಂಡ, ಕೇಳಿದ ವಿಷಯಗಳನ್ನೆಲ್ಲಾ ಸುರಸವಾಗಿ ಬರೆದಿಟ್ಟಿರುವನು. ಆ ಪುಸ್ತಕದಿಂದಲೆ ನಮಗೆ ವಿಕ್ರಮಾದಿತ್ಯನ ಕಾಲದ ಜನರ ಪರಿಸ್ಥಿತಿಯು ತಿಳಿದು ಬರುತ್ತದೆ.

ಹೂಣರು

ವಿಕ್ರಮಾದಿತ್ಯನ ತರುವಾಯ ಗುಪ್ತ ಸಾಮ್ರಾಜ್ಯವು ಮೆಲ್ಲಮೆಲ್ಲನೆ ಕಳೆಗುಂದಿತು. ಆ ಮೇಲೆ ಪಟ್ಟಕ್ಕೆ ಬಂದ ಗುಪ್ತರಾಜರೊಳಗೆ ರಾಜ್ಯಾಧಿಕಾರಕ್ಕಾಗಿ ಕಾದಾಟವಾಗುತಿದ್ದುದರಿಂದ ಸಾಮ್ರಾಜ್ಯದ ಅನೇಕ ಭಾಗಗಳು ಸ್ವತಂತ್ರವಾದುವು. ಅದಲ್ಲದೆ ಆ ಕಾಲದಲ್ಲಿಯೆ ಹೂಣರೆಂಬ ಬಲು ಕ್ರೂರಿಗಳಾದ ಜನರು ಮಂಗೋಲಿಯದ ಸುತ್ತಲಿನ ಪ್ರದೇಶದಿಂದ ಹೊರಟು ಯುರೋಪಿಗೂ ಪರ್ಷಿಯಕ್ಕೂ ಖೈಬರ್ ಕಣಿವೆಯ ಮಾರ್ಗವಾಗಿ ಹಿಂದೂದೇಶಕ್ಕೂ

ದಂಡೆತ್ತಿ ಬಂದರು. ಅವರು ಪಂಜಾಬು, ಮಾಳವ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಂಡು ಗುಪ್ತ ಅರಸರನ್ನು ಸೋಲಿಸಿ ಅವರ ರಾಜ್ಯದ ಹೆಚ್ಚಿನ ಅಂಶವನ್ನು ವಶಪಡಿಸಿಕೊಂಡರು. ಅವರ ಅರಸರೊಳಗೆ ಮಿಹಿರಗುಲನೆಂಬುವನು ಅತ್ಯಂತ ಕ್ರೂರಿಯೆಂದೂ ಬೌದ್ಧಮತ ವಿರೋಧಿಯೆಂದೂ ಹೆಸರುಗೊಂಡಿದ್ದನು. ಕ್ರಿ. ಶ. 400ರಿಂದ ಉತ್ತರ ಹಿಂದೂದೇಶದಲ್ಲೆಲ್ಲಾ ಅನೇಕ ಸಣ್ಣ ರಾಜ್ಯಗಳು ಹುಟ್ಟಿದುವು. ಈ ಸಮಯದಲ್ಲಿ ದಕ್ಷಿಣ ಹಿಂದೂದೇಶದಲ್ಲಿ ಪಲ್ಲವರು, ಚೋಳರು, ಚೇರರು, ಕದಂಬರು ಮತ್ತು ಚಾಳುಕ್ಯರು ರಾಜ್ಯವಾಳುತಿದ್ದರು.

---

6. ಹರ್ಷನ ಸಾಮ್ರಾಜ್ಯ

ಹರ್ಷನ ವೈಭವ ಯುಕ್ತವಾದ ಆಳಿಕೆ

ಆರನೇ ಶತಮಾನದ ಆರಂಭದಲ್ಲಿ ಹೂಣರನ್ನು ಇತರ ರಾಜರನ್ನು ಸೋಲಿಸಿ, ಹರ್ಷವರ್ಧನನೆಂಬ ಅರಸನು ಉತ್ತರ ಹಿಂದುಸ್ಥಾನದಲ್ಲಿ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದನು. ಇವನು ನಾಲ್ವತ್ತೊಂದು ವರ್ಷಕಾಲ ಬಹಳ ವೈಭವದಿಂದ ರಾಜ್ಯವನ್ನಾಳಿದನು. (606 647) ಇವನ ತಂದೆಯು ಇವನು ಚಿಕ್ಕವನಾಗಿರುವಾಗಲೇ ಸತ್ತುದರಿಂದ ಥಾನೇಶ್ವರದ ರಾಜ್ಯವನ್ನಾಳುವ ಭಾರವು ಇವನ ಮೇಲೆಯೇ ಬಿದ್ದಿತು. ಹರ್ಷನು ಆರು ವರ್ಷಗಳ ತನಕ ಯುದ್ಧಗಳಲ್ಲಿಯೇ ನಿರತನಾಗಿ ಮಾಳವ, ಗುಜರಾಥ, ವಲ್ಲಭಿ, ಮಗಧ, ಬಂಗಾಳ ಮತ್ತು ಒರಿಸ್ಸಾ ಪ್ರದೇಶಗಳನ್ನು ಗೆದ್ದುಕೊಂಡು, ಕನೋಜವನ್ನು ತನ್ನ ರಾಜಧಾನಿಯನ್ನಾಗಿ ಮಾಡಿ ಚೆನ್ನಾಗಿ ರಾಜ್ಯವನ್ನಾಳಿದನು. ದಕ್ಷಿಣವನ್ನು ಗೆದ್ದುಕೊಳ್ಳಬೇಕೆಂದು ಹರ್ಷನು ಪ್ರಯತ್ನಿಸಿದನಾದರೂ ಆಗ ದಕ್ಷಿಣಕ್ಕೆಲ್ಲಾ ಸಾರ್ವಭೌಮನಾಗಿದ್ದ ಚಾಳುಕ್ಯವಂಶದ ಪುಲಿಕೇಶಿಯು ಅವನನ್ನು ಸೋಲಿಸಿ ನರ್ಮದಾ ನದಿಯೇ ಅವನ ಸಾಮ್ರಾಜ್ಯದ ದಕ್ಷಿಣ ಮೇರೆಯೆಂದು ನಿರ್ಣಯಿಸಿದನು. ರಾಜ್ಯಭಾರದಲ್ಲಿ ಹರ್ಷನಿಗೆ ಅವನ ತಂಗಿಯಾದ ರಾಜಶ್ರೀಯು ನೆರವಾಗುತ್ತಿದ್ದಳು. ಹರ್ಷನು ಹಿಂದೂ ಧರ್ಮಾವಲಂಬಿಯಾಗಿದ್ದರೂ ಮೆಲ್ಲಗೆ ಅವನ ಮನಸ್ಸು ಬೌದ್ಧಮತದ

ಕಡೆಗೆ ಒಲಿಯುತೊಡಗಿ, ಅವನು ಮಹಾಯಾನ ಪಂಥದ ಅನುಯಾಯಿಯಾದನು. ಇದರಿಂದ ಬೌದ್ಧಮತಕ್ಕೆ ಪ್ರೋತ್ಸಾಹವು ದೊರೆತು ಪ್ರತಿ ಊರಿನಲ್ಲಿಯೂ ಬೌದ್ಧಮಠಗಳೂ ಪಾಠಶಾಲೆಗಳೂ ಉಂಟಾದುವು. ಹಿಂದೂದೇಶದಲ್ಲೆಲ್ಲಾ ಶಿಕ್ಷಣವು ಹಬ್ಬಿತು. ಮಗಧದಲ್ಲಿನ ನಲಂದದ ಭವ್ಯವಾದ ಗುರುಕುಲವೇ ಶಿಕ್ಷಣದ ಕೇಂದ್ರವಾಯಿತು. ಈ ವಿದ್ಯಾಲಯಕ್ಕೆ ಹರ್ಷನು ಇನ್ನೂರು ಗ್ರಾಮಗಳನ್ನು ಉಂಬಳಿಯಾಗಿ ಬಿಟ್ಟಿದ್ದನು. ಅಲ್ಲಿಯ ಶಿಕ್ಷಣವು ಆ ಕಾಲದಲ್ಲಿ ದೇಶವಿದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತಿದ್ದಿತು. ಅಲ್ಲಿಯ ಶಿಕ್ಷಕರು ಪ್ರಪಂಚದಲ್ಲೆಲ್ಲ ಗೌರವಿಸಲ್ಪಡುತಿದ್ದರು. ಹರ್ಷನು ಶೂರನೂ ಉದಾರಿಯೂ ಆಗಿದ್ದನು. ಅವನು ನಾಲ್ಕು ವರ್ಷಗಳಿಗೊಮ್ಮೆ ಪ್ರಯಾಗದಲ್ಲಿ ಮೋಕ್ಷಮಹಾಪರಿಷದವೆಂಬ ಉತ್ಸವವನ್ನು ಜರಗಿಸುತ್ತಿದನು. ಅಲ್ಲಿಗೆ ಎಲ್ಲಾ ಸಾಮಂತ ರಾಜರೂ ಪ್ರಾಮುಖ್ಯ ಬೌದ್ಧ ಭಿಕ್ಕುಗಳೂ ಬ್ರಾಹ್ಮಣರೂ ಇತರರೂ ಕಿಕ್ಕಿರಿದು ನೆರೆಯುತಿದ್ದರು. ಹರ್ಷನು ಬುದ್ಧನ ದೊಡ್ಡದೊಂದು ಪ್ರತಿಮೆಯುನ್ನಿರಿಸಿ ತನ್ನ ಬೊಕ್ಕಸದಲ್ಲಿ ಸಂಗ್ರಹವಾದ ದ್ರವ್ಯವನ್ನೆಲ್ಲಾ ನೆರೆದ ಜನರಿಗೆ ಹಂಚಿಕೊಡುತಿದ್ದನು. ಈ ರೀತಿಯಲ್ಲಿ ದಾನಶೂರರಾಗಿದ್ದ ಅರಸರು ಪ್ರಪಂಚದ ಇತಿಹಾಸದಲ್ಲಿಯೂ ವಿರಳರೆನ್ನಬೇಕು.

ಹ್ಯೂವೆನ್‌ತ್ಸಾಂಗನ ಯಾತ್ರೆ

ಹರ್ಷನಿಗೆ ಬೇರೆ ಬೇರೆ ಮತತತ್ವಗಳ ವಿಷಯ ಚರ್ಚೆ ನಡೆಸುವುದೆಂದರೆ ಬಹಳ ಪ್ರೀತಿ. ಅವನು ಆಗಾಗ ತನ್ನ ರಾಜಧಾನಿಯಾದ ಕನೋಜದಲ್ಲಿ ವಿವಿಧ ಮತಾಭಿಮಾನಿಗಳ ಸಭೆಯನ್ನು ಸೇರಿಸಿ, ಅವರೊಳಗೆ ನಡೆಯುವ ಚರ್ಚೆಯಲ್ಲಿ ತಾನೂ ಭಾಗಿಯಾಗುತಿದ್ದನು. ಹರ್ಷನು ಬೌದ್ಧನಾಗಿದ್ದರೂ ಎಲ್ಲ ಮತದವರನ್ನು ಏಕರೀತಿಯಲ್ಲಿ ಆದರಿಸುತಿದ್ದನು. ಆ ಕಾಲದಲ್ಲಿ ಚೀನಾದೇಶದಿಂದ ಹಿಂದೂದೇಶಕ್ಕೆ ಯಾತ್ರೆಗಾಗಿ ಬಂದ ಹ್ಯೂವೆನ್‌ತ್ಸಾಂಗ ಎಂಬ ಬೌದ್ಧ ಬಿಕ್ಕುವು ಬರೆದ ಪುಸ್ತಕದಿಂದ ಹರ್ಷನ ಕಾಲದ ಹೆಚ್ಚಿನ ಸಂಗತಿಗಳು ನಮಗೆ ತಿಳಿಯುತ್ತವೆ. ಹ್ಯೂವೆನ್‌ತ್ಸಾಂಗನು ಇಪ್ಪತ್ತೆಂಟು ವರ್ಷ ಪ್ರಾಯದಲ್ಲಿ ಚೀನಾದೇಶದಿಂದ ಹೊರಟು ನೆಲಮಾರ್ಗವಾಗಿ ಬಲು ಪ್ರಯಾಸದಿಂದ ಪ್ರಯಾಣ

ನಾಡಿ ಹಿಂದೂದೇಶಕ್ಕೆ ಬಂದು ಬೌದ್ಧ ಯಾತ್ರಾಸ್ಥಳಗಳನ್ನೆಲ್ಲಾ ಸ
ಂದರ್ಶಿಸುತ್ತಲೂ ಪ್ರಸಿದ್ಧ ನಾಲಂದ ವಿಶ್ವವಿದ್ಯಾಲಯದಲ್ಲಿಯೂ ಪ್ರ
ದೇಶಗಳಲ್ಲಿಯೂ ಇದ್ದು ಬೌದ್ಧಮತಗ್ರಂಥಗಳನ್ನು ಸಂಪಾದಿಸಿಕೊಂಡ
ಈ ದೇಶದ ಎಲ್ಲಾ ಅರಸರಿಂದಲೂ ಸ್ನೇಹ ಬೆಳೆಸಿ ಪ್ರಖ್ಯಾತನಾದ
ಹರ್ಷನೂ ಅವನು ಮಿತ್ರನಾಗಿದ್ದು ಅವನ ಮಾತುಕತೆಯ
ಮಲ್ಲಿಯೂ ದೊಡ್ಡ ಸಭೆಗಳಲ್ಲಿಯೂ ಭಾಗವಹಿಸಿದ್ದನು. ಅ
ದಕ್ಷಿಣ ಹಿಂದೂದೇಶಕ್ಕೂ ಹೋಗಿ ಅಲ್ಲಿನ ಪ್ರವಾಸಮಾಡಿದ್ದಲ್ಲದೆ
ಕೊಂಡಿದ್ದನು. ಇವರಿಂದ ಅನೇಕ ಬರೆದ ಪುಸ್ತಕವು ಚರಿತ್ರಾ
ಬಹಳ ಪ್ರಯೋಜನಕಾರಿಯಾಗಿದೆ. ಇತ್ಸಿಂಗ್ ಎಂಬುವನು ಹಲವು
ವರ್ಷಗಳನ್ನು (ಕ್ರಿ. ಶ. 671-695) ಹಿಂದೂದೇಶದಲ್ಲಿ ಕಳೆದು ಅ
ಪುಸ್ತಕಗಳನ್ನೂ, ಬೌದ್ಧ ಮೂರ್ತಿಗಳನ್ನೂ, ಬುದ್ಧನ ಪವಿತ್ರವಾದ
ಶೇಷಗಳನ್ನೂ ಸಂಗ್ರಹಿಸಿಕೊಂಡು ಹಿಂದಿರುಗಿದನು. ಸ್ವದೇ
ಶಕ್ಕೆ ಬಂದು ನಂತರದಲ್ಲಿಯೂ ನಾನು ಕಂಡ ಹೆಚ್ಚಿನ ಪುಸ್ತಕಗ
ಚೀನೀ ಭಾಷೆಯಲ್ಲಿ ಭಾಷಾಂತರಿಸಿದನು.

ಹರ್ಷನ ಕಾಲದಲ್ಲಿ ದಕ್ಷಿಣ ಹಿಂದೂದೇಶದಲ್ಲಿ ಚಾಳುಕ್ಯ
ಪಲ್ಲವರೂ ಆಳುತ್ತಿದ್ದರು. ಚಾಳುಕ್ಯರು ಬಾದಾಮಿಯನ್ನು

ಚಾಳುಕ್ಯರೂ ಪಲ್ಲವರೂ

ರಾಜಧಾನಿಯನ್ನಾಗಿ ಮಾಡಿ ನರ್ಮದಾ ನದಿ
ವರೆಗೆ ತಮ್ಮ ಸಾಮ್ರಾಜ್ಯವನ್ನು ಬೆಳೆಸಿ
ದ್ವಿತೀಯ ಪುಲಕೇಶಿಯು
ಕೇಶಿಯೇ ಈ ವಂಶದ ಪ್ರಖ್ಯಾತ ಅರಸನು. ಚಾಳುಕ್ಯರಿಗೂ
ಭಾಗ್ಯ ನಾಡು ದಕ್ಷಿಣದಲ್ಲಿ ಆಳುತ್ತಿದ್ದ ಪಲ್ಲವರಿಗೂ ಅನೇಕ
ಗಳಾಗುತ್ತಿದ್ದುವು. ಕ್ರಿ. ಶ. 753ರೊಳಗೆ ಚಾಳುಕ್ಯ ರಾಜ್ಯವು ಮು
ಹೋಗಿ ರಾಷ್ಟ್ರಕೂಟರೆಂಬ ಹೊಸ ವಂಶದವರು ಆ ಪ್ರದೇಶದಲ್ಲಿ
ಯನ್ನು ನಡೆಸಿದರು. ರಾಷ್ಟ್ರಕೂಟರು ನಾಸಿಕದ ಸಮೀಪದಲ್ಲಿರುವ
ಕ್ಷೇತ್ರವನ್ನು ರಾಜಧಾನಿಯನ್ನಾಗಿ ಮಾಡಿ ಪಶ್ಚಿಮದಲ್ಲೆಲ್ಲಾ ಆಳು
ದರು. ಅವರ ಕಾಲದಲ್ಲಿ ಕಟ್ಟಿಸಿದ ಎಲ್ಲೋರದ ಗುಡಿಗಳ ಗು
ಈಗಲೂ ಉಳಿದಿವೆ. ಪಲ್ಲವರ ರಾಜ್ಯವು ಕೆಲಕಾಲದ ತನ
ಶಿಥಿಲವಾಯಿತು. ಅವರು ಮಹಾಬಲಿಪುರ, ಕಾಂಚಿ, ಮೊದ

ಯುಗಗಳಲ್ಲಿ ಕಟ್ಟಿದ ದೇವಾಲಯಗಳನ್ನು ನಾವು ಈಗಲೂ ನೋಡಬಹುದು. ಸಾಧಾರಣ ಒಂಭತ್ತನೇ ಶತಮಾನದಲ್ಲಿ ಪಲ್ಲವ ರಾಜ್ಯವು ಬಲಗುಂದಿತು. ತಂಜಾವೂರಿನ ಚೋಳರು ಪ್ರಬಲರಾಗತೊಡಗಿದರು. ಅಂದಿನಿಂದ ದಕ್ಷಿಣ ಹಿಂದೂದೇಶದಲ್ಲಿ ಚೋಳರೇ ಪ್ರಾಮುಖ್ಯರಾಗಿ ತಮ್ಮ ಸಾಮ್ರಾಜ್ಯವನ್ನು ಬೆಳೆಸುತ್ತಾ ಬಂದರು. ಅವರು ಮೊದಲು ರಾಷ್ಟ್ರ



ಪುಲಿಕೇಶಿಯ ರಾಜಸಭೆ

ಕೂಟರವರೊಡನೆಯೂ, ಆ ರಾಜ್ಯವು ಅಳಿದ ಮೇಲೆ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿ ಆ ಪ್ರದೇಶವನ್ನು ಆಳುತ್ತಿದ್ದ ಚಾಳುಕ್ಯರೊಡನೆಯೂ, ಆಗಾಗ ಹೋರಾಡಬೇಕಾಗಿದ್ದಿತು.

ಚೋಳರು

ಚೋಳ ರಾಜರಲ್ಲಿ ಮೊದಲನೆಯ ರಾಜರಾಜನು (ಕ್ರಿ. ಶ. 985-1014) ಪ್ರಮುಖನಾಗಿದ್ದನು. ಅವನು ಘಜನಿಯ ಮಹಮೂದನ ಸಮಕಾಲೀನನು; ಅತನು ವೆಂಗಿ, ಮಧುರೆ, ಮೈಸೂರು, ಮಲಬಾರುಗಳನ್ನು ಜಯಿಸಿದುದಲ್ಲದೆ ಉತ್ತರದಲ್ಲಿ ಕಳಿಂಗವನ್ನೂ ದಕ್ಷಿಣದಲ್ಲಿ ಸಿಂಹಳವನ್ನೂ ತನ್ನ ಸಾಮ್ರಾಜ್ಯಕ್ಕೆ ಸೇರಿಸಿದ್ದನು. ಅವನ ಹತ್ತಿರ ಒಳ್ಳೇ ಹಡಗುಪಡೆಯಿದ್ದಿತು.

ತಂಜಾವೂರಿನಲ್ಲಿರುವ ಉನ್ನತವಾದ ರಾಜರಾಜೇಶ್ವರೀ ದೇವಾಲಯವನ್ನು ಆತನೇ ಕಟ್ಟಿಸಿದನು. ಅವನ ಮಗನಾದ ರಾಜೇಂದ್ರ ಚೋಳನು (1014-1042) ಅವನಿಗಿಂತಲೂ ಮಿಗಿಲೆನಿಸಿದನು. ರಾಜೇಂದ್ರನ ಸೈನ್ಯವು ಬಂಗಾಳದ ವರೆಗೂ ಹೋಗಿ ಅಲ್ಲಿನ ಪಾಲರೆಂಬ ಮನೆತನದ ಅರಸರನ್ನು ಸೋಲಿಸಿತು. ಆತನ ಹಡಗುಪಡೆಯು ಬರ್ಮಾ ಮಲಯ ದೇಶಗಳನ್ನೂ, ಅಲ್ಲಿಯ ಕೆಲವು ಪೂರ್ವ ದ್ವೀಪಗಳನ್ನೂ, ನಿಕೊಬಾರ, ಅಂಡಮಾನ ಮತ್ತು ಲಕ್ಷದ್ವೀಪಗಳನ್ನೂ ಜಯಿಸಿತು. ಅವುಗಳೆಲ್ಲ ಚೋಳ ಸಾಮ್ರಾಜ್ಯಕ್ಕೆ ಸೇರಿದುವು. ಈ ಅರಸನ ಕಾಲದಲ್ಲಿ ಚೋಳ ರಾಜ್ಯವು ವೈಭವದ ತುತ್ತತುದಿಯನ್ನೇರಿತ್ತು. ಅವನ ಮರಣಾನಂತರ ಅದು ಮೆಲ್ಲಮೆಲ್ಲನೆ ದುರ್ಬಲವಾಗುತ್ತಾ ಬಂದು ಕ್ರಿ. ಶ. 1118ರ ತರುವಾಯ ಸಾಮ್ರಾಜ್ಯದ ಒಂದೊಂದೇ ಭಾಗವು ಸ್ವತಂತ್ರವಾಯಿತು. ಮೈಸೂರಿನಲ್ಲಿ ಹೊಯ್ಸಳರು ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿ ರಾಜ್ಯ ಸ್ಥಾಪನೆ ಮಾಡಿದರು.

---

7. ರಜಪೂತ ರಾಜ್ಯಗಳು

ಹರ್ಷನ ನಂತರ ಹಿಂದೂದೇಶದ ಪರಿಸ್ಥಿತಿ

ಕ್ರಿ. ಶ. 647ರಲ್ಲಿ ಹರ್ಷನು ಸಾಯಲು ಅವನ ಸಾಮ್ರಾಜ್ಯವು ನುಚ್ಚುನೂರಾಗಿ ಹೋಯಿತು. ಅಲ್ಲಿಂದ ಮುಂದೆ ಐನೂರೈವತ್ತು ವರ್ಷಗಳ ವರೆಗೆ ಅಂದರೆ ಕ್ರಿ. ಶ. 1190ರ ತನಕ ಹಿಂದೂದೇಶದಲ್ಲಿ ಬೇರೆ ಬೇರೆ ರಾಜ್ಯಗಳು ತಲೆದೋರಿದುವು. ರಾಜ್ಯಾಧಿಕಾರಕ್ಕಾಗಿ ಒಬ್ಬರೊಡನೊಬ್ಬರು ಹೋರಾಡಿಕೊಂಡರು. ಆಗಲೇ ಪರದೇಶದವರು ಬಂದು ಈ ದೇಶದಲ್ಲಿ ಕೊಳ್ಳೆ ಹೊಡೆಯುತ್ತಲೂ ಇದ್ದರು. ರಾಜಕೀಯ ವಾತಾವರಣವು ಈ ರೀತಿ ಕೆಟ್ಟುಹೋಗಿದ್ದರೂ ಜನರ ಜೀವನದಲ್ಲಿಯೂ, ಇತರ ವಿಷಯಗಳಲ್ಲಿಯೂ ಮೆಲ್ಲನೆ ಬದಲಾವಣೆಗಳು ಉಂಟಾಗುತ್ತಲೇ ಹೋದುವು. ಈ ಐನೂರೈವತ್ತು ವರ್ಷಗಳ ದೀರ್ಘ ಅವಧಿಯಲ್ಲಿ ಬೌದ್ಧಮತವೇ ಕ್ಷೀಣವಾಗುತ್ತ ಬಂದಿತು. ಮಹಾಯಾನ ಪಂಥದ ಹಲವು ಪದ್ಧತಿಗಳೂ, ತತ್ವಗಳೂ ಹಿಂದೂಮತದಲ್ಲಿ

ಸೇರಿಕೊಂಡು ಹಿಂದೂಮತವು ರೂಪಾಂತರಗೊಂಡಿತು. ಈ ನವೀನ ಹಿಂದೂಮತವನ್ನು ಅನೇಕರು ಪುರಸ್ಕರಿಸಿದರು. ಸಾಮಾನ್ಯರಿಗೂ ಹಿಂದೂಮತದ ತತ್ವಗಳು ತಿಳಿಯುವಂತೆ ಅನೇಕ ಪುರಾಣಗಳು ಬರೆಯಲ್ಪಟ್ಟುವು. ದೇವಾಲಯಗಳಲ್ಲಿ ಹಿಂದೂ ದೇವರ ವಿಗ್ರಹಗಳು ಪ್ರತಿಷ್ಠಿತವಾಗಿ ಪೂಜೆಗಳು ಆರಂಭವಾದುವು. ಅಹಿಂಸೆಯೂ ಹಿಂದೂ ಧರ್ಮದ ಒಂದು ತತ್ವವಾಯಿತು. ಬುದ್ಧನು ಪರಮಾತ್ಮನ ಅವತಾರ ಪುರುಷನೆಂದು ಪರಿಗಣಿಸಲ್ಪಟ್ಟು ಪೂಜಾರ್ಹನಾದನು. ಯಜ್ಞಗಳ ಪ್ರಾಶಸ್ತ್ಯವು ಕಡಿಮೆಯಾಗಿ ಪೂಜೆ, ಪುನಸ್ಕಾರ, ಭಜನೆಗಳ ಪ್ರಾಧಾನ್ಯವು ಹೆಚ್ಚಿತು. ಈ ರೀತಿ ಬೆಳೆದು ಬಂದ ಹಿಂದೂ ಮತವು ಹಿಂದೂ ದೇಶದಲ್ಲಿನ ಬೌದ್ಧ ಮತವನ್ನು ಮೂಲೆಗೊತ್ತಿ ಬಿಟ್ಟಿತು. ಬೌದ್ಧ ಚೈತ್ಯಾಲಯಗಳ ಬದಲು ಎಲ್ಲೆಲ್ಲೂ ಹಿಂದೂ ದೇವಾಲಯಗಳು ನಿರ್ಮಿತವಾದುವು. ಅರಸರೆಲ್ಲರೂ ಹಿಂದೂಧರ್ಮಾವಲಂಬಿಗಳಾಗಿ ಹಿಂದೂ ದೇವಾಲಯಗಳಿಗೇ ದಾನ ಧರ್ಮಗಳನ್ನು ಮಾಡತೊಡಗಿದರು.

ರಜಪೂತರು

ಆ ಕಾಲದಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಆಳುತಿದ್ದ ರಾಜಮನೆತನದವರನ್ನೂ ಅವರ ವೀರ ಅನುಯಾಯಿಗಳನ್ನೂ ನಾವು ರಜಪೂತರೆಂದು ಕರೆಯುವ ವಾಡಿಕೆ ಇದೆ. ರಜಪೂತ ಅರಸರೂ ಸೈನಿಕರೂ ತಾವು ಹಿಂದಿನ ಕಾಲದ ಕ್ಷತ್ರಿಯರ ವಂಶದವರೆಂದು ಅನ್ನುತ್ತ ಅವರ ನಡೆವಳಿಕೆಯ ರೀತಿಯನ್ನೆ ಅನುಸರಿಸುತಿದ್ದರು. ಅವರು ಧರ್ಮಾಭಿಮಾನಿಗಳಾಗಿದ್ದರು. ಸ್ವಭಾವತಃ ಕ್ಷಾತ್ರಬಲದಿಂದ ತುಂಬಿದ್ದರು. ಕ್ಷಾತ್ರಧರ್ಮಕ್ಕೆ ವ್ಯತಿರಿಕ್ತವಾಗಿ ಅವರು ಎಂದೂ ವರ್ತಿಸುತ್ತಿರಲಿಲ್ಲ. ರಜಪೂತ ಹೆಂಗಸರೂ ಕೂಡ ಅತ್ಯಂತ ಧೀರೆಯರೂ ಗೌರವಾನ್ವಿತೆಯರೂ ಎಂತಹ ಕಷ್ಟಗಳಿಗೂ ಹೆದರದವರೂ ಆಗಿದ್ದರೆಂದು ಹೆಸರು ಪಡೆದಿರುತ್ತಾರೆ.


ಆ ಕಾಲದ ರಾಜ್ಯಗಳ ಸಂಪೂರ್ಣ ಚರಿತ್ರೆಯನ್ನು ಈ ಚಿಕ್ಕ ಪುಸ್ತಕದಲ್ಲಿ ಕೊಡಲಾಗುವುದಿಲ್ಲ. ಪಂಜಾಬ, ಢಿಲ್ಲಿ, ಕನೋಜ, ಅಜಮೀರ, ಮಾಳವ, ಅನಿಲವಾರ, ಸಿಂಧ, ಬಂಗಾಳ ಇವೇ ಆಗ ಉತ್ತರ ಹಿಂದುಸ್ಥಾನದಲ್ಲಿ ಮುಖ್ಯ ರಾಜ್ಯಗಳು. ಆ ಕಾಲದಲ್ಲಿ ನಮ್ಮ ದೇಶದ ಪಶ್ಚಿಮಕ್ಕಿರುವ ಅರಬಸ್ಥಾನದಲ್ಲಿ ಮುಹಮ್ಮದ ಪೈಗಂಬರರು

'ಇಸ್ಲಾಮ್' ಎಂಬ ಹೊಸ ಮತವನ್ನು ಪ್ರಚಾರ ಮಾಡಿದ್ದರು. ಅರಬರೆಲ್ಲರೂ ಈ ಹೊಸ ಮತವನ್ನು ಅಂಗೀಕರಿಸಿ 'ದೇವರು ಒಬ್ಬನೇ; ಮೂರ್ತಿಪೂಜೆಯನ್ನು ಮಾಡಬಾರದು; ಎಲ್ಲ ಜನರೂ ಸರಿಸಮಾನರು.' ಎಂಬ ಇಸ್ಲಾಮ್ ಮತದ ಉತ್ತಮ ತತ್ವಗಳನ್ನು ದೇಶ ವಿದೇಶಗಳಲ್ಲಿ ಹಬ್ಬಿಸಲು ಬದ್ಧಕಂಕಣರಾಗಿದ್ದರು. ಯಾವ ರಾಜ್ಯವೂ ಇಸ್ಲಾಮ್ ಮತವನ್ನು ವಿರೋಧಿಸಲಾರದೆ ಹೋಯಿತು. ಇಸ್ಲಾಮ್ ಮತವು ಮೆಸಪೊಟೇಮಿಯಾ, ಪರ್ಶಿಯಾ ದೇಶಗಳಲ್ಲಿ ಮಾತ್ರವಲ್ಲದೆ, ಅಫಘಾನಿಸ್ಥಾನದಲ್ಲಿಯೂ, ಅದರ ಸುತ್ತುಮುತ್ತಲಿನ ಮರುನಾಡು ಪ್ರದೇಶದಲ್ಲೂ ಹಬ್ಬಿಕೊಂಡಿತು. ಎಂಟನೇ ಶತಮಾನದ ಆದಿಯಲ್ಲಿ ಅರಬರಿಗೆ ಸಿಂಧುಪ್ರದೇಶಕ್ಕೆ ದಂಡೆತ್ತಿ ಬರುವ ಸಂದರ್ಭವು ಒದಗಿತು. ಆಗ ಒಬ್ಬ ರಜಪೂತ ಅರಸನು ಅಲ್ಲಿ ಆಳುತ್ತಿದ್ದನು. ವ್ಯಾಪಾರಕ್ಕಾಗಿ ಅರಬ ವರ್ತಕರು ಇಲ್ಲಿಗೆ ಬಂದು ಹೋಗುತ್ತಿದ್ದುದರಿಂದ ಅವರಿಗೆ ಆ ದೇಶದ ಪರಿಚಯವು ಚೆನ್ನಾಗಿ ಆಗಿದ್ದಿತು. ಕ್ರಿ. ಶ. 711ರಲ್ಲಿ ಮಹಮ್ಮದ ಬಿನ್‌ಕಾಸಿಮ್ ಎಂಬ ದಳಪತಿಯು ಸೈನ್ಯಸಮೇತನಾಗಿ ಸಿಂಧಕ್ಕೆ ಬಂದು, ಅರಸನನ್ನು ಸೋಲಿಸಿ ಕೊಂದು, ರಾಜ್ಯವನ್ನು ಸ್ವಾಧೀನಪಡಿಸಿಕೊಂಡನು. ಉಳಿದ ರಜಪೂತರು ತಟಸ್ಥರಾಗಿದ್ದರು. ಅರಬರಿಗೆ ರಜಪೂತರ ಶಕ್ತಿಯು ಗೊತ್ತಿಲ್ಲದಿದ್ದುದರಿಂದ ಅವರನ್ನು ಕೆಣಕದೆ ಮುಲ್ತಾನದ ವರೆಗಿನ ತಮ್ಮ ರಾಜ್ಯವನ್ನು ಆಳಿಕೊಂಡಿದ್ದರು. ಹೀಗೆ ಮುನ್ನೂರು ವರ್ಷಗಳ ವರೆಗೆ ರಾಜ್ಯವು ಅರಬರ ಕೈಯಲ್ಲಿಯೇ ಉಳಿದಿದ್ದಿತು.

ಹಿಂದೂದೇಶಕ್ಕೆ ಮಹಮ್ಮದೀಯರ ಆಗಮನ

ಹಿಂದೂದೇಶದ ಹೊರಗೂ ಹಲವೆಡೆಗಳಲ್ಲಿ ಮುಸಲ್ಮಾನ ರಾಜ್ಯಗಳು ಬೆಳೆಯುತ್ತ ಬಂದುವು. ಒಂಭತ್ತನೇ ಶತಮಾನದ ಮಧ್ಯಕಾಲದಲ್ಲಿ ಕಾಬೂಲು ಪ್ರದೇಶವು ಮುಸಲ್ಮಾನರ ವಶವಾಯಿತು. ಅಲ್ಲಿಂದ ಮೇಲೆ ಅಲ್ಲಿನ ಜನರೆಲ್ಲರೂ ಮುಸಲ್ಮಾನರಾದರು. ಹತ್ತನೆ ಶತಮಾನದ ಕೊನೆಯ ವರ್ಷಗಳಲ್ಲಿ ಅಫಘಾನಿಸ್ಥಾನದಲ್ಲಿ ಒಬ್ಬ ತುರುಕ (Turk) ವಂಶದ ಅರಸನು ಆಳುತ್ತಿದ್ದನು. ಅವನು ಘಜನಿ ಪಟ್ಟಣವನ್ನು ರಾಜಧಾನಿ

ಘಜನಿಯ ಸುಲ್ತಾನರು


ಘಜನಿ ಮಹಮೂದನ
ಕಾಲದ
ಹಿಂದೂಸ್ಥಾನ.
ಪೇಶಾವರ
ಲಾಹೋರ
ಥಾನೇಶ್ವರ
ದಿಲ್ಲಿ
ಚೌಹಾಣರು
ಮಥುರಾ
ಅಜಮೀರ
ಪ್ರತಿಹಾರರು
ಗ್ವಾಲಿಯರ್
ಪ್ರಯಾಗ
ಪಾಲರು
ಅನಿಹ್ಲಾರ
ಪರಮರು
ದೇವಗಿರಿ
ಕಾಂಚಿ

ಯನ್ನಾಗಿ ಮಾಡಿಕೊಂಡು ರಾಜ್ಯವನ್ನು ವಿಸ್ತರಿಸಿದನು. ಅವನ ಗುಲಾಮನಾದ ಸಬಕ್ತಜೀನನು ಕ್ರಿ. ಶ. 977ರಲ್ಲಿ ಘಜಿನಿಯ ಅರಸನಾದನು. ಅವನ ಮಗನೇ ಘಜನಿಯ ಮಹಮೂದನು.

ಘಜಿನಿಯ ಮಹಮೂದನು 997–1030

ಘಜಿನಿಯ ಮಹಮೂದನು ಕ್ರಿ. ಶ. 997ರಲ್ಲಿ ಪಟ್ಟಕ್ಕೆ ಬಂದನು. ರಾಜ್ಯವನ್ನು ವಿಸ್ತರಿಸಬೇಕೆಂದೂ ಸಂಪತ್ಸಮೃದ್ಧವಾದ ಹಿಂದೂದೇಶಕ್ಕೆ ಹೋಗಿ ಕೊಳ್ಳೆಹೊಡೆದು ಅಲ್ಲಿನ ಐಶ್ವರ್ಯವನ್ನು ಸೂರೆಮಾಡಿ ತರಬೇಕೆಂದೂ, ಆತನ ಆಸೆಯಾಗಿದ್ದಿತು. ಹಿಂದೂದೇಶದ ರಜಪೂತ ಅರಸರು ಒಂದುಗೂಡಿ ತನ್ನನ್ನು ಇದಿರಿಸಲಾರರೆಂದು ಆತನಿಗೆ ಖಂಡಿತವಾಗಿ ತಿಳಿದಿದ್ದಿತು. ಶೂರನೂ, ಪ್ರತಾಪಿಯೂ ಆಗಿದ್ದ ಮಹಮೂದನು ಕ್ರಿ. ಶ. 999ರಲ್ಲಿ ಖೈಬರ್ ಕಣಿವೆಯ ಮಾರ್ಗವಾಗಿ ಹಿಂದೂದೇಶಕ್ಕೆ ಇಳಿದು ಲಾಹೋರಿನ ಅರಸನಾದ ಜಯಪಾಲನನ್ನು ಸೋಲಿಸಿ ಆ ಪ್ರದೇಶದ ದೇವಸ್ಥಾನಗಳಲ್ಲಿದ್ದ ಐಶ್ವರ್ಯವನ್ನೆಲ್ಲಾ ಕೊಳ್ಳೆಹೊಡೆದು ತನ್ನೂರಿಗೆ ಮರಳಿದನು. ಆತನು ಇನ್ನೊಮ್ಮೆ ಬಂದ್ದಾಗ ಜಯಪಾಲನ ಮಗನಾದ ಅನಂಗಪಾಲನು ಆತನನ್ನು ಎದುರಿಸಿ ಸೋತುಹೋದನು. ಕೆಲವು ವರ್ಷಗಳಲ್ಲಿ ಜಯಪಾಲನ ವಂಶವೇ ಅಳಿದುಹೋದುದರಿಂದ ಪಂಜಾಬ ಪ್ರಾಂತವು ಮಹಮೂದನ ರಾಜ್ಯಕ್ಕೆ ಸೇರಿಹೋಯಿತು.

ದಂಡೆತ್ತಿ ಬಂದುದು

ಮಹಮೂದನು ಹೀಗೆ ಹದಿನೇಳು ಸಲ ಹಿಂದೂದೇಶಕ್ಕೆ ಬಂದು ಇಲ್ಲಿನ ದೇವಾಲಯಗಳನ್ನೂ ಪಟ್ಟಣಗಳನ್ನೂ ಕೊಳ್ಳೆಹೊಡೆದು ಅಪಾರವಾದ ದ್ರವ್ಯವನ್ನು ಘಜಿನಿಗೆ ಸಾಗಿಸಿದನು. ರಜಪೂತ ಅರಸರಾರೂ ಅವನನ್ನು ಎದುರಿಸಲು ಶಕ್ತರಾಗಲಿಲ್ಲ. ಅವನು ಮಥುರಾ, ಕನೋಜ ಮುಂತಾದ ಸ್ಥಳಗಳಲ್ಲಿದ್ದ ಹಿಂದೂಗಳ ಪವಿತ್ರವಾದ ದೇವಾಲಯಗಳನ್ನು ಪುಡಿ ಮಾಡಿದುದಲ್ಲದೆ ಕ್ರಿ. ಶ. 1024ರಲ್ಲಿ ಸೋಮನಾಥದ ಪ್ರಖ್ಯಾತವಾದ ದೇವಾಲಯವನ್ನೂ ಕೊಳ್ಳೆಹೊಡೆದು ಹಾಳುಗೆಡವಿದನು. ಮಹಮೂದನು ಪಂಜಾಬನ್ನು ಮಾತ್ರ ತನ್ನ ರಾಜ್ಯಕ್ಕೆ ಸೇರಿಸಿ ಇತರ ರಾಜ್ಯಗಳ ಗೋಜಿಗೆ ಹೋಗಲಿಲ್ಲ. ಅವನ ಮರಣಾನಂತರ ಇಲ್ಲಿಯ ರಜಪೂತ ರಾಜರು ನಿಶ್ಚಿಂತರಾಗಿ ತಮ್ಮ ತಮ್ಮ ರಾಜ್ಯಗಳನ್ನು ಆಳತೊಡಗಿದರು.

ಹಿಂದೂದೇಶದಿಂದ ಕೊಂಡೊಯ್ದು ಸಾಮಾನುಗಳಿಂದಲೂ ದ್ರವ್ಯದಿಂದಲೂ ಮಹಮೂದನು, ಇಲ್ಲಿಂದಲೇ ಸೆರೆಯಾಗಿ ಕೊಂಡುಹೋದ

ಘಜಿನಿಯ ವೈಭವ

ಗುಲಾಮರಿಂದ ಘಜಿನಿಯಲ್ಲಿ ಸುಂದರವಾದ ಅರಮನೆಗಳನ್ನೂ, ಮಸೀದಿಗಳನ್ನೂ ಕಟ್ಟಿಸಿದನು. ಘಜಿನಿ ಪಟ್ಟಣದ ಸೌಂದರ್ಯವು ಬೆಳೆದು ಬಲು ಪ್ರಖ್ಯಾತವಾಯಿತು. ಮಹಮೂದನ ಆಸ್ಥಾನದಲ್ಲಿ ಫಿರ್‌ದೋಸಿಯಂತಹ ಮಹಾಮಹಾ ಕವಿಗಳೂ ಇದ್ದರು.

ಮಹಮೂದನ ತರುವಾಯದ ಅರಸರು ಅವನಷ್ಟು ಬಲಿಷ್ಠರಾಗಿರಲಿಲ್ಲ. ಅವರಿಗೂ ಘೋರ್ ಎಂಬಲ್ಲಿನ ಪಂಗಡದವರಿಗೂ ಆಗಾಗ

ಘೋರೀಮಹಮ್ಮದನು

ಜಗಳಗಳಾಗತೊಡಗಿದುವು. ಕ್ರಿ. ಶ. 1150ರಲ್ಲಿ ಘೋರದ ಅರಸನೊಬ್ಬನು ಘಜಿನಿಯನ್ನು ಹಾಳುಮಾಡಿ ಅಲ್ಲಿನ ಅರಸನನ್ನು ಪಂಜಾಬಿಗೆ ಓಡಿಸಿದನು. ಅಲ್ಲಿಂದ ಮುಂದೆ ಘೋರ ಮನೆತನದವರೇ ಅಫಘಾನಿಸ್ಥಾನದಲ್ಲಿ ಹೆಸರುಹೊಂದುತ್ತ ಬಂದರು. 1161ರಲ್ಲಿ ಘೋರೀ ಮಹಮ್ಮದನೆಂಬವನು ಅಫಘಾನಿಸ್ಥಾನದಲ್ಲೆಲ್ಲ ಬಲುಶೂರನೂ ಸಮರ್ಥನೂ ಎಂದು ಹೇಳಿಸಿಕೊಂಡನು. ನೂರಆರ್ವತ್ತು ವರುಷಗಳ ಹಿಂದೆ ಘಜಿನಿಯ ಮಹಮೂದನು ಗೈದಂತೆ ತಾನೂ ಹಿಂದೂದೇಶಕ್ಕೆ ದಂಡೆತ್ತಿಹೋಗಿ ಅಲ್ಲಿಯ ಸಂಪತ್ತನ್ನು ಕೊಳ್ಳೆಹೊಡೆಯಬೇಕೆಂದು ಅವನಿಗೆ ಮನಸ್ಸಾಯಿತು. ಮನಸ್ಸಾದುದೇ ತಡ, ಹಿಂದೂದೇಶಕ್ಕೆ ನುಗ್ಗಿಯೇ ಬಿಟ್ಟನು. ಆಗ ರಜಪೂತರ ಬೇರೆಬೇರೆ ಮನೆತನದ ಅರಸರು ಹಿಂದುಸ್ಥಾನದ ಬೇರೆ ಬೇರೆ ಪ್ರದೇಶಗಳಲ್ಲಿ ಆಳುತ್ತಿದ್ದರು. ಢಿಲ್ಲಿಯಲ್ಲಿ ಪೃಥ್ವೀರಾಜನಿದ್ದನು; ಕನೋಜದಲ್ಲಿ ಜಯಚಂದನಿದ್ದನು. ಬಂಗಾಳ, ಬಿಹಾರಗಳಲ್ಲಿ, ಪಾಲ ಮತ್ತು ಸೇನ ಮನೆತನದ ಅರಸರು ಆಳುತ್ತಿದ್ದರು. ದೇವಗಿರಿಯಲ್ಲಿ ಯಾದವರೆಂಬವರು ಆದಾಗಲೇ ರಾಜ್ಯಸ್ಥಾಪನೆ ಮಾಡಿದ್ದರು. ಕಲ್ಯಾಣದ ಚಾಳುಕ್ಯ ರಾಜ್ಯವು ನಿರ್ಮೂಲವಾಗಿ ಮೈಸೂರಿನಲ್ಲಿ ಹೊಯ್ಸಳರೂ, ತಂಜಾವೂರಿನಲ್ಲಿ ಚೋಳರೂ, ಮಧುರೆಯಲ್ಲಿ ಪಾಂಡ್ಯರೂ ರಾಜ್ಯವಾಳುತ್ತಿದ್ದರು.

ಕ್ರಿ. ಶ. 1175ರಲ್ಲಿ ಮಹಮ್ಮದನು ಮೊದಲಾಗಿ ಮುಲ್ತಾನವನ್ನು ಜಯಿಸಿದನು. 1186ರಲ್ಲಿ ಲಾಹೋರಿನಲ್ಲಿ ಆಳುತ್ತಿದ್ದ ಘಜಿನಿ ವಂಶದ

ಅರಸನನ್ನು ಸೋಲಿಸಿ ಪಂಜಾಬನ್ನು ತನ್ನ ರಾಜ್ಯಕ್ಕೆ ಸೇರಿಸಿದನು. 1192ರಲ್ಲಿ ಟೇರೈನ ಎಂಬಲ್ಲಿ ಪೃಥ್ವೀರಾಜನೊಡನೆ ಯುದ್ಧಮಾಡಿ ರಜಪೂತರನ್ನು ಸೋಲಿಸಿಬಿಟ್ಟನು. ಪೃಥ್ವೀರಾಜನು ರಣರಂಗದಲ್ಲಿ ಮಡಿದು ಬಿದ್ದನು. ಢಿಲ್ಲಿ, ಅಜಮೀರ ಪ್ರದೇಶಗಳು ಮಹಮ್ಮದನಿಗೆ ದೊರಕಿದುವು. 1194ರಲ್ಲಿ ಆತನು ಕನೋಜದ ಜಯಚಂದನನ್ನೂ ಸೋಲಿಸಿದನು. ಹೀಗೆ ಅವನಿಗೆ ವಿಶಾಲವಾದ ರಾಜ್ಯವು ಕೈಸೇರಿತು. ಅದನ್ನು ಆಳಿಕೊಂಡು ಇಲ್ಲಿರಲು ಆತನಿಗೆ ಮನಸ್ಸಿಲ್ಲದುದರಿಂದ ತನ್ನ ನಂಬಿಗೆಯ ಗುಲಾಮನಾದ ಕುತುಬುದ್ದೀನನೆಂಬವನನ್ನು ಢಿಲ್ಲಿಯಲ್ಲಿ ತನ್ನ ಪ್ರತಿನಿಧಿಯಾಗಿರಿಸಿ, ತಾನು ಘೋರಿಗೆ ಹಿಂದಿರುಗಿದನು. ಆ ಮೇಲೆ ಒಮ್ಮೆ ಮಾತ್ರ ಮಹಮ್ಮದನು ಪಂಜಾಬಿಗೆ ಬಂದಿದ್ದನು. ಅವನ ಮರಣಾನಂತರ ಕುತುಬುದ್ದೀನನು ಸ್ವತಂತ್ರನಾಗಿ ಢಿಲ್ಲಿಯಲ್ಲಿ ಮುಸಲ್ಮಾನರ ಅಧಿಕಾರವನ್ನು ಸ್ಥಿರಪಡಿಸಿದನು. ಅವನ ಕಾಲದಲ್ಲಿಯೇ ಮಹಮುಡ್ ಬಿನ್ ಬಕ್ತಿಯಾರ್ ಎಂಬ ಸಾಹಸಿಯಾದ ಯೋಧನೊಬ್ಬನು ಬಂಗಾಳಕ್ಕೆ ಹೋಗಿ ಅಲ್ಲಿನ ಹಿಂದೂ ಅರಸರನ್ನು ಕೊಂದು ಅಲ್ಲಿಯೂ ಮುಸಲ್ಮಾನ ರಾಜ್ಯವನ್ನು ಸ್ಥಾಪಿಸಿದ್ದನು. ಬಕ್ತಿಯಾರನು ಅಳಿದುಳಿದ ಕೆಲವು ಬೌದ್ಧರ ವಿಹಾರಗಳನ್ನೂ ಚೈತ್ಯಾಲಯಗಳನ್ನೂ ಕೆಡವಿ ಬೌದ್ಧ ಮತವನ್ನು ದೇಶದಿಂದ ಅಟ್ಟಿಬಿಟ್ಟನು.

ರಜಪೂತರ ಪರಾಜಯ


---

8. ಢಿಲ್ಲಿ ರಾಜ್ಯದ ಬೆಳವಣಿಗೆಯೂ ವಿನಾಶವೂ

ಗುಲಾಮ ಅರಸರು—ಘೋರೀ ಮಹಮ್ಮದನು ಕುತುಬುದ್ದೀನನನ್ನು ಢಿಲ್ಲಿಯ ಅಧಿಕಾರಿಯಾಗಿ ನೇಮಿಸಿದ್ದಂದಿನಿಂದ ಢಿಲ್ಲಿಯು ಮುಸಲ್ಮಾನರ ಕೈಯಲ್ಲಿಯೇ ಇದ್ದಿತು. ಆದರೆ ಅಲ್ಲಿ ಒಂದೇ ವಂಶದವರು ಆಳುತ್ತಿರದೆ, ಒಂದು ಮನೆತನವು ಬಲಹೀನವಾದೊಡನೆ ಇನ್ನೊಂದು ಮನೆತನದವರು ಅಧಿಕಾರವನ್ನು ಸೆಳೆದು ರಾಜ್ಯವನ್ನು ವಿಸ್ತರಿಸಿ ಆಳುತ್ತಿದ್ದರು. ಗುಲಾಮರು, ಖಿಲ್ಜಿಯರು, ತೊಗ್ಲಕರು, ಸಯ್ಯದರು, ಲೋಡಿಗಳು, ತರುವಾಯ ಮಧ್ಯ ಏಸಿಯದಿಂದ ಬಂದ ಮೊಗಲರು, ಹೀಗೆ ಬೇರೆ ಬೇರೆ ರಾಜಮನೆತನ

ಢಿಲ್ಲಿಯ ಸುಲ್ತಾನರು

ದವರು ಕ್ರಿ. ಶ. 1192ರಿಂದ 1800ರ ತನಕ ರಾಜ್ಯಭಾರವನ್ನು ನಡೆಸಿದರು. ಕ್ರಿ. ಶ. 1800ರಲ್ಲಿ ಢಿಲ್ಲಿಯು ಬ್ರಿಟಿಷರ ಕೈಸೇರಿ ಈಗ ಅದು ಹಿಂದೂದೇಶದ ರಾಜಧಾನಿಯಾಗಿದೆ.



ಕುತುಬ್ ಮಿನಾರ್
(Courtesy: Mr. M. R. A. Pai)

ಕುತ್ಬುಬುದ್ದೀನನು ಘೋರಿ ಮಹಮ್ಮದನ ಗುಲಾಮನಾಗಿದ್ದನು. ಆ ಕಾಲದಲ್ಲಿ ಪ್ರತಿಯೊಬ್ಬ ಮುಸಲ್ಮಾನ ಅರಸನಿಗೆ ಹಲವು ಗುಲಾಮ ರಿರುತ್ತಿದ್ದರು. ಈ ಗುಲಾಮರು ಅರಸನ ಸೈನ್ಯದಲ್ಲಿ ತರಬೇತು ಹೊಂದು

ತಿದ್ದರು. ಅವರಲ್ಲಿ ಅರಸರ ಪ್ರೀತಿಗೆ ಪಾತ್ರರಾದವರಿಗೆ ಸೇನಾಪತಿತ್ವವೂ ಕೆಲಸಮಯ ಪಟ್ಟವೂ ದೊರಕುವ ಸಂದರ್ಭವಿದ್ದಿತು. ಕುತುಬುದ್ದೀನನು ಢಿಲ್ಲಿಯ ಅಧಿಕಾರವನ್ನು ಪಡೆದೊಡನೆ

ಕುತುಬುದ್ದೀನನು
1206 10

ರಾಜ್ಯವಿಸ್ತರಣಾಪೇಕ್ಷೆಯಿಂದ ಕಾಶೀ, ಬಿಹಾರ, ಬಂಗಾಳಗಳನ್ನು ಗೆದ್ದುಕೊಂಡನು. ಕ್ರಿ. ಶ. 1206 ರಲ್ಲಿ ಮಹಮ್ಮದನು ಸಾಯಲು ತಾನೇ ಸ್ವತಂತ್ರನಾಗಿ ಆಳುತ್ತಿದನು. ಅವನ ಕೈಕೆಳಗೆ ಹಲವು ಮುಸಲ್ಮಾನ ಸಾಮಂತ ಅರಸರಿದ್ದರು. ಈ ಸಾಮಂತರು ಆಗಾಗ ಢಿಲ್ಲಿಯ ವಿರೋಧವಾಗಿ ಪಿತೂರಿ ನಡೆಸುತಿದ್ದರು. ಆದುದರಿಂದ ಢಿಲ್ಲಿಯಲ್ಲಿ ಆಳುವುದು ಧೀರರಿಗೂ ಸಮರ್ಥರಿಗೂ ಮಾತ್ರ ಸಾಧ್ಯವಿದ್ದಿತು. ಕುತುಬುದ್ದೀನನು ಸಾಯುವ ತನಕ ಎಲ್ಲವೂ ಸರಿ ಹೋಯಿತು. 1210ರಲ್ಲಿ ಅತನು ಸಾಯಲು ಅವನ ದುರ್ಬಲರಾದ ಮಕ್ಕಳು ರಾಜ್ಯವಾಳಲು ಅಸಮರ್ಥರಾದರು. ಹೀಗಾಗಿ ಕುತುಬುದ್ದೀನನ ಗುಲಾಮನಾಗಿದ್ದ ಅಲ್ತಮಷನು ಢಿಲ್ಲಿಯ ಪಟ್ಟವನ್ನೇರಿ ರಾಜ್ಯದಲ್ಲಿ ನೆಮ್ಮದಿಯನ್ನು ಸ್ಥಾಪಿಸಿದುದಲ್ಲದೆ ಉಜ್ಜಯಿನಿಯನ್ನು ಗೆದ್ದು, ಅಲ್ಲಿಯ ದೇವಸ್ಥಾನಗಳನ್ನು ಕೆಡವಿ ಹಲವು ಮಸೀದಿಗಳನ್ನು ಕಟ್ಟಿಸಿದನು. ಢಿಲ್ಲಿಯಲ್ಲಿರುವ ಕುತುಬಮಿನಾರವನ್ನು ಅವನೇ ಕಟ್ಟಿಸಿದನು.

ಅಲ್ತಮಷನ ಮಕ್ಕಳು ಒಬ್ಬರ ಹಿಂದೊಬ್ಬರಂತೆ ಪಟ್ಟಕ್ಕೆ ಬಂದರೂ ಅವರಿಂದ ಶಾಂತಿಯಿಂದ ರಾಜ್ಯವನ್ನಾಳಲಾಗದುದರಿಂದ ಅಲ್ತಮಷನ ಗುಲಾಮನಾಗಿದ್ದ ಬಾಲ್ಬನನು ಸುಲ್ತಾನನಾದನು.

ಬಾಲ್ಬನನು
1266–87

ಅವನ ಕಾಲದಲ್ಲಿ ಸಿಂಧೂ ಗಂಗಾನದಿಯ ಪ್ರದೇಶಗಳೂ ಮಾಳವ ದೇಶವೂ ಢಿಲ್ಲಿ ಸುಲ್ತಾನರ ಕೈಕೆಳಗಿದ್ದುವು. ಆ ಪ್ರದೇಶಗಳಲ್ಲಿದ್ದ ರಜಪೂತರಲ್ಲನೇಕರು ತಮ್ಮ ರಾಜ್ಯಗಳನ್ನು ಬಿಟ್ಟು ಅರಾವಳೀ ಬೆಟ್ಟದ ಸುತ್ತಲಿನ ಥಾರಮರುಭೂಮಿಯಲ್ಲಿ ನೀರಿನ ಆಶ್ರಯವಿರುವಲ್ಲಿ ಪಟ್ಟಣಗಳನ್ನೂ ಕೋಟೆಗಳನ್ನೂ ಕಟ್ಟಿ ನೆಲೆನಿಂತರು. ಆದಕಾರಣ ಆ ಪ್ರದೇಶಕ್ಕೆ ರಜಪುತಾನವೆಂದು ಹೆಸರು ಬಂದಿತು. ಚಿತ್ತೂರು, ಜೋಧಪುರ, ಜಯಪುರ, ರಣಥಂಬೋರ ಇವೇ ಅವರ ಮುಖ್ಯ ರಾಜ್ಯಗಳಾಗಿದ್ದುವು. ರಜಪೂತರು ಇಲ್ಲಿಯೂ ಕೂಡ ತಮ್ಮೊಳಗಿನ ವೈಷಮ್ಯವನ್ನು ಬಿಡಲಿಲ್ಲ. ಈ ರಾಜ್ಯಗಳು ಸಾಧಾರಣ ಸ್ವತಂತ್ರ

ನಾಗಿ ಢಿಲ್ಲಿ ಸುಲ್ತಾನರ ತೊಂದರೆ ಇಲ್ಲದೆ ಬಹುಕಾಲದ ವರೆಗೆ ಇದ್ದುವು.

ಖಿಲ್ಜಿಯರು–(1290–1320) ಬಾಲ್ಬನನ್ನು ತನ್ನ ಸಾಮ್ರಾಜ್ಯದಲ್ಲಿ ಶಾಂತತೆಯನ್ನು ನೆಲೆಗೊಳಿಸಿದನು. ಅವನಿಗೆ ಸಾಮಂತ ಸುಲ್ತಾನರೆಲ್ಲ ಹೆದರುತ್ತಿದ್ದರು. ಅವನ ತರುವಾಯ ಖಿಲ್ಜಿ ಅರಸರು ಪಟ್ಟಕ್ಕೆ ಬಂದರು. ಕ್ರಿ. ಶ. 1290ರಲ್ಲಿ ಗುಲಾಮವಂಶದ ದುರ್ಬಲನೂ ಅವಿವೇಕಿಯೂ ಆದ ಅರಸನೊಬ್ಬನನ್ನು ತಳ್ಳಿಹಾಕಿ ಜಲಾಲುದ್ದೀನ ಖಿಲ್ಜಿಯು ಅರಸನಾಗಿ ಢಿಲ್ಲಿ ಸಾಮ್ರಾಜ್ಯವನ್ನು ಆಳಿದನು. ನಾಲ್ಕೇ ವರ್ಷಗಳಲ್ಲಿ ಅವನ ಅಳಿಯನಾದ ಅಲ್ಲಾವುದ್ದೀನನು ಅವನನ್ನು ಮೋಸದಿಂದ ಕೊಂದಿಕ್ಕಿ ರಾಜ್ಯವನ್ನು ಸಂಪಾದಿಸಿದನು.

ಅಲ್ಲಾವುದ್ದೀನನು 1296-1316

ಅಲ್ಲಾವುದ್ದೀನನಾದರೋ ಕ್ರೂರಿಯೂ ಜಾಣನೂ ಒಳ್ಳೆಯ ಯೋಧನೂ ಆಗಿದ್ದನು. ರಾಜ್ಯವನ್ನಾಳುವುದರಲ್ಲಿಯೂ ಅದನ್ನು ವಿಸ್ತರಿಸುವುದರಲ್ಲಿಯೂ ನಿಪುಣನಿದ್ದು ಆ ಕಾಲಕ್ಕೆ ತಕ್ಕ ಅರಸನಾಗಿದ್ದನು. ಅವನ ಕಾಲದಲ್ಲಿ ಢಿಲ್ಲಿ ರಾಜ್ಯವು ಹಿಂದೂದೇಶದಲ್ಲೆಲ್ಲಾ ಶ್ರೇಷ್ಠವೆಂದೆನಿಸಿಕೊಂಡಿತು. ಮೊದಲಾಗಿ ಅಲ್ಲಾವುದ್ದೀನನು ಭೀಕರ ಯುದ್ಧವನ್ನು ಮಾಡಿ ಅನೇಕ ರಜಪೂತವೀರರನ್ನು ಕೊಂದು ಚಿತ್ತೂರನ್ನು ವಶಪಡಿಸಿಕೊಂಡನು. ಅಲ್ಲಿಯ ಅರಸನಾದ ಭೀಮಸಿಂಹನ ಪತ್ನಿ ಪದ್ಮಿನಿಯೂ ಇತರ ರಜಪೂತ ಮಹಿಳೆಯರೂ ಜೋಹರನ್ನು ಮಾಡಿ (ಕ್ರಿ. ಶ. 1303) ಮಡಿದರು. ಆ ಮೇಲೆ ಅವನು ರಜಪುತಾನದ ಇನ್ನಿತರ ರಾಜ್ಯಗಳನ್ನೂ ಗುಜರಾಥವನ್ನೂ ಗೆದ್ದುಕೊಂಡನು. ಅವನ ಪ್ರೀತಿಯ ಸೇನಾಧಿಪತಿಯಾದ ಮಾಲಿಕ್ ಕಾಫರನು ದಕ್ಷಿಣಕ್ಕೆ ದಂಡೆತ್ತಿಹೋಗಿ ಯಾದವ, ಹೊಯ್ಸಳ, ಕಾಕತೀಯ ಮತ್ತು ಪಾಂಡ್ಯರನ್ನು ಸೋಲಿಸಿ ದೇವಗಿರಿ, ದ್ವಾರಸಮುದ್ರ, ವಾರಂಗಲ ಮತ್ತು ಮಧುರೆಯಲ್ಲಿ ಅಪಾರ ದ್ರವ್ಯವನ್ನು ಸುಲಿದು ಢಿಲ್ಲಿಗೆ ಸಾಗಿಸಿದನು. ತಾನು ಜಯಿಸಿದ ರಾಜ್ಯಗಳಲ್ಲೆಲ್ಲಾ ಅಧಿಕಾರಿಗಳನ್ನು ನೇಮಿಸಿ ರಾಜ್ಯಭಾರದ ವ್ಯವಸ್ಥೆಯನ್ನು ಮಾಡಿದನು. ದಕ್ಷಿಣಕ್ಕೆ ಮುಸಲ್ಮಾನರ ಪ್ರವೇಶವಾದುದು ಇದೇ ಮೊದಲನೇ ಬಾರಿ.

ಅಲ್ಲಾವುದ್ದೀನನೆಂದರೆ ಎಲ್ಲರೂ ಹೆದರುತ್ತಿದ್ದರು. ಆ ಕಾಲದಲ್ಲಿ ಕಳ್ಳಕಾಕರ ಭಯವೇ ಇರಲಿಲ್ಲ. ಢಿಲ್ಲಿಯಲ್ಲಿ ಸಾಮಾನುಗಳ ಕ್ರಯ

ವನ್ನು ಸರಕಾರವೇ ನಿಶ್ಚಯಿಸುವಂತೆ ಅವನು ಮಾಡಿದನು. ಧನಿಕ ಸರದಾರರ ಮೇಲೆ ಹೆಚ್ಚಿನ ಕರಗಳನ್ನು ಹಾಕಿ ಅವರು ಧಂಗೆಯೇಳದಂತೆ ಮಾಡಿದನು. ಹಿಂದೂಗಳ ಮೇಲೆ ಜಿಜಿಯಾ ಎಂಬ ವಿಶೇಷವಾದ ತಲೆ ತೆರಿಗೆಯನ್ನು ಹೊರಿಸಿದನು. ಅವನ ತರುವಾಯ ಆರು ವರ್ಷಗಳ ವರೆಗೆ ರಾಜ್ಯದಲ್ಲೆಲ್ಲ ಅವ್ಯವಸ್ಥೆಯುಂಟಾಗಿ ಕೊನೆಗೆ ಗಿಯಾಸುದ್ದೀನ ತಗ್ಲಾಕನೆಂಬ ಶೂರ ಸರದಾರನು ಢಿಲ್ಲಿಯ ಅರಸನಾಗಿ ಸಾಮ್ರಾಜ್ಯವನ್ನು ಉಳಿಸಿದನು. ಅವನಿಂದಲೇ ಢಿಲ್ಲಿಯಲ್ಲಿ ತಗ್ಲಾಕ ವಂಶದವರ ಆಳ್ವಿಕೆಗೆ ಆರಂಭವಾಯಿತು.

ತಗ್ಲಾಕರು-(1330—1413) ಕ್ರಿ. ಶ. 1325ರಲ್ಲಿ ಗಿಯಾಸುದ್ದೀನನನ್ನು ಅವನ ಮಗನಾದ ಮಹಮದ ತಗ್ಲಾಕನು ಕೊಂದಿಕ್ಕಿ ತಾನೇ ಅರಸನಾಗಿ ಇಪ್ಪತ್ತೈದು ವರ್ಷಗಳ ವರೆಗೆ ರಾಜ್ಯವನ್ನಾಳಿದನು. ಇವನೊಬ್ಬ ವಿಚಿತ್ರ ಸ್ವಭಾವದ ಅರಸನು. ಒಮ್ಮೊಮ್ಮೆ ದಯಾಳುವಾಗಿ ದಾನಧರ್ಮಗಳನ್ನು ಮಾಡುತ್ತಿದ್ದನಲ್ಲದೆ ನಿಷ್ಪಕ್ಷಪಾತದಿಂದ ನ್ಯಾಯಪರಿಪಾಲನೆ ಮಾಡುತ್ತಿದ್ದನು. ಕೆಲವೊಮ್ಮೆ ತಲೆಗೆಟ್ಟವ ಎಂಬಂತೆ ನಿಷ್ಕಾರಣವಾಗಿ ಜನರನ್ನು ಅತ್ಯಂತ ಕ್ರೂರವಾಗಿ ಹಿಂಸಿಸುತ್ತಿದ್ದನು. ತನಗೆ ತೋಚಿದುದನ್ನು ಹಿಂದುಮುಂದು ವಿಚಾರಿಸದೆ ಮಾಡಿಯೇ ಬಿಡುತ್ತಿದ್ದನು. ಹೀಗೆ ಅವನ ಅನೇಕ ಕೃತ್ಯಗಳು ಬರೀ ಹುಚ್ಚು ಕೆಲಸಗಳೆಂದು ನಮಗೆ ತೋರುತ್ತವೆ. ಅವನ ಕಾಲದಲ್ಲಿ ಹೆಚ್ಚುಕಡಿಮೆ ಹಿಂದೂದೇಶವೆಲ್ಲ ಢಿಲ್ಲಿ ಸುಲ್ತಾನರ ವಶದಲ್ಲಿದ್ದಿತು. ಅನೇಕ ಪ್ರಾಂತಗಳಲ್ಲಿ ಪ್ರಾಂತಾಧಿಕಾರಿಗಳಿದ್ದರು. ಕೆಲವು ಪ್ರದೇಶಗಳಲ್ಲಿ ಸಾಮಂತ ರಾಜರಿದ್ದರು. ಢಿಲ್ಲಿಯ ಸಿಂಹಾಸನದಲ್ಲಿ ಹೊಸ ಅರಸರು ಕೂತೊಡನೆ ಹೆಚ್ಚಿನ ಸಾಮಂತರಾಜರು ದಂಗೆಯೆದ್ದು ಸ್ವತಂತ್ರರಾಗಲು ಹವಣಿಸುವ ವಾಡಿಕೆಯಿದ್ದಿತು. ಹಾಗೆಯೇ ದಂಗೆಯೆದ್ದ ಸಾಮಂತರನ್ನೂ ಸುಭೇದಾರರನ್ನೂ ಜಯಿಸುವ ಕೆಲಸವು ಮಹಮದ ತಗ್ಲಾಕನಿಗೂ ಇದ್ದೇ ಇದ್ದಿತು.

ಮಹಮದ ತಗ್ಲಾಕನು 1325-51

ತನ್ನ ವಿಶಾಲವಾದ ಸಾಮ್ರಾಜ್ಯಕ್ಕೆ ಢಿಲ್ಲಿಯು ತಕ್ಕ ರಾಜಧಾನಿಯಲ್ಲವೆಂದೂ ದೇವಗಿರಿಯೇ ಅದಕ್ಕಿಂತ ಉತ್ತಮವೆಂದು ಅವನು ನಿಶ್ಚಯಿಸಿದನು. ತನ್ನ ಸರಕಾರಿ ಕಛೇರಿಗಳನ್ನು ಮಾತ್ರ ಅಲ್ಲಿಗೆ ಒಯ್ಯ

ವುದರ ಬದಲು ತಗ್ಲಾಕನು ಢಿಲ್ಲಿಯ ಎಲ್ಲ ನಿವಾಸಿಗಳು ದೇವಗಿರಿಗೆ ಪ್ರಯಾಣ ಬೆಳೆಸಿ ಅಲ್ಲಿಯೇ ಉಳ್ಳಕೊಳ್ಳಬೇಕೆಂದು ವಿಚಿತ್ರವಾದ

ದೇವಗಿರಿ

ಆಜ್ಞೆಯನ್ನು ಕೊಟ್ಟನು. ಅರಸನ ಆಜ್ಞೆಯನ್ನು ಉಲ್ಲಂಘಿಸಲಾರದೆ ಜನರು ಹೊರಟರು. ಪ್ರಯಾಣ ಮಾಡುವಾಗ ದಾರಿಯಲ್ಲಿ ಅನೇಕರು ಮಡಿದರು. ಅಲ್ಲಿಗೆ ಮುಟ್ಟಿದ ಜನರಿಗೂ ಬಹುಕಾಲ ಅಲ್ಲಿ ವಾಸಿಸಿಕೊಂಡಿರುವುದು ಸರಿತೋರದ ಕಾರಣ ಮರಳಿ ಅವರನ್ನೆಲ್ಲಾ ಸುಲ್ತಾನನು ಢಿಲ್ಲಿಗೆ ಒಯ್ದನು. ದೇವಗಿರಿಯನ್ನು ಸಾಮ್ರಾಜ್ಯದ ರಾಜಧಾನಿಯನ್ನಾಗಿ ಮಾಡಲು ನಿರ್ವಹಿಸಿದ ಖರ್ಚೆಲ್ಲವೂ ವ್ಯರ್ಥವಾದುದಲ್ಲದೆ ಅನೇಕ ಜನರೂ ಮಡಿದರು.



ದೇವಗಿರಿಯ ಕೋಟೆ
(Courtesy: Johnston and Hoffmann Ltd.)

ಅವನು ಪರ್ಶಿಯಾ ಮತ್ತು ಟಿಬೇಟು ದೇಶಗಳನ್ನು ಜಯಿಸಲು ಕಳುಹಿಸಿದ ದೊಡ್ಡ ದೊಡ್ಡ ಸೇನೆಗಳು ಅಳಿದುವು. ರಾಜ್ಯದ ಬೊಕ್ಕಸವು ಬರಿದಾಗುವುದನ್ನು ಅರಿತು ಹಣವನ್ನು ಹೆಚ್ಚಿಸುವ

ಕಷ್ಟ ಪರಂಪರೆಗಳು

ಸಲುವಾಗಿ ಬಂಗಾರದ ನಾಣ್ಯಗಳ ಬದಲು ತಾಮ್ರದ ನಾಣ್ಯಗಳು ಹೊರಡಿಸಲು ಪ್ರಯತ್ನಿಸಿದನು. ಆಗ ಪ್ರತಿ ಒಬ್ಬನೂ ಗುಟ್ಟಿನಲ್ಲಿ ತಾಮ್ರದ ನಾಣ್ಯಗಳನ್ನು ಮಾಡಿ ಬಂಗಾರದ ನಾಣ್ಯಗಳ ಬದಲು ಅವನ್ನು ಬಳಕೆಗೆ ತರಲು ಯತ್ನಿಸಿದುದರಿಂದ ಹೆಚ್ಚಿನ ಅವ್ಯವಸ್ಥೆಯುಂಟಾಗಿ ಮಹಮ್ಮದನ ಯೋಜನೆಯು ನಿಷ್ಪ್ರಯೋಜಕವಾಯಿತು. ಹೀಗೆ ಮಹಮ್ಮದ ಬಿನ್ ತಗ್ಲಾಕನು ಕೈಹಾಕಿದ ಪ್ರತಿ ಒಂದು ಯೋಜನೆಯು ವ್ಯರ್ಥವಾದುದು ಮಾತ್ರವಲ್ಲದೆ ದೇಶದಲ್ಲಿ ಅದರಿಂದ ಅಪರಿಮಿತ ದುಃಖಕ್ಕೂ ಅನ

ಧರ್ಮಕ್ಕೆ ಕಾರಣವಾಯಿತು. ರಾಜ್ಯದ ಹಲವೆಡೆಗಳಲ್ಲಿ ಬರಬಿದ್ದು ಅನೇಕ ಕುಟುಂಬಗಳು ಮುಳುಗಿಹೋದುವು. ಸಂದರ್ಭವನ್ನು ನಿರೀಕ್ಷಿಸುತ್ತಿದ್ದ ಸುಭೇದಾರರೂ ಜನರೂ ದಂಗೆಯೆದ್ದುದರಿಂದ ಅರಸನು ಭಗ್ನಮನೋರಥನಾದನು. ಕ್ರಿ. ಶ. 1336ರಲ್ಲಿ ತುಂಗಭದ್ರಾ ನದಿಯ ದಕ್ಷಿಣ ಪ್ರದೇಶದ ಜನರು ಹರಿಹರ ಬುಕ್ಕರೆಂಬ ಸಹೋದರರಿಗೆ ಬೆಂಬಲವಿತ್ತು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಅಂತೆಯೇ ಬಂಗಾಳ, ದಕ್ಷಿಣ, ಮಾಳವ, ಗುಜರಾಥ ಮತ್ತು ಸಿಂಧ ಪ್ರಾಂತಗಳಲ್ಲಿಯೂ ದಂಗೆಗಳೆದ್ದುವು. ಮಹಮ್ಮದನು ಶೂರನೂ ಸಮರ್ಥನೂ ಆಗಿದ್ದರೂ ಒಮ್ಮೆಯೇ ಎದ್ದ ಈ ದಂಗೆಗಳನ್ನು ಹೇಗೆ ಮುರಿಯಬಹುದು? ಹೀಗಾಗಿ ಬಂಗಾಳವು ಸ್ವತಂತ್ರವಾಯಿತು. ಹಸನ್ ಬಹ್ಮನ್ ಷಾಹನೆಂಬ ಶೂರ ಸರದಾರನ ಕೈಕೆಳಗೆ ದಕ್ಷಿಣವು ಸ್ವತಂತ್ರವಾಯಿತು. ಸಿಂಧ ಪ್ರಾಂತದ ದಂಗೆಯನ್ನು ಅಡಗಿಸಲು ಹೋದ ಮಹಮ್ಮದನು ದಾರಿಯಲ್ಲಿ ಮಡಿದನು. ಮಹಮ್ಮದನ ಸಂಬಂಧಿಯಾದ ಫಿರೋಜ ಷಹನನ್ನು ಸೈನಿಕರು ಅರಸನನ್ನಾಗಿ ಆರಿಸಿದರು. ಸೈನ್ಯವು ಢಿಲ್ಲಿಗೆ ಹಿಂತಿರುಗಿತು.

ಫಿರೋಜಷಹ ತಗ್ಲಕ

ಫಿರೋಜ ಷಹನು ಕಳೆದುಹೋದ ಪ್ರಾಂತಗಳನ್ನು ಮರಳಿ ಪಡೆಯಲಿಕ್ಕೆ ಯತ್ನಿಸದೆ ತನ್ನ ಅಧಿಕಾರವನ್ನು ಸ್ವೀಕರಿಸುತ್ತಿದ್ದ ಗಂಗಾ, ಸಿಂಧೂನದಿಗಳ ಪ್ರದೇಶದ ಜನರನ್ನು ಸಮಾಧಾನಗೊಳಿಸಲು ಪ್ರಯತ್ನಿಸಿ ರಾಜ್ಯಭಾರವನ್ನು ಕೈಕೊಂಡನು. ಅವನ ಮೂವತ್ತೇಳು ವರ್ಷಗಳ ಆಳ್ವಿಕೆಯಲ್ಲಿ (ಕ್ರಿ. ಶ. 1351—1388) ಸಾಮ್ರಾಜ್ಯದಲ್ಲಿ ಶಾಂತಿಯು ನೆಲೆಗೊಂಡಿತು. ಮಹಮ್ಮದ ತಗ್ಲಕನ ಸಮಯದಲ್ಲಿ ಹಾಳುಬಿದ್ದ ಪ್ರದೇಶಗಳೆಲ್ಲ ಅಭಿವೃದ್ಧಿಗೊಂಡುವು. ಫಿರೋಜನು ಹಲವು ಕಟ್ಟಡಗಳನ್ನು ಕಟ್ಟಿಸಿದನು. ಢಿಲ್ಲಿಯಲ್ಲಿ ಹೊಸದೊಂದು ಕೋಟೆಯನ್ನು ಕಟ್ಟಿಸಿ ಅದರಲ್ಲಿ ವಾಸಿಸಲು ಜನರಿಗೆ ಉತ್ತೇಜನವಿತ್ತನು. ಅನೇಕ ಆಸ್ಪತ್ರೆಗಳನ್ನು ವಿದ್ಯಾಶಾಲೆಗಳನ್ನು ಮಸೀದಿಗಳನ್ನು ಕಟ್ಟಿಸಿದನು. ಹಿಂದೂಗಳ ಮೇಲೆ ಮಾತ್ರ ಅವನು ಜಿಜಿಯಾ ಎಂಬ ತಲೆತೆರಿಗೆಯನ್ನು ಹೇರಿ ಅವರಿಗೆ ಅನ್ಯಾಯವೆಸಗಿದನು. ಆದರೂ ಹಿಂದಿನ ಕ್ರೂರ ಆಳ್ವಿಕೆಗಿಂತಲೂ ಫಿರೋಜನ

ಸುಧಾರಿತ ರಾಜ್ಯಭಾರವೇ ಚೆನ್ನಾದುದೆಂದು ಜನರಿಗೆ ಮನವರಿಕೆಯಾಯಿತು. ಫಿರೋಜನ ಮರಣಾನಂತರ ಒಬ್ಬರ ಹಿಂದೊಬ್ಬರಂತೆ ಆಳಿದ ತಗ್ಲಾಕ ವಂಶದ ಅರಸರೆಲ್ಲ ದುರ್ಬಲರಾಗಿದ್ದರು. ಅವರಲ್ಲನೇಕರು ಢಿಲ್ಲಿಯ ಶ್ರೀಮಂತರ ಅಂಕೆಯಲ್ಲಿದ್ದರು. ಹೀಗಾಗಿ ಹಿಂದುಸ್ಥಾನದಲ್ಲಿ ಸ್ಥಿರವಾದ ರಾಜ್ಯಾಡಳಿತವು ಇಲ್ಲದಂತಾಯಿತು. ಢಿಲ್ಲಿಯ ಸಾಮ್ರಾಜ್ಯವು ಮೆಲ್ಲಮೆಲ್ಲನೆ ಶಿಥಿಲವಾಯಿತು. ವಿಜಯನಗರ, ಬಹ್ಮನಿ ರಾಜ್ಯಗಳಲ್ಲದೆ ಬಂಗಾಳ, ಜೋಧಪುರ, ಮಾಳವ, ಗುಜರಾಥ ಮತ್ತು ಸಿಂಧ

ಸಾಮ್ರಾಜ್ಯದ ಅಳಿಗಾಲ



ಫಿರೋಜಷಹನ ಕೋಟೆ
(Courtesy: Mr. M. R. A. Pai)

ಪ್ರಾಂತಗಳು ಸ್ವತಂತ್ರವಾದುವು. ರಜಪೂತರು ತಮ್ಮ ತಮ್ಮ ಸೈನ್ಯಗಳನ್ನು ಸಜ್ಜುಗೊಳಿಸಿ ನಿರ್ಭೀತಿಯಿಂದ ಇರಲಾರಂಭಿಸಿದರು. ಆಗಲೇ (1398) ಸಮರ್ಖಂಡದ ತುರುಕ ಅರಸನಾದ ತೈಮೂರನು ತಾನು ಏಷಿಯದ ಇತರ ದೇಶಗಳನ್ನು ಜಯಿಸಿ ಹಾವಳಿಮಾಡಿದಂತೆ ಹಿಂದೂ ದೇಶದ ಅಪಾರದ್ರವ್ಯವನ್ನು ದೋಚಿಕೊಂಡು ಹೋಗುವೆನೆಂದು ಹವಣಿಸಿ ಮಿಂಚಿನ ವೇಗದಿಂದ ತನ್ನ ಸೇನೆಯೊಂದಿಗೆ ಪಂಜಾಬಿನಲ್ಲಿಳಿದು, ಜನರನ್ನು ಕೊಂದು, ಹೊಲಗದ್ದೆಗಳನ್ನು ಹಾಳುಮಾಡಿ, ಊರುಗಳನ್ನು ಸುಲಿದು, ಢಿಲ್ಲಿಗೆ ಬಂದು, ಅದನ್ನು ವಶಪಡಿಸಿದನು. ಹದಿನೈದು ದಿನಗಳ ತನಕ ತೈಮೂರನ ಸೈನಿಕರು ಪಟ್ಟಣದಲ್ಲಿ ಸೂರೆಮಾಡಿ, ಸಿಕ್ಕಿದ ದ್ರವ್ಯ

ವನ್ನು ಸಂಗ್ರಹಿಸಿ, ಹತ್ಯಾಕಾಂಡವನ್ನೆಸಗಿದರು. ಅನೇಕರನ್ನು ಸೆರೆಹಿಡಿ
ಗುಲಾಮರನ್ನಾಗಿ ಮಾಡಿ ತೈಮೂರನು ಸಮರಕಂದಕ್ಕೆ ತೆರಳಿದನು.

ಹೀಗೆ ತೈಮೂರನ ದಾಳಿಯಿಂದಾಗಿ ದಿಲ್ಲಿಯು ಅದರ
ಮಾನ್ಯವನ್ನು ಕಳೆಯಿತು. ತಘಲಕ ವಂಶವು 1414ರಲ್ಲಿ ನಿರ್ಮೂ
ನಾಮವಾಯಿತು. 1450ರ ವರೆಗೆ ಸೈಯದ ವಂಶದವರೂ ಆ ಮೇಲೆ 1526
ತನಕ ಲೋದೀ ಮನೆತನದವರೂ ದಿಲ್ಲಿಯನ್ನಾಳಿದರು. ಆ ಕಾಲದ
ಲ್ಲಿ ದಿಲ್ಲಿಯ ವೈಭವವು ಪೂರ್ತ ಇಳಿಮುಖಗೊಂಡು ಹಿಂದೂದೇಶದ
ಒಮ್ಮೆ ಇದ್ದ ರಾಜಕೀಯ ಐಕ್ಯವು ನಾಶವಾಯಿತು.

---

೯. ವಿಜಯನಗರ ಮತ್ತು ಬಹ್ಮನಿ ರಾಜ್ಯಗಳು

ವಿಜಯನಗರ—(1336–1565) ಮಹಮ್ಮದ ತಘಲಕನ ಆ
ಯಲ್ಲಿ ಸ್ವಾತಂತ್ರ್ಯವನ್ನು ಸಂಪಾದಿಸಿದ ರಾಜ್ಯಗಳೊಳಗೆ ವಿಜಯನ
ಮತ್ತು ಬಹ್ಮನಿ ರಾಜ್ಯಗಳೇ ಪ್ರಮುಖವಾದವು.
ಸ್ಥಾಪನೆ 1336
ಇವುಗಳಲ್ಲಿ ವಿಜಯನಗರವು ಹಿಂದೂರಾಜ್ಯವಾ
ದ್ದಿತು. ಬಹ್ಮನಿ ರಾಜ್ಯವು ಮುಸಲ್ಮಾನರ ರಾಜ್ಯವಾಗಿದ್ದಿತು. ದಿಲ್ಲಿ
ಸುಲ್ತಾನರು ದ್ವಾರಸಮುದ್ರದ ಹೊಯ್ಸಳ ರಾಜ್ಯವನ್ನು ಹಾಳುಮಾ
ತರುವಾಯ ತುಂಗಭದ್ರಾ ನದಿಯ ದಕ್ಷಿಣದಲ್ಲಿ ಸಾಮ್ರಾಜ್ಯದೊಳಗೆ
ವ್ಯವಸ್ಥೆಯನ್ನು ಮಾಡಲಿಲ್ಲ. ಮಧುರೆಯಲ್ಲಿದ್ದ ಅವರ ಸುಭೇದಾ
ನಿಗೆ ಜನರ ಸಹಾನುಭೂತಿಯು ದೊರಕಲಿಲ್ಲ. ಅವನು ಕಂಗ
ಬಗ್ಗುಬಡಿಸಲು ಶಕ್ಯನಾಗಲಿಲ್ಲ. ಹೀಗಾಗಿ ಹೊಯ್ಸಳ ರಾಜನ ಸೇ
ನಾಯಕರಲ್ಲಿ ಇಬ್ಬರಾದ ಹರಿಹರ ಬುಕ್ಕರೆಂಬ ಸಹೋದರರು ಅ
ಜನರ ಬೆಂಬಲವನ್ನು ಪಡೆದು ಮಧುರೆಯ ಸುಭೇದಾರನನ್ನು ಓ
ತುಂಗಭದ್ರಾ ನದಿಯ ತೀರದಲ್ಲಿ ಕ್ರಿ. ಶ. 1336ರಲ್ಲಿ ವಿಜಯನ
ವೆಂಬ ಪಟ್ಟಣವನ್ನು ನಿರ್ಮಿಸಿ ಅದೇ ಹೆಸರಿನ ಸ್ವತಂತ್ರ ರಾಜ್ಯವ
ಸ್ಥಾಪಿಸಿದರು. ಆ ಪ್ರದೇಶವು ದಿಲ್ಲಿಯಿಂದ ಬಹು ದೂರವಿದ್ದುದರಿಂ
ಸುಲ್ತಾನನು ಅವರ ಗೋಜಿಗೆ ಬಾರದೆ ವಿಜಯನಗರದ ಅರಸ
ಮನ್ನಿಸಿ ಅವರ ಅಧಿಕಾರವನ್ನು ಅಲ್ಲಿ ಸ್ಥಿರಗೊಳಿಸಲು ಅನುಕ

ರಾಯಿತು. ತುಂಗಭದ್ರೆಯ ದಕ್ಷಿಣ ಪ್ರದೇಶವೆಲ್ಲವೂ ಅವರ ಅಧೀನಕ್ಕೆ ಒಳಗಾಯಿತು. ಅವರು ತಮ್ಮ ರಾಜ್ಯವನ್ನು ಸುವ್ಯವಸ್ಥಿತ ಸ್ಥಿತಿಯಲ್ಲಿ ತಂದಿರಿಸಿದರು.

ಸ್ಥಾಪನೆ

ಬಹ್ಮನಿ ರಾಜ್ಯ—ಅದೇ ಸಮಯದಲ್ಲಿ ತುಂಗಭದ್ರೆಯ ಉತ್ತರಕ್ಕೆ ಮಹಮ್ಮದ ತಗ್ಲಕನ ಅರಾಜಕತ್ವದ ಕಾರಣ ಜನರು ದಂಗೆ ಎದ್ದಾಗ ತಗ್ಲಕನ ಸೇನಾಧಿಪತಿಗಳಲ್ಲೊಬ್ಬನಾದ ಹಸ್ಸನ್ ಬಹ್ಮನ್ ಷಾಹನು ದಕ್ಷಿಣಕ್ಕೆ ಬಂದು ದಂಗೆಯನ್ನು ಅಣಗಿಸಿ ಕ್ರಿ. ಶ. 1347ರಲ್ಲಿ ತಾನೇ ಅಲ್ಲಿಯ ಅರಸನಾಗಿ ಗುಲಬರ್ಗಾ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿದನು.



ತುಂಗಭದ್ರಾ ನದಿಯ ನೋಟ

ತನ ಸಾಮ್ರಾಜ್ಯಕ್ಕೆ ಬಹ್ಮನಿ ರಾಜ್ಯವೆಂದು ಹೆಸರಾಯಿತು. ಬಹ್ಮನಿ ಅರಸರಿಗೂ ವಿಜಯನಗರದ ಅರಸರಿಗೂ ಆಗಾಗ ಯುದ್ಧಗಳಾಗುತ್ತ ಇದ್ದುದರಿಂದ ಎರಡು ಪಕ್ಷದವರಿಗೂ ಅದರಿಂದ ತುಂಬಾ ಕೇಡು ಉಂಟಾಯಿತು. ಆ ಕಾಲದಲ್ಲಿ ತುರ್ಕಿ, ಎಬಿಸೀನಿಯಾ, ಮತ್ತು ಪರ್ಶಿಯಾ ದೇಶಗಳಿಂದ ಕೆಲಸ ಸಂಪಾದಿಸಲು ಇಲ್ಲಿಗೆ ಬರುತ್ತಿದ್ದ ಯೋಧರಿಗೆ ಬಹ್ಮನಿ

ಸುಲ್ತಾನರು ಕೆಲಸಕೊಟ್ಟು ತಮ್ಮ ಸೈನ್ಯವನ್ನು ಬಲಪಡಿಸಿದರು. ಕಾಲಕ್ರಮೇಣ ಅವರು ಸೇನೆಯಲ್ಲಿಯೂ ರಾಜ್ಯದಲ್ಲಿಯೂ ಮುಖ್ಯ ಮುಖ್ಯ ಹುದ್ದೆಗಳನ್ನು ಸಂಪಾದಿಸಿಕೊಂಡುದರಿಂದ ಇಲ್ಲಿಯ ಮುಸಲ್ಮಾನರು ಅವರ ಮೇಲೆ ಅಸೂಯೆಗೊಂಡು ಅವರಿಗೆ ಕೇಡನ್ನುಂಟುಮಾಡಲು ಕಾಯುತ್ತಿದ್ದರು. ಅವರೊಳಗಿನ ಕಚ್ಚಾಟದಿಂದ ಬಹ್ಮನಿ ರಾಜ್ಯವು ಬಲಗುಂದುತ್ತಾ ಬಂದಿತು.



ಗೋಲ್ ಗುಂಬಜ್

(Courtesy Johnston and Hoffmann, Ltd.)

ಬಹ್ಮನಿ ರಾಜ್ಯವು ಒಡೆದು ಹೋದುದು

ಬಹ್ಮನಿ ಸುಲ್ತಾನರು ಕ್ರಿ. ಶ. 1430ರ ಸುಮಾರಿಗೆ ಬೀದರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿದರು. ಆದರೆ ದಕ್ಷಿಣದಲ್ಲಿ ಅವರ ಅಧಿಕಾರವು ಬಹುಕಾಲ ಬಾಳಲಿಲ್ಲ. ಕ್ರಿ. ಶ. 1482ರಲ್ಲಿ ಸುಲ್ತಾನನ ಮುಖ್ಯ ಮಂತ್ರಿಯಾಗಿದ್ದ ಪರ್ಷಿಯಾದ ಮಹಮೂದ ಗವಾನನನ್ನು ವಿನಾ ಸಂಶಯದಿಂದ ಸುಲ್ತಾನನು ವಧಿಸಲು ಗವಾನನ ಅನುಯಾಯಿಗಳಾದ ಇತರ ಸೇನಾನಿಗಳು ಗಲಭೆಯೆಬ್ಬಿಸಿದರು. ಅದರಿಂದ ಶಿಥಿಲವಾದ

ಬಿಡಾರದ ರಾಜ್ಯವು ಐದು ವಿಭಾಗಗಳಾಗಿ ಒಡೆದುಹೋಯಿತು. ಅವುಗಳಲ್ಲಿ ವಿಜಾಪುರ ರಾಜ್ಯವನ್ನು ಅದಿಲ್‌ಷಾಹೀ ವಂಶದವರೂ (1489-1686) ಗೋಲ್ಕೊಂಡವನ್ನು ಕುತುಬ್‌ಷಾಹೀ ವಂಶದವರೂ (1512-1687) ಅಹಮದನಗರವನ್ನು ನಿಜಾಮುಷಾಹೀ ವಂಶದವರೂ (1490-1637) ಬಿಡಾರವನ್ನು ಬರೀದ್‌ಷಾಹೀ ವಂಶದವರೂ ಬೀರಾರವನ್ನು ಇಮಾದ್‌ಷಾಹೀ ವಂಶದವರೂ ಆಳಲಾರಂಭಿಸಿದರು. ಈ ರಾಜರು ತಮ್ಮ ತಮ್ಮೊಳಗೂ ಇತರ ರಾಜರೊಡನೆಯೂ ಜಗಳವಾಡುತಲಿದ್ದರು.



ವಿಜಯನಗರದ ಅರಮನೆಯ ಸ್ನಾನಾಗಾರ

ವಿಜಯನಗರದ ವೈಭವ

ಆದರೆ ವಿಜಯನಗರ ರಾಜ್ಯದಲ್ಲಿ ಈ ರೀತಿಯ ವಿಭಾಗಗಳಾಗಲಿಲ್ಲ. ಹರಿಹರನ ವಂಶದವರು ನೂರೈವತ್ತು ವರ್ಷಗಳ ವರೆಗೂ ಆ ಮೇಲೆ ಸಾಳುವ ವಂಶದವರು ಹತ್ತೊಂಬತ್ತು ವರ್ಷಗಳ ವರೆಗೂ ತರುವಾಯ ತುಳುವ ವಂಶದವರು ಅರುವತ್ತು ವರ್ಷಗಳ ವರೆಗೂ ರಾಜ್ಯವಾಳಿ ಸಾಮ್ರಾಜ್ಯವನ್ನು ಬೆಳೆಸಿದರು. ಹಲವು ಬಾರಿ ಬಹ್ಮನಿರಾಜರು ಅವರೊಡನೆ ಯುದ್ಧಮಾಡಿದರೂ ವಿಜಯನಗರವನ್ನು ಮಾತ್ರ ಅವರಿಂದ ಜಯಿಸ

ಲಾಗಲಿಲ್ಲ. ವಿಜಯನಗರವು ಬೆಳೆಯುತ್ತಾ ಬಂದು ಪ್ರಪಂಚದ ಪ್ರಮುಖ ಪಟ್ಟಣಗಳಲ್ಲಿ ಒಂದೆನಿಸಿತು. ಅಲ್ಲಿಗೆ ಬಂದ ಅನೇಕ ಪೋರ್ಚುಗೀಸ ವರ್ತಕರು ಪಟ್ಟಣದ ವರ್ಣನೆಯನ್ನು ಸುರಸವಾಗಿ ಬರೆದಿರುತ್ತಾರೆ. ಬಹ್ಮನಿ ರಾಜ್ಯದಲ್ಲಿ ವಿಭಾಗಗಳು ಉಂಟಾದುದು ವಿಜಯನಗರದವರಿಗೆ ಹಿತವಾಯಿತು. ಮುಂದೆ ಅವರು ವಿಜಾಪುರ ಸುಲ್ತಾನನೊಡನೆ ಮಾತ್ರ ಯುದ್ಧ ಮಾಡಬೇಕಾಗಿ ಬಂದಿತು.


ಕೃಷ್ಣದೇವರಾಯ

ವಿಜಯನಗರದ ಅರಸರಲ್ಲಿ ಕೃಷ್ಣದೇವರಾಯನೇ ಪ್ರಖ್ಯಾತನಾದವನು.


ಕೃಷ್ಣದೇವರಾಯ 1509-29

ಅವನು ವಿಜಾಪುರ ಸುಲ್ತಾನನನ್ನು ಸೋಲಿಸಿ ರಾಯಚೂರ ದೋವಾಬನ್ನು ಜಯಿಸಿದನು. ಒರಿಸ್ಸಾ ಪ್ರಾಂತವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ವೈಭವದ ಶಿಖರವನ್ನೇರಿದ್ದಿತು. ಅವನ ಆಸ್ಥಾನದಲ್ಲಿ ಹಲವು ಪಂಡಿತರೂ ಕವಿಗಳೂ ಆಶ್ರಯ ಪಡೆದಿದ್ದರು. ಆಗ ದಸರಾ ಹಬ್ಬವು ಬಹು ವಿಜೃಂಭಣೆಯಿಂದ ಜರಗುತ್ತಿದ್ದಿತು. ಅವನು ವಿಜಯವಿಠಲ ದೇವಾಲಯವನ್ನೂ, ಕೃಷ್ಣ ದೇವಾಲಯವನ್ನೂ, ಪಂಪಾಪತಿ ದೇವಾಲಯದ ಗೋಪುರವನ್ನೂ ವಿಜಯನಗರದಲ್ಲಿ ಕಟ್ಟಿಸಿದನು.

ಕೃಷ್ಣದೇವರಾಯನ ತರುವಾಯ ಪಟ್ಟಕ್ಕೆ ಬಂದ ಅರಸರು ವಿಲಾಸಿಗಳಾಗಿದ್ದುದರಿಂದ ರಾಜ್ಯಭಾರದ ಕಡೆಗೆ ಗಮನವನ್ನು ಕೊಡದೆ ಅವರ ಆಪ್ತನಾದ ರಾಮರಾಯನೆಂಬವನ ಕೈಯಲ್ಲಿ ಅಧಿಕಾರವನ್ನು ಬಿಟ್ಟುಕೊಟ್ಟಿದ್ದರು.

ವಿಜಯನಗರದ ನಾಶ 1565

ವಿಜಯನಗರದ ವೈಭವನ್ನು ಕಂಡು ಅಸೂಯೆಯಿಂದ ಉರಿಯುತ್ತಿದ್ದ ದಕ್ಷಿಣದ ಸುಲ್ತಾನರು 1565ರಲ್ಲಿ ಒಟ್ಟುಗೂಡಿ ವಿಜಯನಗರದ ಮೇಲೆ ದಂಡೆತ್ತಿ ಬಂದರು. ತಾಳಿಕೋಟೆಯ ಹತ್ತಿರದಲ್ಲಿರುವ ರಕ್ಕಸ



ತಂಗಡಿಯೆಂಬ ಹಳ್ಳಿಯಲ್ಲಿ ಎರಡು ಪಕ್ಷಗಳೊಳಗೆ ಘೋರ ಯುದ್ಧವು ನಡೆದು ವಿಜಯನಗರದ ಸೈನ್ಯವು ಸೋತುಹೋಯಿತು. ವಿಜಯಿಗಳಾದ ಸುಲ್ತಾನರ ಸೈನ್ಯಗಳು ಸಂಪತ್ಸಮೃದ್ಧವಾದ ವಿಜಯನಗರವನ್ನು ಪ್ರವೇಶಿಸಿದುವು. ಜನರು ಓಡಿಹೋದರು. ರಾಜ... ದವರು ಪಟ್ಟಣವನ್ನು ಕೊಳ್ಳೆಯ ಹೊಡೆಯುವುದಕ್ಕೆ ಪ್ರಾರಂಭ ಮಾಡಿದರು. ಐದು ತಿಂಗಳ ಕಾಲ ಸುಲ್ತಾನರ ಸೈನಿಕರು ವಿಜಯನಗರದ ... ಸುಡಿದಹಾಗೆ ಅಲ್ಲಿಯ ಅರಮನೆಗಳನ್ನು ದೇವಾಲಯಗಳನ್ನು ... ವಿಧ ಶಿಲ್ಪಗಳನ್ನು ಕೆಡವಿ ನುಚ್ಚುಗೂರಾಗಿಸಿದರು. ಅಂದಿನಿಂದ ಇಂದಿ... ವಿಜಯನಗರವು ಹಾಳು ಬಿದ್ದಿದೆ.

ಪಟ್ಟಣವನ್ನು ಈ ರೀತಿಯಲ್ಲಿ ಹಾಳು ಕೆಡವಿ ಸುಲ್ತಾನರು ತ... ದೇಶಕ್ಕೆ ಮರಳಿದರು. ವಿಜಯನಗರ ಸಾಮ್ರಾಜ್ಯದ ಉತ್ತರದ ಭಾಗಗಳು ವಿಜಾಪುರದ ವಶಕ್ಕೆ ಸೇರಿದುವು. ದಕ್ಷಿಣದಲ್ಲಿ ಸ್ವ... ಪಾಳೆಯಗಾರರು ತಮ್ಮ ಅಧಿಕಾರವನ್ನು ಬಲಪಡಿಸಿಕೊಂಡರು. ತಂಜಾವೂರು, ಕೆಳದಿ, ಮಧುರಾ, ಮೈಸೂರು, ಚಿತ್ರದುರ್ಗ ಮುಂ... ಅನೇಕ ಹೊಸ ರಾಜ್ಯಗಳು ಹುಟ್ಟಿ ಬೆಳೆದುವು. ದಕ್ಷಿಣ ಹಿಂದೂದೇಶ... ಸ್ವತಂತ್ರವಾದ ಸಾಮ್ರಾಜ್ಯಗಳಲ್ಲಿ ವಿಜಯನಗರವೇ ಅತ್ಯಂತ ದೊ... ಸಾಮ್ರಾಜ್ಯವಾಗಿದ್ದು ಅದೇ ಕಡೆಯದಾಯಿತು.

10. ಮೊಗಲ ಸಾಮ್ರಾಜ್ಯವು

ಹದಿನಾರನೆಯ ಶತಮಾನದ ಆದಿಯಲ್ಲಿ ಹಿಂದೂದೇಶದ... ಅನೇಕ ರಾಜ್ಯಗಳಿದ್ದುವು. ಅವುಗಳಲ್ಲಿ ಹೆಚ್ಚಿನವು ಮುಸಲ್ಮಾನ ರಾ...

ದೇಶದ ಸ್ಥಿತಿ

ಗಳಾಗಿದ್ದುವು. ಉತ್ತರದಲ್ಲಿ ಕಾಶ್ಮೀರ, ಪಂಜಾ... ಸಿಂಧ, ದಿಲ್ಲಿ, ಜೌನಪುರ, ಬಂಗಾಳ, ಮಾಳ... ಗುಜರಾಥ. ಇವು ಮುಸಲ್ಮಾನರ ಕೈಯಲ್ಲಿದ್ದುವು. ಅವುಗಳ ನ... ಯಿದ್ದ ರಜಪೂತಾನದಲ್ಲಿ ಹಿಂದಿನ ಕಾಲದಿಂದಲೂ ನಡೆದಿದ್ದ ರಜ... ರಾಜ್ಯಗಳಿದ್ದುವು. ರಜಪೂತಾನದಲ್ಲಿ ರಾಣಾಸಂಗರಾಮನೆಂಬ ಪ್ರಬ... ನಾಗಿದ್ದನು. ದಕ್ಷಿಣದಲ್ಲಿ ಖಾಂದೇಶ, ಅಹಮದನಗರ, ಬಿ...

...ರ, ಗೋಲಕೊಂಡ ಮತ್ತು ಬಿಜಾಪುರ ರಾಜ್ಯಗಳು ಸ್ವತಂತ್ರವಾಗಿದ್ದು ...ತ್ತ ತಮ್ಮೊಳಗೂ ವಿಜಯನಗರದವರೊಡನೆಯೂ ಯುದ್ಧಾಸಕ್ತವಾ ...ವು. ತುಂಗಭದ್ರೆಯ ದಕ್ಷಿಣದಲ್ಲಿ ಕೃಷ್ಣದೇವರಾಯನ ಕೈಕೆಳಗೆ ...ಯನಗರ ಸಾಮ್ರಾಜ್ಯವು ವೈಭವದಿಂದ ಮೆರೆಯುತ್ತಿತ್ತು. ಆ ...ದಲ್ಲಿಯೇ ಪೋರ್ತುಗೀಸರು ಕೇಪ್ ಒಫ್ ಗುಡ್‌ಹೋಪ್ ಮಾರ್ಗ ...ಗಿ ವ್ಯಾಪಾರಕ್ಕಾಗಿ ಹಿಂದೂದೇಶಕ್ಕೆ ಬಂದು ಕಲ್ಲಿಕೋಟೆ, ಕಣ್ಣಾ ...ರು, ಕೊಚ್ಚಿ ಮತ್ತು ಸೂರತ್ ಪಟ್ಟಣಗಳಲ್ಲಿ ತಮ್ಮ ಭಂಡಸಾಲೆ ...ನ್ನು ಕಟ್ಟಿಸಿ ವ್ಯಾಪಾರವನ್ನು ನಡೆಸುತ್ತಿದ್ದರು.

ಆ ಕಾಲದಲ್ಲಿಯೇ ಅಫಘಾನಿಸ್ಥಾನದ ಕಾಬೂಲಿನಲ್ಲಿ ಬಾಬರ ...ಬ ಅರಸನು ಆಳುತ್ತಿದ್ದನು. ಅವನು ತೈಮೂರನ ವಂಶದವನಾಗಿ ...ದ್ದನು. ಅವನ ಹುಟ್ಟೂರಾದ ಫರಗಾನಾದಿಂದ

ಬಾಬರ
1526-1530

ಅವನನ್ನು ಅವನ ಚಿಕ್ಕಪ್ಪನು ಓಡಿಸಿಬಿಟ್ಟುದರಿಂದ ಬಾಬರನು ಕಾಬೂಲಿಗೆ ಬಂದು ಅದನ್ನು ವಶಪಡಿಸಿ ...ರಾಜ್ಯವಾಳುತ್ತಿದ್ದನು. ಹಿಂದೂದೇಶದ ಐಶ್ವರ್ಯವೂ ತನ್ನ ...ಯನಾದ ತೈಮೂರನಂತೆ ಮೆರೆಯಬಹುದೆಂಬ ಕಾಂಕ್ಷೆಯೂ ಬಾಬರ ...ನ್ನು ಹಿಂದೂದೇಶದ ಕಡೆಗೆ ಆಕರ್ಷಿಸಿದುವು. ಹಿಂದೂದೇಶದ ಆಗಿನ ...ಕಾಲ ಪರಿಸ್ಥಿತಿಯು ಹೀಗಿರೆ. ಕಣ್ಣಿಟ್ಟುಕೊಂಡು ಕಾಯುತ್ತಿದ್ದ ...ಬರನು, ಸಂದರ್ಭವು ಲಭಿಸಿದೊಡನೆ ತನ್ನ ಚಿಕ್ಕ ವಿಶ್ವಾಸಿ ಸೇನೆ ...ಡನೆ ಕ್ರಿ. ಶ. 1526ರಲ್ಲಿ ಖೈಬರ್ ಕಣಿವೆಯನ್ನು ದಾಟಿ ಪಂಜಾಬನ್ನು ...ಪಡಿಸಿಕೊಂಡು ಢಿಲ್ಲಿಯ ಕಡೆಗೆ ದಂಡೆತ್ತಿ ಹೋದನು. ಢಿಲ್ಲಿಯ ...ನಾದ ಇಬ್ರಾಹಿಮ್ ಲೋದಿಯು ಪಾಣಿಪತ ರಣಭೂಮಿಯಲ್ಲಿ ...ಬರನನ್ನು ಎದುರಿಸಿ ಕಾದಾಡಿ, ಸಂಪೂರ್ಣವಾಗಿ ಸೋತು ಪ್ರಾಣ ...ರ್ಪಿಸಿದನು. ಢಿಲ್ಲಿಯು ಬಾಬರನ ವಶವಾಯಿತು. ಬಾಬರನು ...ಮೂರನಂತೆ ಢಿಲ್ಲಿಯಲ್ಲಿ ಕೊಳ್ಳೆ ಹೊಡೆಯದೆ, ಜನರಾರನ್ನೂ ಹಿಂಸಿ... ಕಾಬೂಲಿಗೇ ಮರಳಬೇಕೆನ್ನುತ್ತಿದ್ದ ತನ್ನ ಸೈನಿಕರ ಮಾತಿಗೂ ...ಗೊಡದೆ, ಢಿಲ್ಲಿಯಲ್ಲಿಯೇ ಇರಲು ನಿಶ್ಚಯಿಸಿದನು. ಇದನ್ನರಿತ ...ಪೂತರು ಬೆದರಿದರು. ಢಿಲ್ಲಿಯ ರಾಜ್ಯವು ಬಲಗೊಂಡರೆ ತಮಗೆ ...ದೆಯೆಂದು ತಿಳಿದುಕೊಂಡು ಅವರೆಲ್ಲರೂ ಸಂಗರಾಜನ ನಾಯ...

ಕತ್ವದಲ್ಲಿ ಸಿಕ್ರಿ ಎಂಬಲ್ಲಿ ಬಾಬರನೊಡನೆ ಯುದ್ಧವನ್ನು ಹೂಡಿದರು. ಭೀಕರವಾದ ಯುದ್ಧವು ನಡೆದು ಬಾಬರನು ವಿಜಯಿಯಾದನು. ರಜ ಪೂತರು ಸೋತು ಓಡಿದರು. ಬಾಬರನ ಸಾಮ್ರಾಜ್ಯವು ಸ್ಥಿರವಾಯಿತು. ಬಾಬರನು ಮೊಗಲ ಪಂಗಡಕ್ಕೆ ಸೇರಿದ್ದವನೆಂದು ಜನರು ಭಾವಿಸಿದ್ದರು. ಆದುದರಿಂದ ಅವನ ವಂಶವನ್ನು ಮೊಗಲ ವಂಶವೆಂದು ವಾಡಿಕೆಯಾಗಿ ಕರೆಯುತ್ತಾರೆ. ಅವನ ಸೈನ್ಯದಲ್ಲಿ ತುರುಕರೂ ಮೊಗಲರೂ ಇದ್ದರು. ಅವನ ತಾಯಿಯು ಮೊಗಲವಂಶಕ್ಕೆ ಸೇರಿದವಳೂ ತಂದೆಯು ತುರುಕ ವಂಶದವನೂ ಆಗಿದ್ದರು.

ಬಾಬರನು ರಜಪೂತರನ್ನು ಸೋಲಿಸಿದ ತರುವಾಯ ಜೌನ ಪುರವನ್ನೂ ಬಂಗಾಳವನ್ನೂ ಜಯಿಸಿ, ಹಿಂದೂದೇಶದಲ್ಲಿ ಮೊಗಲ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಚೆನ್ನಾದ ರಾಜ್ಯ ಭಾರದಿಂದ ಜನರ ಮನಸ್ಸನ್ನು ಒಲಿಸಿಕೊಳ್ಳಬೇಕೆಂದು ಬಾಬರನು ಪ್ರಯತ್ನಿಸಿದರೂ ಬಾಬರನೂ ಅವನ ಅನುಯಾಯಿಗಳೂ ವಿದೇಶೀಯರಾದುದರಿಂದ ಇಲ್ಲಿನ ಹಿಂದೂ ರಾಜರೂ ಮುಸಲ್ಮಾನ ಅರಸರೂ ಮೊಗಲರೊಡನೆ ಸಹಕರಿಸಲಿಲ್ಲ. ಬಾಬರನು ಹೆಚ್ಚು ಕಾಲ ಬಾಳಿದ್ದುದಾದರೆ ಜನರನ್ನು ತನ್ನ ಕಡೆಗೆ ಒಲಿಸಿಕೊಳ್ಳಬಹುದಾಗಿದ್ದಿತು. ಆದರೆ ಅವನು 1530ರಲ್ಲಿ ಸಾಯಲು ಅವನ ಮಗನಾದ ಹುಮಾಯೂ ನನು ಪಟ್ಟಕ್ಕೆ ಬಂದನು.

ಬಾಬರನ ಮರಣ

ಹುಮಾಯೂನನು ತನ್ನ ತಂದೆಯಷ್ಟು ಜಾಣನೂ, ದೂರದರ್ಶಿ ಯೂ, ಸಹನಾಶೀಲನೂ, ಚಟುವಟಿಕೆಯಿಂದ ಕೆಲಸ ಮಾಡುವವನೂ ಆಗಿರಲಿಲ್ಲ. ಅವನಿಗೆ ಹಿಂದುಸ್ಥಾನದ ಅರಸರು ಮಾತ್ರವಲ್ಲದೆ ಕಾಬೂಲಿನಲ್ಲಿ ಆಳುತಿದ್ದ ಅವನ ತಮ್ಮನಾದ ಕಮ್ರಾನನೂ ಕೂಡ ವಿರೋಧಿಗಳಾಗಿದ್ದರು. ಹುಮಾ ಯೂನನು ಗುಜರಾಥದ ಸುಲ್ತಾನನ ಸೊಕ್ಕನ್ನು ಮುರಿಯಲು ಅಲ್ಲಿಗೆ ಹೋದಾಗ, ಬಿಹಾರಿನ ಮುಸಲ್ಮಾನರು ಶೇರ್ ಖಾನ್ ಎಂಬ ಧೀರ ಸೇನಾನಿಯ ನಾಯಕತ್ವದಲ್ಲಿ ದಂಗೆ ಎದ್ದು ಬಂಗಾಳವನ್ನು ವಶಪಡಿಸಿ ಕೊಂಡರು. ಹುಮಾಯೂನನು ಸೇನಾಸಮೇತನಾಗಿ ಬಂಗಾಳಕ್ಕೆ ಹೋಗಲು, ಶೇರ್ ಖಾನನು ಆತನನ್ನು ಬಕ್ಸಾರ್ ಎಂಬಲ್ಲಿ ಸೋಲಿಸಿ

ಹುಮಾಯೂನ 1530-1540

ಜನು. ಹುಮಾಯೂನನು ಆಗ್ರಾ ಪಟ್ಟಣಕ್ಕೆ ಓಡಿಹೋಗಿ ಸೈನ್ಯವನ್ನು ಸಜ್ಜುಗೊಳಿಸಿದನು. ಪುನಃ ಶೇರ್ ಖಾನನು ಕನೋಜದಲ್ಲಿ ಹುಮಾಯೂನನನ್ನು ಸಂಧಿಸಿ ಸೋಲಿಸಿದನು. ಹುಮಾಯೂನನು ಪಲಾಯನಮಾಡಿ ರಜಪೂತಾನದಿಂದ ಸಿಂಧವನ್ನು ಸೇರಿದನು. ಅಲ್ಲಿ 1542ರಲ್ಲಿ ಅವನ ಹೆಂಡತಿಯು ಅಕ್ಬರನೆಂಬ ಮಗುವನ್ನು ಪ್ರಸವಿಸಿದಳು. ಅಲ್ಲಿಂದ ಹುಮಾಯೂನನು ಕಾಬೂಲಿಗೆ ಹೋಗುವ ಬದಲು ನೆಟ್ಟಗೆ ಪರ್ಷಿಯಾ ದೇಶಕ್ಕೆ ಹೋಗಿ ಅಲ್ಲಿನ ಅರಸನ ಮರೆಹೊಕ್ಕನು. ಹುಮಾಯೂನನ ಕುಟುಂಬವು ಕಮ್ರಾನನ ಸೆರೆಯಲ್ಲಿ ಸಿಲುಕಿ ಕಷ್ಟಕ್ಕೀಡಾಯಿತು.



ಹೂಮಾಯೂನನು
(Copyright reserved by the Archaeological Survey of India)

ಆ ಮೇಲೆ ಹಿಂದುಸ್ಥಾನದಲ್ಲಿ ಶೇರ್ ಖಾನನು ಶೇರ್ ಷಹನೆಂಬ ಬಿರುದಿನಿಂದ ರಾಜ್ಯವಾಳತೊಡಗಿದನು. ಶೇರ್ ಷಹನು ರಾಜ್ಯಾಡಳಿತದಲ್ಲಿಯೂ ಯುದ್ಧವಿದ್ಯೆಯಲ್ಲಿಯೂ ಏಕಪ್ರಕಾರವಾಗಿ ನಿಪುಣನಾಗಿದ್ದನು. ಹಿಂದೂಗಳು, ಮುಸಲ್ಮಾನರು ಎಂಬ ಭೇದಭಾವಗಳಿಲ್ಲದೆ ಅವನು ಆಳುತ್ತಿದ್ದನು. ಹಿಂದೂಗಳಿಗೆ ಉಚ್ಚಾಧಿಕಾರಗಳನ್ನಿತ್ತು ಅವರು ತನ್ನೊಡನೆ ಸಹಕರಿಸುವಂತೆ ಮಾಡಿದನು. ತನ್ನ ರಾಜ್ಯದ ಅಧಿಕಾರಿಗಳು ಲಂಚ ತೆಗೆದುಕೊಳ್ಳದಂತೆಯೂ ನಿಷ್ಪಕ್ಷಪಾತದಿಂದ ರಾಜ್ಯಾಡಳಿತವನ್ನು ಕೈಕೊಳ್ಳುವಂತೆಯೂ ಅವನು ಜಾಗರೂಕನಾಗಿದ್ದನು. ಕಳ್ಳಕಾಕರನ್ನು ಶಿಕ್ಷಿಸಿ ರಾಜ್ಯದಲ್ಲಿ ಶಾಂತತೆಯನ್ನು ಸ್ಥಾಪಿಸಿದನು. ಅವನ ಸುಧಾರಣೆಗಳಲ್ಲಿ ವಿಶೇಷವಾದುದೆಂದರೆ ಕಂದಾಯದ ಖಾತೆಯಲ್ಲಿ ಮಾಡಿದ ಸುಧಾರಣೆಗಳು. ಅವನ ಕಂದಾಯದ ಖಾತೆಗೆ ತೋಡರಮಲ್ಲನೆಂಬ ರಜಪೂತ ಅರಸನು ಮುಖ್ಯಾಧಿಕಾರಿಯಾಗಿದ್ದನು. ತೋಡರಮಲ್ಲನು ಕ್ಷತ್ರ

ಶೇರ್ ಷಹ
1540-45

ಹೊಲಗದ್ದೆಗಳನ್ನು ಅಳತೆಮಾಡಿ, ಯಾವ ಯಾವ ಸ್ಥಳದಿಂದ ಎಷ್ಟೆಷ್ಟು ಕಂದಾಯವು ಸರಕಾರಕ್ಕೆ ಸಲ್ಲಬೇಕೆಂದು ನಿಶ್ಚೈಸಿದುದರಿಂದ ರೈತ ನಿಶ್ಚಿಂತರಾಗಿ ವ್ಯವಸಾಯ ಮಾಡಲು ಅನುಕೂಲವಾಯಿತು. ಶೇರ್ ಷಹನ ವಿಶಾಲ ದಾನಶೀಲತೆಯು ಶ್ಲಾಘನೀಯವು. ಅಲ್ಪಾವಧಿ ರಾಜ್ಯಭಾರದಲ್ಲಿ ಅವನು ತೋರಿದಷ್ಟು ಬುದ್ಧಿಕೌಶಲ್ಯವನ್ನು ಇತ ರಾಜರೂ ತೋರಿಸಿದುದು ವಿರಳವೆನ್ನಬಹುದು.



ಶೇರ್ ಷಹನ ಗೋರಿ

ಶೇರ್ ಷಹನ ತರುವಾಯದ ಅರಸರು ಮಾತ್ರ ಅವನಷ್ಟು ವಿಶಾ ಹೃದಯರೂ ದೂರದರ್ಶಿಗಳೂ ಆಗಿರಲಿಲ್ಲ. ಸೇನೆಯನ್ನು • ಸರಿ ಗೊಳಿಸಲು ಕೂಡ ಅವರು ಅಶಕ್ತರಾಗಿದ್ದುದರಿಂದ ಹುಮಾಯೂನ ಪುನಃ ಹಿಂದುಸ್ಥಾನಕ್ಕೆ ಬರಲು ಆತನಿಗೆ ಅನುವು ದೊರೆಯಿತು. ಅವ

ರ್ಶಿಯದ ಅರಸನ ಒತ್ತಾಸೆಯನ್ನು ಪಡೆದು 1555ರಲ್ಲಿ ಕಾಬೂಲನ್ನು ನ್ನ ತಮ್ಮನಿಂದ ಜಯಿಸಿಕೊಂಡು, ಸೇನಾಸಮೇತನಾಗಿ ಹಿಂದೂ ದೇಶಕ್ಕೆ ದಂಡೆತ್ತಿ ಬಂದು ಢಿಲ್ಲಿಯಲ್ಲಿ ಆಗ ಆಳು ತಿದ್ದ ಸೂರ ಮನೆತನದ ಅರಸರನ್ನು ಓಡಿಸಿ ತಾನು ಕಳೆದುಕೊಂಡ ರಾಜ್ಯವನ್ನು ಮರಳಿ ಪಡೆದನು. ಆದರೆ ತನ್ನ ರಾಜ್ಯಭಾರವನ್ನು ಸ್ಥಿರಪಡಿಸುವ ಮೊದಲೇ, ಅಂದರೆ ಢಿಲ್ಲಿಗೆ ಬಂದ ಕೆಲವೇ ತಿಂಗಳುಗಳಲ್ಲಿ ಮೃತಿಯನ್ನೈದಿದನು.

ಹುಮಾಯೂನನ ಪುನರಾಗಮನ

ಆಗ ಅವನ ಮಗನಾದ ಚಿಕ್ಕ ಪ್ರಾಯದ ಅಕ್ಬರನು ತನ್ನ ಪೋಷಕ ನಾದ ಬೈರಾಮುಖಾನನೊಂದಿಗೆ ಲಾಹೋರಿನಲ್ಲಿದ್ದನು. ಸಮಯ ವನ್ನು ನಿರೀಕ್ಷಿಸುತ್ತಿದ್ದ ಮೊಗಲರ ವೈರಿಗಳು ಈ ಸುಸಂಧಿಯನ್ನು ಸಾಧಿಸಿ ಢಿಲ್ಲಿಯನ್ನು ಮುತ್ತಿ ವಶ ಪಡಿಸಿಕೊಂಡರು. ಅವರ ಮುಖಂಡನೇ ಹೇಮು ನೆಂಬ ಹಿಂದೂಸರದಾರನು. ಬೈರಾಮುಖಾನನು, ಯುದ್ಧ ಮಾಡಲೇ ಅಥವಾ ಕಾಬೂಲಿಗೆ ಹೋಗಿ ಸಮಯವನ್ನು ನಿರೀಕ್ಷಿಸಿಕೊಂಡಿರಲೇ ಎಂದು ಆಲೋಚನೆಗೊಳಗಾಗಿ ಕೊನೆಗೆ ಯುದ್ಧಮಾಡುವುದೆಂದೇ ನಿರ್ಧ ರಿಸಿದನು. ಮೊಗಲರು ಢಿಲ್ಲಿಯ ಕಡೆಗೆ ದಂಡೆತ್ತಿಹೋದರು. ಹೇಮು ವಿಗೂ ಮೊಗಲರಿಗೂ ಪಾಣಿಪತದಲ್ಲಿ ಕದನವಾಗಿ ಹೇಮುವು ಸೋತು ಹೋದನು. ಢಿಲ್ಲಿಯು ಮೊಗಲರ ವಶವಾಯಿತು. ಬೈರಾಮನು ಅಕ್ಬರ ನಿಗೆ ಢಿಲ್ಲಿಯ ಪಟ್ಟವನ್ನು ಕಟ್ಟಿ ತಾನೇ ಆತನ ರಕ್ಷಕನಾಗಿ ರಾಜ್ಯಾಡಳಿ ತದ ಕಾರ್ಯವನ್ನು ನಿರ್ವಹಿಸಿದನು. 1560ರಲ್ಲಿ ಅಕ್ಬರನು ಪ್ರಾಯಸಮ ರ್ಥನಾಗಲು ಅವನು ಬೈರಾಮನಿಂದ ಅಧಿಕಾರವನ್ನು ಪಡೆದುಕೊಂಡು ತಾನೇ ರಾಜ್ಯವನ್ನು ಆಳತೊಡಗಿದನು.

ಪಾನಿಪತ 1556

11. ಮೊಗಲ್ ಸಾಮ್ರಾಜ್ಯದ ಪುನರುಜ್ಜೀವನ

ಒಮ್ಮೆಗೆ ಕುಗ್ಗಿಹೋದ ಮೊಗಲ್ ಸಾಮ್ರಾಜ್ಯವನ್ನು ಅಕ್ಬರನು ಬೆಳೆಸಿ ಪುನರುಜ್ಜೀವನಗೊಳಿಸಿದನು. ಅಕ್ಬರನಲ್ಲಿ ರಾಜಯೋಗ್ಯವಾದ ಸದ್ಗುಣಗಳೆಲ್ಲವೂ ತುಂಬಿದ್ದುವು. ಜಾಣತನ, ತಾಳ್ಮೆ, ಕಷ್ಟಸಹಿಷ್ಣುತೆ,

ಧೈರ್ಯ, ಕೌಶಲ್ಯ, ವಿವೇಕಗಳಿಂದ ರಂಜಿಸುತಿದ್ದ ಅಕ್ಬರನಿಗೆ ಸಾಮ್ರಾಜ್ಯವನ್ನು ಪುನರುಜ್ಜೀವನಗೊಳಿಸುವ ಮಾರ್ಗವು ಚೆನ್ನಾಗಿ ತಿಳಿದಿದ್ದಿತು.

ಅಕ್ಬರನ ಶೀಲ ಸ್ವಭಾವಗಳು

ತನ್ನವರ ಕಡೆಗೆ ಇಲ್ಲಿನ ಮುಸಲ್ಮಾನರ ಮಾತ್ರ ಹಿಂದೂ ಜನರ ಮನಸ್ಸನ್ನು ಒಲಿಸಿಕೊಳ್ಳಬೇಕೆಂದು ಅವನಿಗೆ ತೋರಿತು. ತಾನು ಬರೀ ಒಂದೇ ಪಂಗಡದವರ ಬೆಂಬಲವನ್ನು ಪಡೆಯುವುದರ ಬದಲು ರಾಷ್ಟ್ರದ ಎಲ್ಲಾ ಜನತೆಯ ಪ್ರೀತಿಗೆ ಪಾತ್ರನಾಗಿ ಮೆರೆಯಬೇಕೆಂದು ಅವನಿಗೆ ಅನಿಸಿ, ಅದಕ್ಕನುಸಾರವಾಗಿ ಅವನು ವರ್ತಿಸಿದನು. ಅವನು ಧೀರನಾದ ಸೇನಾಧಿಪತಿಯಾಗಿದ್ದುದರಿಂದ ಹಿಂದೂದೇಶದ ರಾಜ್ಯಗಳನ್ನು ಒಂದೊಂದಾಗಿ ಜಯಿಸಿಕೊಳ್ಳುತ್ತಾ ಹೋದನು.

ಮೊದಲಾಗಿ ರಜಪುತಾನದ ರಜಪೂತ ಅರಸರೊಡನೆ ಯುದ್ಧವನ್ನು ಹೂಡಿದನು. ಜಯಪುರ, ಜೋಧಪುರ ಮೊದಲಾದ ರಾಜ್ಯಗಳ ಅರಸರು

ಅಕ್ಬರನೂ ರಜಪೂತರೂ

ಅಕ್ಬರನಿಗೆ ಶರಣು ಬಂದರು. ಅಕ್ಬರನು ಅವರನ್ನು ಕರುಣೆಯಿಂದ ಕಂಡು ಅವರ ರಾಜ್ಯಗಳನ್ನು ಅವರಿಗೇ ಮರಳಿಕೊಟ್ಟು ಅವರಿಗೆ ತನ್ನ ಆಸ್ಥಾನದಲ್ಲಿ ಶ್ರೇಷ್ಠವಾದ ಪದವಿಗಳನ್ನು ಕೊಟ್ಟನು. ಹಲವು ರಜಪೂತರನ್ನು ಸೇನೆಯಲ್ಲಿ ಸೇರಿಸಿಕೊಂಡನು. ರಾಜಕಾರ್ಯದಲ್ಲಿ ಆತನು ಹಿಂದೂ ಮುಸಲ್ಮಾನರೆಂಬ ಭೇದವನ್ನೇ ಇರಗೊಳಿಸಲಿಲ್ಲ. ಹಿಂದೂಗಳ ಮೇಲೆ ಹೊರಿಸಿದ್ದ ಜಿಜಿಯಾ, ಯಾತ್ರಾ ತೆರಿಗೆ, ಮೊದಲಾದುವುಗಳನ್ನು ತೆಗೆದುಹಾಕಿದನು. ಅಂಬರ ದೇಶದ ರಾಜನ ಮಗಳನ್ನು ತಾನು ಮದುವೆಯಾಗಿ ತನ್ನ ಕುಟುಂಬದವರು ರಜಪೂತ ಮಹಿಳೆಯರನ್ನು ಮದುವೆಯಾಗಲು ಪ್ರೋತ್ಸಾಹಿಸಿದನು. ಹೀಗಾಗಿ ಈ ಬಾಂಧವ್ಯದಿಂದ ಮೊಗಲ ರಜಪೂತರೊಳಗಿನ ಪರಸ್ಪರ ಪ್ರೀತಿಯು ಅಧಿಕವಾಯಿತು. ಅಕ್ಬರನ ನಂಬಿಗಸ್ಥರಾದ ಮಂತ್ರಾಲೋಚಕರಲ್ಲಿ ರಾಜಾ ಭಗವಾನದಾಸ, ರಾಜಾ ಮಾನಸಿಂಹ, ರಾಜಾ ಬೀರಬಲ, ರಾಜಾ ತೋಡರಮಲ್ಲ ಎಂಬ ರಜಪೂತ ಅರಸರೇ ಪ್ರಮುಖರಾಗಿದ್ದರು. ಇವರ ಸಹಾಯದಿಂದಲೇ ಅಕ್ಬರನು ಹಿಂದೂದೇಶದ ಇತರ ರಾಜ್ಯಗಳನ್ನು ಗೆದ್ದುದಲ್ಲದೆ ತನ್ನ ವಿಶಾಲವಾದ ಸಾಮ್ರಾಜ್ಯದ ಆಡಳಿತೆಯನ್ನು ವ್ಯವಸ್ಥೆಗೊಳಿಸಿದನು. ಆದರೆ ರಜಪೂತ ಅರಸರೊಳಗೆ

ಚಿತ್ತೂರಿನ ರಾಣಾ ಉದಯಸಿಂಹನು ಮಾತ್ರ ಅಕ್ಬರನಿಗೆ ತಲೆಮಣಿಯ ಲಿಲ್ಲ. 1567ರಲ್ಲಿ ಅಕ್ಬರನು ಚಿತ್ತೂರಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. ಉದಯಸಿಂಹನು ಅರಾವಳಿ ಬೆಟ್ಟಗಳ ಕಡೆಗೆ ಓಡಿಹೋಗಿ, ಅಲ್ಲಿ ಒಂದು ಸರೋವರದ ಹತ್ತಿರ ಉದಯಪುರವೆಂಬ ಸುಂದರ ಪಟ್ಟಣವನ್ನು ನಿರ್ಮಿಸಿ ಆಳ ತೊಡಗಿದನು. ಉದಯಸಿಂಹನ ಮಗನಾದ ಪ್ರತಾಪಸಿಂಹನು ತಂದೆಯಂತೆಯೇ ಕುಲಾಭಿಮಾನವನ್ನು ಬಿಡದೆ ಅಕ್ಬರನಿಗೆ ತಲೆಬಾಗ ಲಿಲ್ಲ. ಅಕ್ಬರನ ಸೈನ್ಯವು ಪ್ರತಾಪಸಿಂಹನ ರಾಜ್ಯವನ್ನು ಪ್ರವೇಶಿಸಿ ಹಳದಿ ಘಟ್ಟವೆಂಬಲ್ಲಿ ಆತನನ್ನು ಸೋಲಿಸಿತು. ಪ್ರತಾಪಸಿಂಹನು ಗುಡ್ಡ ಕಾಡುಗಳಿಗೆ ಓಡಿಹೋಗಿ ದಾರುಣವಾದ ಕಷ್ಟಗಳಿಗೀಡಾಗಿ ಬೇಸತ್ತನು. ಅಕ್ಬರನಿಗೆ ಶರಣಾಗತನಾಗುವ ಇಚ್ಛೆಯನ್ನು ಮಾತ್ರ ಮಾಡಲಿಲ್ಲ. ಕೊನೆಗೆ ಪ್ರತಾಪನು ಒಬ್ಬ ಮಿತ್ರನ ಸಹಾಯದಿಂದ ಹಣವನ್ನು ಸಂಗ್ರಹಿಸಿ, ಸೈನ್ಯಗಳನ್ನು ಕಟ್ಟಿಕೊಂಡು, ಉದಯಪುರವನ್ನು ಮರಳಿ ಪಡೆದು, ಅಲ್ಲಿಂದ ಮುಂದೆ ಅಕ್ಬರನ ತೊಂದರೆ ಇಲ್ಲದೆ ರಾಜ್ಯವನ್ನಾಳಿದನು.

ಚಿತ್ತೂರಿನ ರಾಣನು

ಅಕ್ಬರನ ಆಳ್ವಿಕೆಯ ಆರಂಭದಲ್ಲಿಯೇ ಆತನಿಗೆ ಮಾಳವ, ಜೌನಪುರಗಳು ದೊರಕಿದ್ದುವು. ಮುಂದೆ ಅವನು 1572ರಲ್ಲಿ ಗುಜರಾಥವನ್ನೂ, 1576ರಲ್ಲಿ ಬಂಗಾಳವನ್ನೂ, ಆ ತರುವಾಯ ಒರಿಸ್ಸಾ, ಕಾಶ್ಮೀರ, ಸಿಂಧ, ಕಂದಹಾರ ಮತ್ತು ಖಾಂದೇಶವನ್ನೂ ಗೆದ್ದುಕೊಂಡನು. ತನ್ನ ಆಳ್ವಿಕೆಯ ಕೊನೆಯಲ್ಲಿ ಅವನಿಗೆ ದಕ್ಷಣದ ರಾಜಕೀಯ ಪ್ರಕರಣದಲ್ಲಿ ಕೈಹಾಕುವ ಪ್ರಸಂಗವು ಬಂದಿತು. ಅಲ್ಲಿ ಪ್ರತಿಯೊಂದು ರಾಜ್ಯದಲ್ಲಿ ತಂಡಗಳಿದ್ದು ಅಂತಃಕಲಹಗಳಿದ್ದುವಲ್ಲದೆ ಬೇರೆ ಬೇರೆ ಸುಲ್ತಾನರೊಳಗೆ ಬಹಳ ಕಚ್ಚಾಟವಿದ್ದಿತು. ಅಹಮದ ನಗರದಲ್ಲಿಯೂ ಇಂತಹ ಕಲಹವು ಇದ್ದು ಒಂದು ಪಂಗಡದವರು ಅಕ್ಬರನ ಸಹಾಯವನ್ನಪೇಕ್ಷಿಸಿದರು. ಒಡನೆ 1595ರಲ್ಲಿ ಮೊಗಲ್ ಸೈನ್ಯವು ಅಹಮದನಗರಕ್ಕೆ ಮುತ್ತಿಗೆ ಹಾಕಿತು. ಅಲ್ಲಿಯ ರಾಣಿಯಾದ ಚಾಂದಬೀಬಿಯು ತನ್ನ ಸಿಪಾಯಿಗಳನ್ನು ಹುರಿದುಂಬಿಸುತ್ತಾ ಧೀರತನದಿಂದ ಕೋಟೆಯನ್ನು ಕಾಪಾಡಿಕೊಂಡಳು. ಆದರೆ ಬಹಳ ಸಮಯ ತಡೆಯಲಾಗದೆ 1596ರಲ್ಲಿ ಬೀರಾರ್ ಪ್ರಾಂತ

ಅಕ್ಬರನ ವಿಜಯ ಯಾತ್ರೆ

ವನ್ನು ಮೊಗಲರಿಗೊಪ್ಪಿಸಿ ಒಪ್ಪಂದ ಮಾಡಿಕೊಂಡಳು. ಮೂರು ವರ್ಷ
ಗಳಲ್ಲಿಯೆ ಅಹಮದನಗರದ ಜನರು ಚಾಂದಬೀಬಿಯನ್ನು ಕೊಲೆಗೈದ
ಗಲಭೆಯೆಬ್ಬಿಸಿದುದರಿಂದ ಅಹಮದನಗರವು ಅಕ್ಬರನ ವಶವಾಯಿತು.



ಅಕ್ಬರನ ದರ್ಬಾರು

(Copyright reserved by the Archaeological Survey of India)

ಅಕ್ಬರನ ಸಾಮ್ರಾಜ್ಯ
ಹಿಂದುಕುಶ್ ಪರ್ವತದಿಂ
ವಿಂಧ್ಯ ಪರ್ವತದ ವರೆ
ವಿಸ್ತರಿಸಿದ್ದಿತು. ಇಂತ
ವಿಶಾಲ ಸಾಮ್ರಾಜ್ಯವನ
ಅಕ್ಬರನು ಹದಿನೈದು ಸು
ಗಳಾಗಿ ವಿಂಗಡಿಸಿ ಒಂದೊ
ದಕ್ಕೆ ಒಬ್ಬೊಬ್ಬ ಸುಭೇದಾ
ನನ್ನು ನೇಮಿಸಿದ್ದನು. ಅ
ನು ತೆರಿಗೆಗಳನ್ನು ನ್ಯಾಯ
ಪ್ರಕಾರವಾಗಿ ವಸೂಲ
ಮಾಡುತ್ತಿದ್ದನು. ಶೇರ್
ಷನ ಕಾಲದಲ್ಲಿ ಕಂದಾಯ
ದ ಖಾತೆಯಲ್ಲಿ ಸುಧಾ
ರಣೆಗಳನ್ನು ಮಾಡಿ
ತೋಡರಮಲ್ಲನೇ ಅಕ್ಬರ
ಕಾಲದಲ್ಲೂ ಇದ್ದು ಹಿಂದಿ
ಸುಧಾರಣೆಗಳನ್ನೇ ಮುಂ
ರಿಸಿದನು. ರಾಜ್ಯಗಳನ
ಗೆದ್ದು ಸೈನ್ಯಗಳನ್ನು ಇ
ವುದರಿಂದ ಮಾತ್ರವೇ ರಾಜನ ಕರ್ತವ್ಯವು ಪೂರೈಸುವುದಿಲ್ಲವೆಂ
ಅಕ್ಬರನಿಗೆ ತಿಳಿದಿದ್ದಿತು. ತನ್ನ ಪ್ರಜೆಗಳ ಅಭ್ಯುದಯಕ್ಕಾಗಿ ಪ್ರಯತ್ನಿ
ವುದೇ ತನ್ನ ಆದ್ಯ ಕರ್ತವ್ಯವೆಂದು ಅವನು ಮನಗಂಡನು. ದೇ
ದಲ್ಲಿ ಶಾಂತತೆಯನ್ನು ನೆಲೆಗೊಳಿಸಿ ಜಾತಿ ಮತ ಭೇದಗಳನ್ನು ಇಳ
ಲಿಕ್ಕಿಸಿದನು. ಅಕ್ಬರನಿಗೆ ಅಬುಲ್ ಫಜಲ್ ಮತ್ತು ಅಬುಲ್ ಫೈ

ಂಬ ಇಬ್ಬರು ಬಾಂಧವರು ಮಂತ್ರಿಗಳಾಗಿದ್ದರು. ಅವರು ಎಲ್ಲ ಮತ ತ್ವಗಳನ್ನು ಅರಿತಿದ್ದರು. ಅಕ್ಬರನು ಆಗಾಗ ವಿವಿಧ ಮತ ತತ್ವಗಳ ಷಯು ಚರ್ಚಿಸಲು ಸಭೆಗಳನ್ನು ಜರಗಿಸುತ್ತಿದ್ದನು. 1582ರಲ್ಲಿ ಅವನು ೀನ್ ಇಲಾಹಿ ಎಂಬ ಹೊಸ ಮತವನ್ನು ಸ್ಥಾಪಿಸಿ, ತಾನೇ ಆ ಮತದ ಸ್ಥಾಪನಾಚಾರ್ಯನಾದನು. ಅದರಲ್ಲಿ ಹಿಂದೂ ಮುಸಲ್ಮಾನ ಮತಗಳ ಉಚ್ಚ ತತ್ವಗಳು ಅಡಕವಾಗಿದ್ದುವು. ಆದರೆ ಈ ಮತವು ದೇಶದಲ್ಲಿ ಅಷ್ಟು ಪ್ರಚಾರಕ್ಕೆ ಬಾರದೆ ಅವನ ಹಿಂದೆಯೇ ಅಳಿದುಹೋಯಿತು.



ಅಬುಲ್ ಫಜಲ

(Copyright reserved by the Archaeological Survey of India)

ರಾಜ್ಯದ ವೈಭವ

ಅಕ್ಬರನ ಅರ್ಧ ಶತಮಾನದ ಆಳ್ವಿಕೆಯ ಕಾಲದಲ್ಲಿ ಹಿಂದುಸ್ಥಾನದ ವೈಭವವು ಹೆಚ್ಚಿತು. ರಾಜ್ಯಾಡಳಿತವನ್ನು ಹೇಗೆ ಮಾಡಬೇಕೆಂದು ಅಕ್ಬರನು ಮುಂದಿನ ಜನಾಂಗದವರಿಗೆ ಒಂದು ಹಾದಿಯನ್ನು ಹಾಕಿಕೊಟ್ಟನು. ದೇಶದಲ್ಲಿ ಶಾಂತಿಯು ನೆಲೆಸಿದ್ದುದರಿಂದಲೂ, ಅರಸನ ಪ್ರೋತ್ಸಾಹದ ಬಲದಿಂದಲೂ ಸುಂದರ ಕಲೆಗಳು ಪುನರುಜ್ಜೀವನ ಹೊಂದಿ ಹಿಂದೂ ದೇಶವು ಬೆಳಕಿಗೆ ಬಂದಿತು. ಅಕ್ಬರನು ತನ್ನ ಸಾಮ್ರಾಜ್ಯವನ್ನು ಬಲವಾದ ತಳಹದಿಯ ಮೇಲೆ ಕಟ್ಟಿದ್ದನು.

ಜಹಾಂಗೀರ
1605–1627

ಅಕ್ಬರನ ಮರಣಾನಂತರ ಅವನ ಹಿರಿಯ ಮಗನಾದ ಸಲೀಮನು ಜಹಾಂಗೀರ್ ಎಂಬ ಬಿರುದಿನಿಂದ ಪಟ್ಟಕ್ಕೆ ಬಂದು ಇಪ್ಪತ್ತೆರಡು ವರ್ಷ ರಾಜ್ಯಭಾರ ಮಾಡಿದನು. ಅವನ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯದೊಳಗೆ ಗಲಭೆಗಳು ಬಹಳ ಕಡಿಮೆಯಾಗಿದ್ದುವು. ಆಗ ಅಹಮದನಗರದ ಸಾಮಂತರಾಜನು

ಮಾಲಿಕ್ ಅಂಬರನೆಂಬ ಹಬಸಿ ವೀರನೊಬ್ಬನ ಸಹಾಯದಿಂದ ಸ್ವತಂತ್ರನಾಗಿ ಬಿಟ್ಟನು. 1622ರಲ್ಲಿ ಪರ್ಸಿಯಾದವರು ಕಂದಹಾರವನ್ನು ಗೆದ್ದುಕೊಂಡರು. ಜಹಾಂಗೀರನು ಹೆಚ್ಚು ಕಡಿಮೆ ತನ್ನ ತಂದೆಯ ರೀತಿಯಲ್ಲಿಯೇ ರಾಜ್ಯಾಡಳಿತವನ್ನು ಕೈಕೊಂಡನು. ಒಮ್ಮೊಮ್ಮೆ ಮಾತ್ರ ಹಿಂದೂಗಳಿಗೆ ತುಸು ತೊಂದರೆಯಿದ್ದಿತಾದರೂ ಸಾಧಾರಣವಾಗಿ ಅವನ ಸರಕಾರವು ಹಿಂದೂಗಳನ್ನು ಉಳಿದ ಪ್ರಜೆಗಳಂತೆಯೇ ಪರಿಗಣಿಸುತ್ತಿತ್ತು. 1611ರಲ್ಲಿ ಜಹಾಂಗೀರನು ನೂರ್ ಜಹಾನಳೆಂಬವಳನ್ನು ಮದುವೆಯಾದನು. ಈ ವಿವಾಹವು ಅವನ ಜೀವನದಲ್ಲಿಯೂ, ಆಗಿನ ಇತಿಹಾಸದಲ್ಲಿಯೂ ಬಹಳ ವಿಶೇಷ ಸಂಗತಿಯಾಗಿ ಪರಿಣಮಿಸಿತು.

ನೂರ್‌ಜಹಾನಳು

ನೂರ್‌ಜಹಾನಳು ಓರ್ವ ಪಾರ್ಸಿ ಶ್ರೀಮಂತನ ಮಗಳು. ಅವಳ ತಂದೆಯು ಸಕುಟುಂಬನಾಗಿ ಪರ್ಸಿಯಾ ದೇಶವನ್ನು ಬಿಟ್ಟು ಉದ್ಯೋಗಾನ್ವೇಷಣೆಯಿಂದ ಢಿಲ್ಲಿಗೆ ಬರುತ್ತಿದ್ದಾಗ ದಾರಿಯಲ್ಲಿ ನೂರ್‌ಜಹಾನಳು ಜನಿಸಿದಳು. ಅವಳ ತಂದೆಗೆ ಅಕ್ಬರನ ಆಸ್ಥಾನದಲ್ಲಿ ಒಂದು ಹುದ್ದೆಯು ದೊರಕಿತು. ನೂರ್‌ಜಹಾನಳು ಆಸ್ಥಾನದಲ್ಲೇ ಬೆಳೆದು ದೊಡ್ಡವಳಾದಳು. ಆಗ ಯುವರಾಜನಾಗಿದ್ದ ಸಲೀಮನಿಗೆ ಅವಳ ಮೇಲೆ ಪ್ರೀತಿಯು ಉತ್ಪನ್ನವಾಗಿರಬೇಕು. ನೂರ್‌ಜಹಾನಳು ಪ್ರಾಯಸಮರ್ಥಳಾದೊಡನೆ ಷೇರ್ ಅಫ್ಘಾನನೆಂಬ ಸರದಾರನನ್ನು ಮದುವೆಯಾದಳು. ಷೇರ್ ಅಫ್ಘಾನನು ಬರ್ದ್ವಾನಿನ ಜಹಗೀರದಾರನಾಗಿ ಹೆಂಡತಿಯೊಡನೆ ಅಲ್ಲಿಗೆ ತೆರಳಿದನು. ಅಲ್ಲಿ ಅವರಿಗೆ ಒಂದು ಹೆಣ್ಣು ಕೂಸು ಹುಟ್ಟಿತು. ಜಹಾಂಗೀರನು ರಾಜನಾಗಿದ್ದಾಗ ಷೇರ್ ಅಫ್ಘಾನನು ರಾಜದ್ರೋಹದ ಆರೋಪದ ಮೇಲೆ ಕೊಲ್ಲಲ್ಪಟ್ಟನು. ಆ ಮೇಲೆ ನೂರ್‌ಜಹಾನಳನ್ನು ಜಹಾಂಗೀರನು ತನ್ನ ಆಸ್ಥಾನಕ್ಕೆ ತರಿಸಿ 1611ರಲ್ಲಿ ಅವಳನ್ನು ಮದುವೆಯಾದನು.



ನೂರ್‌ಜಹಾನ
(Courtesy-Trustees of the Victoria Memorial Section, Indian Museum)

ಅಂದಿನಿಂದ ನೂರ್‌ಜಹಾನಳೇ ರಾಜ್ಯಸೂತ್ರಗಳನ್ನು ತನ್ನ ಕೈಯಲ್ಲಿ ರಿಸಿಕೊಂಡು ತನ್ನ ತಮ್ಮನಾದ ಅಸಫ್ ಖಾನನನ್ನು ಮುಖ್ಯ ಮಂತ್ರಿಯಾಗಿ ಮಾಡಿದಳು. ಅವರಿಬ್ಬರೂ ಪ್ರಜೆಗಳನ್ನು ಚೆನ್ನಾಗಿ ಆಳಿದರು. ಜಹಾಂಗೀರನ ಕಾಲದಲ್ಲಿ, ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಹಿಂದುಸ್ಥಾನದಲ್ಲಿ ವ್ಯಾಪಾರ ಮಾಡಲು ಅನುಮತಿಯನ್ನೀಯಬೇಕೆಂದು ಬಿನ್ನವಿಸಲು ಇಂಗ್ಲೆಂಡಿನ ಅರಸನಾದ ಮೊದಲನೆಯ ಜೇಮ್ಸನ ರಾಯಭಾರಿಯಾದ ಸರ್ ಥೊಮಸ್ ರೋ ಎಂಬವನು ಬಂದಿದ್ದನು. ಅವನು ಮೂರು ವರ್ಷ ಹಿಂದುಸ್ಥಾನದಲ್ಲಿದ್ದು (1615-18) ತಾನು ನೋಡಿದ ವಿಷಯಗಳೆಲ್ಲವನ್ನೂ ಬರೆದಿಟ್ಟನು. ಈಸ್ಟ್ ಇಂಡಿಯಾ ಕಂಪೆನಿಯವರು ಸೂರತ್ ಪಟ್ಟಣದಲ್ಲಿ ಒಂದು ಬಂಡಸಾಲೆಯನ್ನು ತೆರೆಯುವಂತೆ ಜಹಾಂಗೀರನು ಅನುಮತಿಯನ್ನಿತ್ತನು.

ಇಂಗ್ಲಿಷರ ಆಗಮನ

ಜಹಾಂಗೀರನ ಆಳ್ವಿಕೆಯ ಕೊನೆಗಾಲದಲ್ಲಿ ಮುಂದಣ ಪಟ್ಟಕ್ಕಾಗಿ ಗೊಂದಲವೆದ್ದಿತು. ಜಹಾಂಗೀರನ ಮಕ್ಕಳಲ್ಲಿ ಒಬ್ಬನಾದ ಖುರ್ರಮನು ಅಸಫ್ ಖಾನನ ಮಗಳಾದ ಮುಮ್ತಾಜ್ ಮಹಲಳನ್ನು ಮದುವೆಯಾಗಿದ್ದನು. ಅವನೇ ಅರಸನಾಗುವನೆಂದು ಎಲ್ಲರೂ ತಿಳಿದಿದ್ದರು. ಆದರೆ ನೂರ್‌ಜಹಾನಳು ಜಹಾಂಗೀರನ ಕಿರಿಯ ಮಗನಾದ ಶಹರಿಯಾರನಿಗೆ ತನ್ನ ಮಗಳನ್ನು ಮದುವೆಮಾಡಿಸಿ ಅವನನ್ನು ಪಟ್ಟಕ್ಕೇರಿಸಬೇಕೆಂದು ಪ್ರಯತ್ನಿಸಿದಳು. ಆದರೆ ಮಹಾಬತ್ ಖಾನನೆಂಬ ಪ್ರಮುಖ ಸೇನಾನಿಯು ಖುರ್ರಮನ ಪಕ್ಷವನ್ನು ಸೇರಿಕೊಂಡುದರಿಂದ ನೂರ್‌ಜಹಾನಳ ಪ್ರಯತ್ನಗಳು ವ್ಯರ್ಥವಾದುವು 1627ರಲ್ಲಿ ಜಹಾಂಗೀರನು ಸತ್ತೊಡನೆ ಖುರ್ರಮನು ನೂರ್‌ಜಹಾನಳನ್ನು ಸೆರೆಯಲ್ಲಿರಿಸಿ, ಷಾಜಹಾನ್ ಎಂಬ ಬಿರುದಿನಿಂದ ಸಿಂಹಾಸನವನ್ನೇರಿದನು.

ಷಾಜಹಾನನು ಪಟ್ಟವೇರಿದುದು.

ಷಾಜಹಾನನು ಮೂವತ್ತೊಂದು ವರ್ಷ ರಾಜ್ಯಭಾರವನ್ನು ಮಾಡಿದನು. ಆಗ ಆತನ ಸಾಮ್ರಾಜ್ಯವು ಅತ್ಯಂತ ವೈಭವದಿಂದ ಮೆರೆಯುತ್ತಿದ್ದಿತು. ಯುದ್ಧಗಳು ಕಡಿಮೆಯಾಗಿದ್ದುವು. ಆ ಕಾಲದಲ್ಲಿ ಅಹಮದ ನಗರವನ್ನು ಮೊಗಲರು ಪುನಃ ಜಯಿಸಿಕೊಂಡುದಲ್ಲದೆ, ವಿಜಾಪುರ ಮತ್ತು ಗೊಲ್ಕೊಂಡದ ಸುಲ್ತಾನರೂ ಷಾಜಹಾನನಿಗೆ ಸಾಮಂತರಾಗಲು

ಒಪ್ಪಿಕೊಂಡರು. ತೆರಿಗೆಗಳು ಕ್ರಮಪ್ರಕಾರವಾಗಿ ವಸೂಲಾಗುವ
ಮಂತ್ರಿಗಳು ಜಾಗರೂಕರಾಗಿದ್ದರು. ಹೀಗಾಗಿ ಅರಸನು ಹೇರಳ ಹ
ವನ್ನು ವ್ಯಯಿಸಿ ಅದ್ಭುತವಾದ ಕಟ್ಟಡಗಳನ್ನು ಕಟ್ಟಿ
ದನು. ಷಾಜಹಾನನು ಆಗ್ರಾ ಪಟ್ಟಣದಲ್ಲಿ
ಕಟ್ಟೆಯನ್ನು ಕಟ್ಟಿಸಿದುದಲ್ಲದೆ ಅಲ್ಲಿಯೇ ಮೋ

ಷಾಜಹಾನ 1627-58

ಮಸೀದಿಯನ್ನು, ತನ್ನ ಹೆಂಡತಿಯನ್ನು ಸಮಾಧಿ ಮಾಡಿದ ಸ್ಥಳದಲ್ಲಿ
ತಾಜಮಹಾಲೆಂಬ ಜಗತ್ಪ್ರಸಿದ್ಧವಾದ ಮಂದಿರವನ್ನೂ ಕಟ್ಟಿಸಿದನು



ಮೋತಿ ಮಸೀದಿ
(Courtesy Johnston and Hoffmann, Ltd.)

ದಿಲ್ಲಿಯಲ್ಲಿ ಅತಿ ಸುಂದರವಾದ ಜುಮ್ಮಾ ಮಸೀದಿಯನ್ನು, ತನ್ನರಮ
ನೆಯಲ್ಲಿ ದಿವಾನಿಖಾಸ್ ಮತ್ತು ದಿವಾನಿಆಮ್ ಎಂಬ ದರಬಾರ ಮಂದಿ
ಗಳನ್ನು ಕಟ್ಟಿಸಿದನು. ಅವನು ಎಲ್ಲಕ್ಕಿಂತಲೂ ದುಬಾರಿಯಾಗಿ ಹೇರ
ಹಣವನ್ನು ಖರ್ಚುಮಾಡಿ ಮಯೂರ ಸಿಂಹಾಸನವನ್ನು ಕಟ್ಟಿಸಿದನು
ಇಷ್ಟು ಸುಂದರವಾದ ಕಟ್ಟಡಗಳನ್ನು ಇನ್ನಾವ ಅರಸನೂ ಹಿಂದುಸ್ಥಾನದ
ಕಟ್ಟಿಸಿರಲಿಲ್ಲ.

ಷಾಜಹಾನನ ಅಂತ್ಯಕಾಲದಲ್ಲಿ ಅವನ ಮಕ್ಕಳಾದ ದಾರ
ಶುಜಾ, ಔರಂಗಜೇಬ ಮತ್ತು ಮುರಾದ ಇವರೊಳಗೆ ಪಟ್ಟಕ್ಕಾ
ಜಗಳವೆದ್ದಿತು. ದಾರನು ಆಸ್ಥಾನದಲ್ಲಿಯೇ
ಇದ್ದನು. ಶುಜನು ಬಂಗಾಳದಲ್ಲಿಯೂ, ಅವರ

ಪಟ್ಟಕ್ಕಾಗಿ ಕಲಹ.

ಜೇಬನು ದಕ್ಷಿಣದಲ್ಲಿಯೂ, ಮುರಾದನು ಗುಜರಾಥದಲ್ಲಿಯೂ ಸು
ದಾರರಾಗಿದ್ದರು. 1657ರಲ್ಲಿ ಷಾಜಹಾನನು ಅಸ್ವಸ್ಥನಾಗಿರುವನೆಂ

ನಾರ್ಲನೆಯ ಹಬ್ಬಲು ಶೂಜನು ಪಟ್ಟಕ್ಕಾಗಿ ಢಿಲ್ಲಿಯ ಕಡೆಗೆ ದಂಡೆತ್ತಿ ಬಂದನು. ದಾರನ ಸೈನಿಕರು ಅವನ್ನು ಸೋಲಿಸಿ ಓಡಿಸಿದರು. ಅವ ರಂಗಜೇಬನು ಮುರಾದನೊಡನೆ ಸೇರಿ ದಂಡೆತ್ತಿ ಬಂದು ಸಮುಘರ ಬಂಬಲ್ಲಿ ದಾರನೊಡನೆ ಕಾದಾಡಿ ಸೋಲಿಸಿ ಓಡಿಸಿದನು. ಸ್ವಲ್ಪ ಸಮಯದಲ್ಲಿಯೇ ಅವರಂಗಜೇಬನ ಸೈನಿಕರು ದಾರನನ್ನು ಸೆರೆಹಿಡಿ ದರು. ಅವರಂಗಜೇಬನು ದಾರನನ್ನೂ, ಮುರಾದನನ್ನೂ ಕೊಲ್ಲಿಸಿ, ತಂದೆಯನ್ನು ತಳ್ಳಿಹಾಕಿ ತಾನೇ ಮೊಗಲ್ ಸಮ್ರಾಟನಾದನು. ಷಾಜ ಹಾನನು ಅರಮನೆಯಲ್ಲಿಯೇ ಇದ್ದು ಕ್ರಿ. ಶ. 1666ರಲ್ಲಿ ಕಾಲವಾದನು.

---

12. ಮೊಗಲ ಸಾಮ್ರಾಜ್ಯದ ಇಳಿಗಾಲ

ಅವರಂಗಜೇಬನು (1658-1707)-ಅವರಂಗಜೇಬನು ನಾಲ್ವ ತ್ತೊಂಬತ್ತು ವರ್ಷಕಾಲ ಹಿಂದೂದೇಶವನ್ನು ಆಳಿದನು. ಅವನ ಕಾಲದಲ್ಲಿ ಮೊಗಲ್ ಸಾಮ್ರಾಜ್ಯವು ಬಹಳವಾಗಿ ವಿಸ್ತರಿಸಿತು. ಬಂಗಾಳದ ಸುಭೇದಾರನಾಗಿದ್ದ ಮೀರ್ ಜುಮ್ಲನು (1661-63) ಅಸ್ಸಾಮನ್ನು ಗೆದ್ದುಕೊಂಡನು. ಮುಂದೆ ಅವರಂಗಜೇಬನು ಸ್ವತಃ ದಕ್ಷಿಣ ಹಿಂದೂದೇಶಕ್ಕೆ ಹೋಗಿ, ವಿಜಾಪುರ, ಗೋಲ್ಕೊಂಡದ ರಾಜರನ್ನು ಸೋಲಿಸಿ ಅವರ ರಾಜ್ಯಗಳನ್ನು ವಶಪಡಿಸಿಕೊಂಡು ಮೊಗಲ್ ಸಾಮ್ರಾಜ್ಯವನ್ನು ಕಾವೇರಿ ನದಿಯ ತನಕ ವಿಸ್ತರಿಸಿದನು. ಆದರೆ ರಾಜ್ಯದಲ್ಲೆಲ್ಲ ಗೊಂದಲಗಳುಂಟಾದುದರಿಂದ ಆತನಿಗೆ ಬಹಳ ತೊಂದರೆಗಿಟ್ಟಿತು.

ಸಾಮ್ರಾಜ್ಯ

ಅವರಂಗಜೇಬನ ಧೋರಣೆಯು ಅಕ್ಬರನ ಹಾಗಿರದೆ ಪೂರ್ಣಭಿನ್ನವಾಗಿದ್ದಿತು. ಹಿಂದೂಗಳಿಗೆ ರಾಜ್ಯದಲ್ಲಿ ಯಾವ ಹಕ್ಕು ಬಾಧ್ಯತೆಗಳನ್ನು ಕೊಡುವುದು ಸರಿತೋರದೆ, ಆತನು ಪಟ್ಟಕ್ಕೆ ಬಂದ ಕೆಲಸಮಯದಲ್ಲಿಯೇ ಹಿಂದೂಗಳ ವಿರೋಧವಾಗಿ ಎಷ್ಟೋ ಕೆಲಸಗಳನ್ನು ಮಾಡಿದನು. ಅಕ್ಬರನು ತೆಗೆದುಹಾಕಿದ ಜಿಜಿಯಾ ಕರಿಗೆಯನ್ನು ಅವನು 1679ರಲ್ಲಿ ಮರಳಿ ಹಿಂದೂಗಳ ಮೇಲೆ ಹೊರಿಸಿದುದು ಮಾತ್ರವಲ್ಲದೆ ತನ

ಅವನ ಧೋರಣೆ

ಸಾಮ್ರಾಜ್ಯದ ಹಲವು ಪಟ್ಟಣಗಳಲ್ಲಿನ ಹಿಂದೂ ದೇವಾಲಯಗಳನ್ನು ಕೆಡವಿ ಮಸೀದಿಗಳನ್ನು ನಿರ್ಮಿಸಿದನು. ಹಿಂದೂಗಳನೇಕರನ್ನು ರಾಜ ಕಾರ್ಯದಿಂದ ನಿವೃತ್ತಿಗೊಳಿಸಿ ಅವರ ಸ್ಥಾನಗಳಲ್ಲಿ ಮುಸಲ್ಮಾನರನ್ನು ನೇಮಿಸಿದನು. ಮೊಗಲ ರಾಜ್ಯಕ್ಕೆ ಆಧಾರಸ್ತಂಭ ಗಳಂತಿದ್ದ ರಜಪೂತರೊ ಡನೆ ಹಗೆತನವನ್ನು ಕಟ್ಟಿ ಕೊಂಡನು. ಜೋಧ ಪುರದಂತಹ ರಾಜ್ಯಗ ಳನ್ನು ತನ್ನದಾಗಿ ಮಾಡಿ ಕೊಳ್ಳಲು ಪ್ರಯತ್ನಿಸಿ ದನು. ಔರಂಗ ಜೇಬನ ಈ ರೀತಿಯ ಸಂಕುಚಿತ ಧೋರಣೆ ಯು ದೇಶದಲ್ಲೆಲ್ಲ ಗೊಂ ದಲವನ್ನೆಬ್ಬಿಸಿಬಿಟ್ಟಿತು. ರಜಪೂತರು ಮೊಗಲ ರನ್ನು ವಿರೋಧಿಸಿ ಅಲ್ಲ ಲ್ಲಿ ದಂಗೆಗಳನ್ನುಂಟು ಮಾಡಿದರು. ಇದರಿಂದ ಮೊಗಲರು ತೊಂದರೆಗೀಡಾದರು.



ಔರಂಗಜೇಬನು

ಸಿಕ್ಕರ ಪ್ರಾಬಲ್ಯ:—ಆಗಲೇ ಪಂಜಾಬದಲ್ಲಿ ನವೀನ ಜನಾಂಗ ವೊಂದು ತಲೆದೋರಿ ಮೊಗಲ ರಾಜ್ಯದಲ್ಲಿ ನೆಮ್ಮದಿ ಭಂಗವಾಗಿತು

ಸಿಕ್ಕರು

ಪಂಜಾಬದಲ್ಲಿ ಅನೇಕರು ಸಿಕ್ಕ ಮತದವ ಗಿದ್ದರು. ಈ ಮತವನ್ನು ಗುರು ನಾನಕನೆಂಬವನು (1469-1539) ಸ್ಥಾಪಿಸಿದ್ದನು. ನಾನಕನು ಬಾಬರನ ಸಮಕಾಲೀನನು ಬಾಲ್ಯದಿಂದಲೇ ತನ್ನ ಭಾವನೆಗಳಲ್ಲಿ ನಾನಕನು ಹಿಂದೂ ಮತ ಇಸ್ಲಾಮ್ ಮತಗಳ ಉತ್ತಮ ತತ್ವಗಳನ್ನು ಪೋಣಿಸಿ ಬೋಧಿಸಲಾರಂ ಭಿಸಿದನು. ಜನರ ಅಂಧ ವಿಶ್ವಾಸಗಳನ್ನೂ, ಮೂಢ ಪದ್ಧತಿಗಳನ್ನೂ

ಮೂರ್ತಿ ಪೂಜೆಯನ್ನೂ, ಜಾತಿಭೇದಗಳನ್ನೂ ಖಂಡಿಸಿದನು. ಅನೇಕರು ವನ ಅನುಯಾಯಿಗಳಾದರು. ಅವರೇ ಸಿಕ್ಕರು. ನಾನಕನ ಮರಣಾ ಂತರ ಅವನ ಕೆಲಸವನ್ನು ಸಿಕ್ಕರ ಗುರುಗಳು ಪೂರೈಸಿದರು. ಸಿಕ್ಕ ನರಿಗೆ ಅವರ ಮೇಲೆ ತುಂಬಾ ಪ್ರೀತಿ, ಆದರ, ಗೌರವಗಳಿದ್ದುವು.

ಗುರು ಅರ್ಜುನ

ಸಿಕ್ಕರ ಗುರು ಅರ್ಜುನನೆಂಬವನು ಸಿಕ್ಕ ಮತವನ್ನು ಇನ್ನಷ್ಟು ಳಗಿಸಿದನು. ಹಿಂದಿನ ಗುರುಗಳು ಹಾಡುತ್ತಿದ್ದ ಹಾಡುಗಳನ್ನೆಲ್ಲ ಸಂಗ್ರಹಿಸಿ ಸಿಕ್ಕರ ಪವಿತ್ರ ಗ್ರಂಥವೊಂದನ್ನು ರಚಿಸಿದನು. ಅಮೃತಸರದಲ್ಲಿ ಒಂದು ದೇವಾಲಯವನ್ನು ಸ್ಥಾಪಿಸಿ ನು. ಅಲ್ಲಿ ಈಗಲೂ ಈ ಗ್ರಂಥದ ಪೂಜನೆಯು ನಡೆಯುತ್ತದೆ. ಗುರು ಅರ್ಜುನನು ದಂಗೆಗಾರರಿಗೆ ಒತ್ತಾಸೆಯನ್ನಿತ್ತನೆಂಬ ಆರೋಪದ ಮೇಲೆ, ಹಾಂಗೀರನು ಅವನನ್ನು ವಧಿಸಿದನು (1606).

ಸಿಕ್ಕರ ಯುದ್ಧ ಪ್ರಿಯತೆ

ಇದರಿಂದ ಸಿಕ್ಕರು ಕಣ್ದೆರೆದರು. ಅದುವರೆಗೆ ಅವರು ಬೇಸಾಯ ವನ್ನು ಮಾಡುತ್ತ ಶಾಂತಜೀವನವನ್ನು ಕೈಕೊಂಡಿದ್ದರು. ತಾವು ಶಸ್ತ್ರಹೀನರಾಗಿ ದುರ್ಬಲರಾಗಿರುವುದು ಅಪಾಯಕರವೂ ಲಜ್ಜಾಸ್ಪದವೂ ಎಂದು ಅವರು ತಿಳಿದುಕೊಂಡು ತಮ್ಮ ಗುರುಗಳ ಪ್ರೇರಣೆಯಿಂದ ಯುದ್ಧವಿದ್ಯೆಯಲ್ಲಿ ತರ ತಿಯನ್ನು ಹೊಂದಿ ಧೀರರೂ, ವೀರರೂ, ಒಕ್ಕಟ್ಟುಳ್ಳ ಯೋಧರೂ ಎಂದು ಖ್ಯಾತರಾದರು.

ತೇಜ ಬಹಾದೂರ.

ಅವರಂಗಜೇಬನು ಇತರ ಹಿಂದೂಗಳನ್ನು ತಿರಸ್ಕರಿಸುತ್ತಿದ್ದಂತೆ ಕ್ಕರನ್ನೂ ತಿರಸ್ಕರಿಸಿ, ಅವರ ಗುರುವಾದ ತೇಜಬಹಾದೂರನನ್ನು ಸೆರೆ ಹಿಡಿದು ಆತನನ್ನು ಕ್ರೂರವಾಗಿ ಕೊಲೆಮಾಡಿಸಿದನು (1675). ಆತನ ದೇಹವನ್ನು ಬಹಿರಂಗವಾಗಿರಿಸಿ, ರಾರಿಗೂ ಅದನ್ನು ಕೊಂಡೊಯ್ಯಲು ಬಿಡಲಿಲ್ಲ. ತೇಜಬಹಾದೂರನ ಗನಾದ ಗೋವಿಂದಸಿಂಹನು ತನ್ನ ತಂದೆಯ ದೇಹವನ್ನು ತರುವೆ ಮ ವೀರಾವೇಶದಿಂದ ಹೊರಟನು. ದಾರಿಯಲ್ಲಿ ಸಿಕ್ಕ ಒಕ್ಕಲಿಗರಾದ ಂಡೆ ಮಕ್ಕಳಿಬ್ಬರು ಆತನನ್ನು ಸಂಧಿಸಿ ತಾವು ಆ ದೇಹವನ್ನು ತರುವು ಾಗಿ ಗೋವಿಂದಸಿಂಹನಿಗೆ ಆಶ್ವಾಸನೆಯಿತ್ತು ಆತನನ್ನು ಮರಳಿ ಕಳು ಸಿದರು.

ಅವರಿಬ್ಬರೂ ವೇಷವನ್ನು ಪಲ್ಲಟಿಸಿ ರಾತ್ರಿಕಾಲದಲ್ಲಿ ಢಿಲ್ಲಿಯನ್ನು ಸೇರಿದರು. ತೇಜಬಹಾದೂರನ ದೇಹವನ್ನು ತೆಗೆದು ಮರೆಮಾಡಿ ಯಾರಿಗೂ ಅರಿಯದಂತೆ ಗಾಡಿಯಲ್ಲಿಟ್ಟರು. ಬೆಳಗ್ಗೆ ಗುರುವಿನ ದೇಹವು ಕಳವಾಗಿದೆಯೆಂದು ಗಲಭೆಯಾಗದಂತೆ ಅಲ್ಲೊಂದು ಶವವಿರಬೇಕಾದುದರಿಂದ ಮುದುಕನು ಆತ್ಮಹತ್ಯೆಯನ್ನು ಮಾಡಿಕೊಂಡನು. ತಂದೆಯ ಕಳೇಬರವನ್ನು ಮಗನು ಗುರುವಿನ ದೇಹವಿದ್ದ ಸ್ಥಳದಲ್ಲಿರಿಸಿ, ಗುರುವಿನ ದೇಹವನ್ನು ಹುಡುಗನು ಅಮೃತಸರಕ್ಕೆ ಕೊಂಡೊಯ್ದನು. ಇಂತಹ ಶೌರ್ಯಸಾಹಸಗಳಿಂದಲೇ ಸಿಕ್ಖ ಜನಾಂಗದ ಪುನರುತ್ಥಾನವಾಯಿತು.

ಗುರುವಿನ ವಧೆಯಿಂದ ಪಂಜಾಬದಲ್ಲಿ ಉತ್ಕ್ರಾಂತಿಯೆದ್ದಿತು. ಸಿಕ್ಖರು ಒಂದಾಗಿ ಗುರುಗೋವಿಂದನ (1675-1708) ಮುಂದಾಳುತನದಲ್ಲಿ ಹುರುಪಿನಿಂದ ಮೊಗಲರ ಮೇಲೆ ಬಿದ್ದು ಪಂಜಾಬಿನಲ್ಲಿ ಅವರ ಆಳ್ವಿಕೆಯನ್ನು ದುರ್ಬಲಗೊಳಿಸಿದರು. ಹೀಗೆಯೇ ಔರಂಗಜೇಬನ ಆಳ್ವಿಕೆಯ ಕಾಲದಲ್ಲೆಲ್ಲಾ ಸಿಕ್ಖರ ಪೀಡೆ ಇದ್ದೇ ಇದ್ದಿತು. ಗುರುಗೋವಿಂದನು ಸಾಯುವ ವರೆಗೆ (1708) ಅವನು ಮೊಗಲರ ಮೇಲಿನ ದ್ವೇಷವನ್ನು ಬಿಡಲಿಲ್ಲ. ಅವನ ತರುವಾಯವೂ ಸಿಕ್ಖರು ತಮ್ಮ ದ್ವೇಷವನ್ನು ಮರೆಯದೆ, ಮೊಗಲರ ಸೇಡನ್ನು ತೀರಿಸಲು ಹವಣಿಸಿದರು. ಗುರುಗೋವಿಂದನೇ ಸಿಕ್ಖರ ಕೊನೆಯ ಗುರುವು. ಆದರೆ ಅವರ ರಾಜಕೀಯ ಚಳವಳಿಯಲ್ಲಿ ಅವರಿಗೆ ಬಂದನೆಂಬ ಗೋವಿಂದಸಿಂಹನ ಶಿಷ್ಯನು ಮುಂದಾಳುತನವನ್ನು ವಹಿಸಿ ಮೊಗಲ ರಾಜ್ಯವನ್ನು ಹಾವಳಿ ಮಾಡುತ್ತ ಢಿಲ್ಲಿಯ ತನಕ ಸಿಕ್ಖರ ಸೈನ್ಯಗಳನ್ನು ಮುಂದುವರಿಸಿಕೊಂಡು ಹೋದನು. ಮೊಗಲರು ಸಿಕ್ಖರನ್ನು ಸೋಲಿಸಿ ಬಂದನನ್ನು ಅರಣ್ಯಕ್ಕೆ ಅಟ್ಟಿದರೂ, ಸಿಕ್ಖರ ವಿರೋಧವನ್ನೂ ಶೌರ್ಯಧೈರ್ಯಾದಿಗಳನ್ನೂ ಮೊಗಲರಿಂದ ಅಡಗಿಸಲಾಗಲಿಲ್ಲ.

ಸಿಕ್ಖರ ದಂಗೆ

ಮರಾಟರು:—ಅದೇ ರೀತಿ ದಕ್ಷಿಣದಲ್ಲಿ,—ಮಹಾರಾಷ್ಟ್ರವೆಂದು ಕರೆಯಲ್ಪಡುವ ಪೂನಾ, ಸತಾರಾ, ರತ್ನಗಿರಿ ಪ್ರದೇಶಗಳಲ್ಲಿ ವಾಸವಾಗಿದ್ದ ಮರಾಟರು ಮೊದಲು ಶಾಂತರೀತಿಯ ಜೀವನವನ್ನು ಮಾಡಿಕೊಂಡಿದ್ದರು. ಅವರಿಗೆ ದಕ್ಷಿಣದ ಸುಲ್ತಾನರ ತೊಂದರೆಯೇ ಇದ್ದಿರಲಿಲ್ಲ. ಅವರಿಗೆ ರಾಜ್ಯಾಡಳಿತದಲ್ಲೂ ಸೇನೆಯಲ್ಲೂ ಉಚ್ಚ ಪದವಿಗಳು

ಜಾಗ್ರತಿ

ಮೊರೆಯುತ್ತಿದ್ದುವು. ಮಹಾರಾಷ್ಟ್ರದಲ್ಲಿ ಆಗಾಗ ಹುಟ್ಟುತಲಿದ್ದ ಸಂತರು ತಮ್ಮ ಭಜನೆಗಳಿಂದ ಜನರಲ್ಲಿ ನವಜಾಗ್ರತಿಯನ್ನುಂಟು ಮಾಡಿ ಮರಾಟರಲ್ಲಿ ತಾವೆಲ್ಲರೂ ಒಂದೇ ಜನಾಂಗದವರು, ಒಂದೇ ತಾಯ್ಮಕ್ಕಳು, ಎಂಬ ಅಭಿಮಾನವನ್ನು ತುಂಬಿದರು. ಜಾಗ್ರತಿಗೊಂಡ ಮಹಾರಾಷ್ಟ್ರದಲ್ಲಿ ಮರಾಟರ ಹೊಸ ಜೀವಕಳೆಯು ಹೊರಹೊಮ್ಮತೊಡಗಿತು.

ಶಿವಾಜಿಯು 1627–1680

ಮಹಾರಾಷ್ಟ್ರದಲ್ಲಿ ಅನೇಕ ಸರದಾರರಿದ್ದರು. ಅವರಲ್ಲಿ ಹದಿನಾರನೆ ಶತಮಾನದ ಕೊನೆಯಲ್ಲಿ ಶಾಹಜಿ ಎಂಬವನು ಪ್ರಮುಖನಾಗಿದ್ದನು. ಶಾಹಜಿಯು ಮೊಗಲರ ವಿರುದ್ಧವಾಗಿ ಅಹಮದನಗರದ ಸುಲ್ತಾನನಿಗೆ ತುಂಬಾ ಸಹಾಯ ಮಾಡಿದ್ದನು. ಅಹಮದನಗರದ ರಾಜ್ಯವು ಅಳಿದಮೇಲೆ ಬಿಜಾಪುರದ ಸೇನೆಯನ್ನು ಸೇರಿಕೊಂಡನು. ಆತನ ಮಗನೇ ಶಿವಾಜಿಯು. ಶಿವಾಜಿಯು ತನ್ನ ತಾಯಿಯ ಪೋಷಣೆಯಲ್ಲಿ ಬೇಕಾದ ವಿದ್ಯೆಯನ್ನು ಪಡೆದು ಬಳೆದನು. ಮಹಾರಾಷ್ಟ್ರವನ್ನು ಸ್ವತಂತ್ರನಾಗಿ ಮಾಡಿ ಮುಸಲ್ಮಾನರ ಹಾವಳಿಗೀಡಾದ ಹಿಂದೂಧರ್ಮವನ್ನು ಪಾಲಿಸಬೇಕು ಎಂದು ಮುಂತಾದ ಮಹತ್ವದ ಆಲೋಚನೆಗಳು ಚಿಕ್ಕಂದಿನಲ್ಲಿಯೇ ಆತನಲ್ಲಿ ಅಂಕುರಿಸುತ್ತಿದ್ದುವು. ಪ್ರಾಯಸಮರ್ಥನಾದೊಡನೆ ಶಿವಾಜಿಯು ಮೆಲ್ಲಮೆಲ್ಲನೆ ಕೆಲವು ಗಟ್ಟಿಮುಟ್ಟಾದ ಜನರನ್ನು ಸೇರಿಸಿಕೊಂಡು ಪೂನೆಯ ಸುತ್ತಲಿನ ಹಳ್ಳಿಗಳನ್ನು ವಶಪಡಿಸಿಕೊಂಡನು. ದಿನೇದಿನೆ ಅವನ ಪಂಗಡವು ಬೆಳೆಯಿತು. ಶಿವಾಜಿಯೇ ತಮ್ಮ ರಕ್ಷಕನು, ದೇವತಾಪುರುಷನು ಎಂದೆನ್ನುತ್ತ ಮಹಾರಾಷ್ಟ್ರದ ಜನರು ಆತನಿಗೆ ಬೆಂಬಲವೀಯತೊಡಗಿದರು. ಇದರಿಂದ ಧೈರ್ಯಗೊಂಡ ಶಿವಾಜಿಯು ಒಂದೊಂದೇ ಕೋಟೆಯನ್ನು ವಶಪಡಿಸಿಕೊಂಡನು. ವಿಜಾಪುರ ಸುಲ್ತಾನನಿಗೆ ಪಾವತಿಯಾಗುವಂತಹ ಪೊಗದಿಯನ್ನು ಅಕಸ್ಮಾತ್ ನಡು ಹಾದಿಯಲ್ಲಿ ಸ್ವಾಧೀನಪಡಿಸಿಕೊಳ್ಳುತ್ತಿದ್ದನು. ಹೀಗಾಗಿ ಮೆಲ್ಲಮೆಲ್ಲನೆ ಶಿವಾಜಿಯು ಕೊಂಕಣ ಪ್ರದೇಶಕ್ಕೆಲ್ಲ ಅಧಿಪತಿಯಾದನು.

ಮಹಾರಾಷ್ಟ್ರದಲ್ಲಿ ಶಿವಾಜಿಯ ಅಧಿಕಾರವು ಬೆಳೆದುದು ವಿಜಾಪುರದ ಸುಲ್ತಾನನಿಗೆ ಸರಿತೋರಲಿಲ್ಲ. ಶಿವಾಜಿಯನ್ನು ಮುರಿಯಲು

ಅವನು ಅಫಜುಲ್ ಖಾನನೆಂಬ ದಳವಾಯಿಯ ಕೈಯಲ್ಲಿ ಸೈನ್ಯವನ್ನು ಕೊಟ್ಟು ಕಳುಹಿಸಿದನು. ಆದರೆ ಶಿವಾಜಿಯು ಅಫಜುಲ್ ಖಾನನನ್ನು ಕೊಂದು ಅವನ ಸೈನ್ಯವನ್ನೋಡಿಸಿದನು. ಇದರಿಂದ ಶಿವಾಜಿಯ ಸಾಮರ್ಥ್ಯವೆಷ್ಟಿದೆಯೆಂದು ಎಲ್ಲರಿಗೂ ಪ್ರಕಟವಾಯಿತು. ಬಿಜಾಪುರದ ಸುಲ್ತಾನನೂ ಅವನೊಡನೆ ಒಪ್ಪಂದಮಾಡಿ ಅವನು ಗೆದ್ದುಕೊಂಡ ಪ್ರದೇಶಗಳನ್ನು ಅವನಿಗೇ ಬಿಟ್ಟುಕೊಟ್ಟನು.

ಬಿಜಾಪುರ ಯುದ್ಧ
1659



ಶಿವಾಜಿ
(Courtesy: Trustees of the Victoria Memorial Section, Indian Museum)

ಅಷ್ಟರಲ್ಲಿ ಅವರಂಗಜೇಬನು ಢಿಲ್ಲಿಯ ಅರಸನಾಗಿದ್ದನು. ಶಿವಾಜಿಯು ವಿಜಾಪುರದ ರಾಜ್ಯದಲ್ಲಿ ಮಾತ್ರವಲ್ಲದೆ ತನ್ನ ರಾಜ್ಯದಲ್ಲಿಯೂ ಹಾವಳಿಯನ್ನುಂಟುಮಾಡುವನೆಂಬುದನ್ನು ತಿಳಿದುಕೊಂಡ ಅವರಂಗಜೇಬನು 1660ರಲ್ಲಿ ಶೇಸ್ತಾಖಾನನೆಂಬವನೊಡನೆ ಒಂದು ಸೈನ್ಯವನ್ನು ಕೊಟ್ಟು ಶಿವಾಜಿಯನ್ನು ಮುರಿಯಲು ಕಳುಹಿಸಿದನು. ಆದರೆ ಪೂನೆಯಲ್ಲಿ ಶಿವಾಜಿಯು ರಾತ್ರಿಕಾಲದಲ್ಲಿ ಖಾನನ ಪಾಳ್ಯದ ಮೇಲೆ ಅಕಸ್ಮಾತ್ತಾಗಿ ಬಿದ್ದು ಅನೇಕರನ್ನು ಕೊಂದು ಮೊಗಲರಿಗೆ ಗಾಬರಿಯನ್ನು ಹುಟ್ಟಿಸಿಬಿಟ್ಟನು. ಶೇಸ್ತಾಖಾನನು ಢಿಲ್ಲಿಗೆ ಮರಳಿ ಬಂಗಾಳದ ಸುಭೇದಾರನಾಗಿ ತೆರಳಿದನು. ಆ ಮೇಲೆ ಅವರಂಗಜೇಬನು ಶಿವಾಜಿಯೊಡನೆ ಕಾದಾಡಲು ಜಯಪುರದ ರಾಜನಾದ ಜಯಸಿಂಗನನ್ನು ಕಳುಹಿಸಿದನು. ಅವನು ಜಾಣತನದಿಂದ ಶಿವಾಜಿಯೊಡನೆ ಮೈತ್ರಿಯನ್ನು ಬೆಳೆಸಿ ಒಪ್ಪಂದದ ಸಲುವಾಗಿ ಶಿವಾಜಿಯು ಅವರಂಗಜೇಬನ ಆಸ್ಥಾನಕ್ಕೆ ಹೋಗುವಂತೆ ಮಾಡಿದನು. ಅಲ್ಲಿ ಅವರಂಗಜೇಬನಾದರೋ ಶಿವಾಜಿಯನ್ನು ತಾತ್ಸಾರದಿಂದ ಕಂಡು ಅವನನ್ನು ಸೆರೆಯಲ್ಲಿರಿಸಿದನು. ಶಿವಾಜಿಯು ಯಾರಿಗೂ ತಿಳಿಯದಂತೆ ಸೆರೆಯಿಂದ ತಪ್ಪಿಸಿಕೊಂಡು (1666), ಅಲ್ಲಿಂದ ಓಡಿಹೋಗಿ ತನ್ನ ಮುಖ್ಯ ಕೋಟೆಯಾದ ರಾಯಗಡವನ್ನು ಸೇರಿಕೊಂಡನು. ಮಹಾರಾಷ್ಟ್ರದ ಜನರೆಲ್ಲರೂ ಅವನಿಗೆ ಬೆಂಬಲವನ್ನಿತ್ತರು. ಅದುಕಾರಣ ಶಿವಾಜಿಯು ಮೊಗಲ ರಾಜ್ಯದೊಳಗೆ ನುಗ್ಗಿ ಜನರಿಂದ ಚೌತ್ ಎಂದರೆ ಆದಾಯದ ನಾಲ್ಕನೇ ಒಂದಂಶವನ್ನು ಪಡೆದುಕೊಳ್ಳತೊಡಗಿದನು. 1674ರಲ್ಲಿ ಛತ್ರಪತಿಯೆಂಬ ಬಿರುದಿನಿಂದ ಅವನ ಪಟ್ಟಾಭಿಷೇಕವು ಶಾಸ್ತ್ರೋಕ್ತವಾಗಿ ನಡೆದು ಶಿವಾಜಿಯು ಮಹಾರಾಷ್ಟ್ರದ ಅರಸನಾದನು.

ಅವರಂಗಜೇಬನೂ ಶಿವಾಜಿಯೂ

ಶಿವಾಜಿಯು ಆರು ವರ್ಷ ಕಾಲ ರಾಜ್ಯವಾಳಿದನು. ಶಿವಾಜಿಗೆ ತನ್ನ ಪ್ರಜೆಗಳ ಮೇಲೂ ಪ್ರಜೆಗಳಿಗೆ ಅರಸನ ಮೇಲೂ ವಿಶೇಷ ಪ್ರೀತಿಯಿದ್ದಿತು. ಮೊಗಲ ಸಾಮ್ರಾಜ್ಯವು ಕಳೆಗುಂದುವ ಕಾಲದಲ್ಲಿ ಶಿವಾಜಿಯು ಮಹಾರಾಷ್ಟ್ರವೆಂಬ ಸಾಮ್ರಾಜ್ಯದ ಉದಯಕ್ಕೆ ಕಾರಣನಾದನು. ಮಹಾರಾಷ್ಟ್ರದ ಜನರೊಳಗೆ ಸಾಮ್ರಾಜ್ಯಾಪೇಕ್ಷೆಯನ್ನು ಹುಟ್ಟಿಸಿ, ಅವರಲ್ಲಿ ಜಾಗ್ರತಿಯನ್ನುಂಟು

ಶಿವಾಜಿಯ ಖ್ಯಾತಿ

ಮಾಡಿ, ಹೊಸ ಸಾಮ್ರಾಜ್ಯವನ್ನೇ ಸ್ಥಾಪಿಸಿ, ವಿಧರ್ಮೀಯರ ಕೈಯಿಂದ ಹಿಂದೂಧರ್ಮವನ್ನು ಉಳಿಸಿದ ಶಿವಾಜಿಯ ಮೇಲೆ ಇಂದಿಗೂ ಕೂಡ ಭಾರತೀಯರೆಲ್ಲರಿಗೆ ಗೌರವಾದರಗಳಿರುವುದು ವಿಶೇಷವಲ್ಲ.

ದಕ್ಷಿಣದಲ್ಲಿ ಯುದ್ಧಗಳು

ಶಿವಾಜಿಯ ಮರಣಾನಂತರ, ಮಹಾರಾಷ್ಟ್ರದ ಖ್ಯಾತಿಯನ್ನಳಿಸಿ ಬಿಡಬೇಕೆಂದೂ, ವಿಜಾಪುರ ಗೋಲ್ಕೊಂಡಗಳನ್ನು ಜಯಿಸಬೇಕೆಂದೂ ಅವರಂಗಜೇಬನು ದಕ್ಷಿಣಕ್ಕೆ ಬಂದು ಅಲ್ಲಿಯೇ ತಳ ವೂರಿದನು. ಮಹಾಸೇನೆಯೊಂದಿಗೆ ಅವರಂಗಜೇಬನು ಮಹಾರಾಷ್ಟ್ರಕ್ಕೆ ನುಗ್ಗಿ ಶಿವಾಜಿಯ ಮಗನಾದ ಶಂಭೂಜಿಯನ್ನೂ ಅವನ ಕುಟುಂಬವನ್ನೂ ಸೆರೆಹಿಡಿದು 1686-87ರಲ್ಲಿ ವಿಜಾಪುರ, ಗೋಲ್ಕೊಂಡವನ್ನು ಜಯಿಸಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿ ಬಿಟ್ಟನು. ಆದರೆ ಮಹಾರಾಷ್ಟ್ರದ ತೊಂದರೆಗಳು ಇದರಿಂದ ಮುಗಿಯ ಲಿಲ್ಲ. ಶಿವಾಜಿಯ ಎರಡನೆಯ ಮಗನಾದ ರಾಜಾರಾಮನು, ಒಂದಲ್ಲ ಒಂದು ಕಡೆಯಿಂದ ಬಂದು ಮೊಗಲ ಸೈನ್ಯಗಳನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದನು. ಮರಾಟರು ಮೊಗಲರನ್ನು ಇದಿರಿಸಿ ಯುದ್ಧಮಾಡದೆ ಅವರು ಸಿದ್ಧರಿಲ್ಲದ ವೇಳೆಯಲ್ಲಿ ಅವರ ಮೇಲೆ ಫಕ್ಕನೆಬಿದ್ದು ಹಾವಳಿಮಾಡಿ ಬೆಟ್ಟ ಪ್ರದೇಶಗಳಿಗೆ ಓಡಿಹೋಗುತ್ತಿದ್ದರು. ಮಹಾರಾಷ್ಟ್ರವನ್ನು ಜಯಿಸಿಕೊಂಡಿದ್ದರೂ ಕೂಡ, ಅವರಂಗಜೇಬನಿಂದ ಮರಾಟರನ್ನು ಕುಗ್ಗಿಸಿ ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ರಾಜಾರಾಮನ ತರುವಾಯ ಅವನ ಪತ್ನಿಯಾದ ತಾರಾಬಾಯಿಯು ಇದೇ ಪ್ರಕಾರ ಮೊಗಲ ಸೈನ್ಯಕ್ಕೆ ಪೀಡೆಕೊಡುತ್ತಲಿದ್ದಳು. ಇದರಿಂದಾಗಿ ಸುಮಾರು ಇಪ್ಪತ್ತಾರು ವರ್ಷಗಳ ತನಕ ಅವರಂಗಜೇಬನು ದಕ್ಷಿಣದಲ್ಲಿಯೇ ಇದ್ದು ಈ ಕಠಿಣ ವೈರಿಗಳನ್ನು ಸದೆಬಡಿಯುವ ಸಾಹಸಮಾಡಿದನು. ಅವನ ಧೈರ್ಯ, ಸ್ಥೈರ್ಯ, ಅವಿಶ್ರಾಂತ ಪರಿಶ್ರಮ, ಇವೆಲ್ಲವೂ ವ್ಯರ್ಥವಾದುವು. ಮೊಗಲ ಸೈನ್ಯವು ನಿರಾಶೆಗೊಂಡಿತು. ಸಾಮ್ರಾಜ್ಯವು ಶಿಥಿಲವಾಗುತ್ತ ಒಂದೊಂದೆ ಪ್ರಾಂತವು ಕೈತಪ್ಪಿ ಹೋಯಿತು. ಮುದುಕನಾದ ಅವರಂಗಜೇಬನು ಕಣ್ಣುಕಟ್ಟಿದವನಂತೆ ಏನು ಮಾಡಬೇಕೆಂದು ತಿಳಿಯದೆ ತಾನಾಗಿ ಎಬ್ಬಿಸಿಕೊಂಡ ಈ ಗೊಂದಲಗಳಿಗಾಗಿ ಕಳವಳಿಸುತ್ತ 1707ರಲ್ಲಿ ಅವರಂಗಾಬಾದಿನಲ್ಲಿ ಮೃತಿಯನ್ನೈದಿದನು. ಅವನ ತರುವಾಯ ಮೊಗಲ ಸಾಮ್ರಾಜ್ಯವು ಮೆಲ್ಲಮೆಲ್ಲನೆ ಬಲಹೀನವಾಗುತ್ತ ಬಂದು ಕುಸಿದುಹೋಯಿತು.

13. ಮರಾಟರ ಸಾಮ್ರಾಜ್ಯ

ಮೊಗಲ ಸಾಮ್ರಾಜ್ಯದಲ್ಲಿ ಅರಾಜಕತ್ವ

ಅವರಂಗಜೇಬನ ತರುವಾಯ ಶಕ್ತಿವಂತರಾದ ಅರಸರು ಪಟ್ಟಕ್ಕೆ ಬರಲಿಲ್ಲ. ಅವರೆಲ್ಲರೂ ಢಿಲ್ಲಿಯ ಶ್ರೀಮಂತರ ಅಂಕೆಯಲ್ಲಿದ್ದುದರಿಂದ ಅರಸರ ವರ್ಚಸ್ಸು ಇಳಿಯುತ್ತ ಬಂದಿತು. ಈ ಶ್ರೀಮಂತರಾದರೊ ತಮ್ಮತಮ್ಮೊಳಗೆ ಜಗಳ ಮಾಡುತ್ತ ತಮಗೆ ಮನಬಂದವರಿಗೆ ಪಟ್ಟಕಟ್ಟಲು ಹವಣಿಸುತ್ತಿದ್ದರು. ಹೀಗೆ 1707ರಿಂದ 1759ರ ವರೆಗೆ ಒಂಬತ್ತು ಮಂದಿ ಮೊಗಲ ರಾಜರಿದ್ದರು. ರಾಜ್ಯವು ಮಾತ್ರ ಅವರ ಕೈಕೆಳಗಿರಲಿಲ್ಲ. ಪಂಜಾಬಿನಲ್ಲಿ ಸಿಕ್ಕರು ಒಮ್ಮೆ ಮೊಗಲರಿಂದ ಸೋಲು ಹೊಂದಿದ್ದರೂ ಮೊಗಲರಿಗೆ ತಲೆಬಾಗದೆ ಸ್ವಾತಂತ್ರ್ಯಕ್ಕಾಗಿ ಹೆಣಗಾಡುತಲಿದ್ದರು. ಛಲವನ್ನು ತೊಟ್ಟ ರಜಪೂತರು ಮೊಗಲ ಅರಸರಿಗೆ ಸಹಾಯ ಮಾಡುವ ಬದಲು ತಟಸ್ಥರಾಗಿಯೆ ಇದ್ದು ಬಿಟ್ಟರು. ಬಂಗಾಳ ಮತ್ತು ಅಯೋಧ್ಯೆಗಳ ಸುಭೇದಾರರು ಮೊಗಲಸಿಂಹಾಸನಕ್ಕೆ ಪ್ರತಿ ವರ್ಷ ಕೊಡುತ್ತಲಿದ್ದ ಪೊಗದಿಯನ್ನು ನಿಲ್ಲಿಸಿಬಿಟ್ಟರು. ಅತ್ತ ದಕ್ಷಿಣದಲ್ಲಿ ಮರಾಟರ ಪ್ರಾಬಲ್ಯವು ಹೆಚ್ಚುತ್ತ ಬಂದಿತು. ಅವರಂಗಜೇಬನ ತರುವಾಯ ಪಟ್ಟಕ್ಕೆ ಬಂದ ಬಹಾದುರ್ ಶಾಹನೆಂಬ ಅರಸನು ಶಂಭೂಜಿಯ ಮಗನಾದ ಸಾಹುವನ್ನು ಬಿಡುಗಡೆ ಮಾಡಿ ಮಹಾರಾಷ್ಟ್ರಕ್ಕೆ ಕಳುಹಿಸಿದನು. ಒಡನೆಯೇ ಮರಾಟರು ಅವನನ್ನು ಅರಸನನ್ನಾಗಿ ಸ್ವೀಕರಿಸಿ ಮಹಾರಾಷ್ಟ್ರದ ಪಟ್ಟವನ್ನು ಕಟ್ಟಿದರು.

ಬಾಲಾಜಿ ವಿಶ್ವನಾಥ

ಪೇಶ್ವೆಯರು:—ಸಾಹುವು ಮೊಗಲರ ಆಸ್ಥಾನದಲ್ಲಿಯೇ ಬೆಳೆದಿದ್ದುದರಿಂದ ಮೊಗಲ ರಾಜಪುತ್ರರಂತೆ ವಿಲಾಸಿಯೂ ರಾಜ್ಯಭಾರಕ್ಕೆ ಅಸಮರ್ಥನೂ ಆಗಿದ್ದನು. ಇದರಿಂದ ರಾಜ್ಯಾಧಿಕಾರವು ಅರಸನ ಮುಖ್ಯ ಮಂತ್ರಿಯಾಗಿದ್ದ ಪೇಶ್ವೆಯ ಕೈ ಸೇರಿತು. ಸಾಹುವು ರಾಜ್ಯಕಾರ್ಯಗಳಲ್ಲಿ ಕೈಹಾಕದಿದ್ದುದೇ ಪೇಶ್ವೆಯರ ಅಧಿಕಾರ ಹೆಚ್ಚಲು ಕಾರಣವಾಯಿತು. 1714ರಿಂದ 1720ರ ವರೆಗೆ ಬಾಲಾಜಿ ವಿಶ್ವನಾಥನೆಂಬ ಪೇಶ್ವೆಯು ತನ್ನ ಅಧಿಕಾರವನ್ನು ಬೆಳೆಯಿಸಿ ಮಹಾರಾಷ್ಟ್ರದ ಶಕ್ತಿಯನ್ನು ಹೆಚ್ಚಿಸಿ ರಾಜ್ಯಾಡಳಿತೆಯನ್ನು ಚೆನ್ನಾಗಿ


ವ್ಯವಸ್ಥೆಗೊಳಿಸಿದನು. ಅಲ್ಲದೆ ಢಿಲ್ಲಿಯಲ್ಲಿದ್ದ ಎರಡು ಪಂಗಡಗಳಲ್ಲಿ ಒಂದಕ್ಕೆ ಸಹಾಯವಿತ್ತು ಮಹಾರಾಷ್ಟ್ರದ ವರ್ಚಸ್ಸನ್ನು ಬೆಳೆಯಿಸಿದನು.

ಬಾಜೀರಾಯನ ವಿಜಯ: ಢಿಲ್ಲಿಯ ದುರ್ದಶೆ

1720ರಲ್ಲಿ ಬಾಲಾಜಿ ವಿಶ್ವನಾಥನ ಮಗನಾದ ಬಾಜೀರಾಯನು ಪೇಶ್ವೆಯಾದನು. ಅವನ ಕಾಲದಲ್ಲಿಯೇ ಮರಾಟರ ಅಭ್ಯುದಯವಾಗಿ ರಾಜ್ಯವು ಸಾಮ್ರಾಜ್ಯವೆನಿಸಿತು. ಮರಾಟರಿಗೆ ಆಗಾಗ ತೊಂದರೆಕೊಡುತಿದ್ದ ಹೈದರಾಬಾದಿನ ನಿಜಾಮು ಆಸಫ್ ಜಾಹನನ್ನು ಬಾಜೀರಾಯನು ಸೋಲಿಸಿದುದಲ್ಲದೆ ಮೊಗಲ ಸಾಮ್ರಾಜ್ಯದಿಂದ ಮಾಳವ, ಗುಜರಾಥ ಮತ್ತು ಬುಂದೇಲ್ ಖಂಡ ಇವನ್ನು ಕಿತ್ತುಕೊಂಡನು. ಮರಾಟರು ಢಿಲ್ಲಿಯ ತನಕ ತಮ್ಮ ಸೇನೆಗಳೊಂದಿಗೆ ಮುನ್ನಡೆದು, ತಮ್ಮ ಶಕ್ತಿಯನ್ನು ಪ್ರದರ್ಶಿಸಿ, ಕೀರ್ತಿಯನ್ನು ಹೆಚ್ಚಿಸಿದರು. 1739ರಲ್ಲಿ ಢಿಲ್ಲಿಯು ಹೊಸತೊಂದು ಗಂಡಾಂತರಕ್ಕೀಡಾಯಿತು. ಪರ್ಷಿಯಾ ದೇಶದ ಅರಸನಾದ ನಾದಿರ್ ಷಹನು ದಂಡೆತ್ತಿ ಬಂದು, ಹಿಂದೂದೇಶವನ್ನು ನುಗ್ಗಿ, ಢಿಲ್ಲಿಯನ್ನು ವಶಪಡಿಸಿ, ಅನೇಕರನ್ನು ಕೊಂದು, ಕೈಗೆ ಸಿಕ್ಕಿದ ದ್ರವ್ಯವನ್ನೆಲ್ಲಾ ದೋಚಿಕೊಂಡು, ಅರಮನೆಯನ್ನು ಸುಲಿದು, ಮಯೂರ ಸಿಂಹಾಸನವನ್ನು ಸ್ವಾಧೀನಪಡಿಸಿಕೊಂಡು ಪರ್ಷಿಯಕ್ಕೆ ಮರಳಿದನು. ಅಲ್ಲಿಂದ ಮೇಲೆ ಮೊಗಲ ಅರಸರಿಗಿದ್ದ ಕಿಂಚಿತ್ ಅಧಿಕಾರವೂ ಗೌರವವೂ ನಾಶವಾದುವು.

ಸಾಮ್ರಾಜ್ಯವು

ಬಾಜೀರಾಯನು ಮರಾಟರಿಗೆ ದೊರೆತ ದಕ್ಷಿಣದ ರಾಜ್ಯಗಳನ್ನು ಸುವ್ಯವಸ್ಥೆಗೆ ತರುವುದಕ್ಕಾಗಿ ಮರಾಟರ ಸಂಯುಕ್ತ ರಾಜ್ಯ (confederacy)ವನ್ನು ಸ್ಥಾಪಿಸಿದನು. ಮೊಗಲ ಸಾಮ್ರಾಜ್ಯದಿಂದ ಕಿತ್ತುಕೊಂಡ ಗುಜರಾಥ, ಮಾಳವ ಮತ್ತು ಬುಂದೇಲ್ ಖಂಡ ಮೊದಲಾದ ಪ್ರದೇಶಗಳಲ್ಲಿ ಸಾಮಂತ ಅಧಿಕಾರಿಗಳನ್ನು ನೇಮಿಸಿದನು. ಬರೋಡದಲ್ಲಿ ಗಾಯಕವಾಡನೂ, ಇಂದೋರಿದಲ್ಲಿ ಹೋಳ್ಕರನೂ, ಗ್ವಾಲಿಯರದಲ್ಲಿ ಸಿಂಧ್ಯನೂ ನಾಗಪುರದ ಭೋನ್ಸ್ಲೆಯೂ, ಪೇಶ್ವೆಯೊಡನೆ ಸಹಕರಿಸಿ ಮಹಾರಾಷ್ಟ್ರವನ್ನು ವ್ಯವಸ್ಥೆಗೊಳಿಸಿದರು.


ಮರಾಟರ
ಸಾಮ್ರಾಜ್ಯ.
ಪೇಶಾವರ
ಲಾಹೋರ
ಪಾನಿಪತ್ತ
ಡಿಲ್ಲಿ
ರೋಹಿಲರು
ಸಿಂಧುನದಿ
ರಜಪುತರು
ಜಾಟರು
ಆಗ್ರಾ
ಅಯೋಧ್ಯೆ
ಲಕ್ನೊ
ಗ್ವಾಲಿಯರ
ಸಿಂಧಿಯ
ಪಾಟ್ನಾ
ಬಿರಾರ
ಸೂರತ
ಮುಂಬೈ
ಪೂನಾ
ಸತಾರ
ಹೈದರಾಬಾದ
ಗೋವೆ
ಮದರಾಸು
ಪುದುಚೇರಿ
ಮಂಗಳೂರು
ಕಲಿಕೋಟೆ
ತಿರುಚಿನಾಪಳ್ಳಿ
ಕೊಚ್ಚಿ

ಬಾಜಿರಾಯನ ತರುವಾಯ ಅವನ ಮಗನಾದ ಬಾಲಾಜಿ ಬಾಜಿ ರಾಯನು ಪೇಶ್ವೆಯಾದನು. ಅವನ ಕಾಲದಲ್ಲಿಯೇ ಮರಾಟ ಸಾಮ್ರಾಜ್ಯವು ಎಲ್ಲ ಕಡೆಗಳಲ್ಲಿಯೂ ವಿಸ್ತರಿಸಿತು. ಭೋಸ್ಲೆಯು ಒರಿಸ್ಸವನ್ನು ಗೆದ್ದು ಕೊಂಡನು. ದಕ್ಷಿಣದಲ್ಲಿ ಪೇಶ್ವೆಯು ಮೈಸೂರಿನಿಂದ ಚೌತ್ ಕಂದಾಯವನ್ನು ವಸೂಲುಮಾಡಿದನು. ಕೊನೆಗೆ ದೊಡ್ಡ ಮರಾಟ ಸೈನ್ಯವೊಂದು ಉತ್ತರಕ್ಕೆ ಹೋಗಿ ಚಂಬಲ್ ನದಿಯನ್ನು ದಾಟಿ ಢಿಲ್ಲಿಯನ್ನು ವಶಪಡಿಸಿಕೊಂಡಿತು. ಆ ಮೇಲೆ ಇನ್ನೂ ಮುಂದರಿದು ಹೋಗಿ ಲಾಹೋರಿನಲ್ಲಿದ್ದ ಅಫಘಾನ ಸೈನಿಕ ರನ್ನು ಓಡಿಸಿ ಪಂಜಾಬನ್ನೂ ಗೆದ್ದುಕೊಂಡಿತು. ಇದರಿಂದ ಮರಾಟರ ಅಧಿ ಕಾರವು ಹಿಂದುಸ್ಥಾನದಲ್ಲೆಲ್ಲಾ ಪಸರಿತು. ಮರಾಟರೇ ಹಿಂದೂದೇಶದ ಸಾರ್ವಭೌಮರಾಗುವರೋ ಎಂಬಂತಾಯಿತು.

ಮರಾಟರ ಅವನತಿ 1761

ಆದರೆ ಒಡನೆ ಪರಿಸ್ಥಿತಿಯೇ ಬದಲಾಯಿತು. ಅಫಘಾನಿಸ್ಥಾನದ ಅರಸ ನಾದ ಅಹಮದ ಷಾ ಅಬ್ದಾಲಿಯು ಸಿಟ್ಟಿಗೆದ್ದು ಸೇನಾಸಮೇತನಾಗಿ ಬಂದು ಪಂಜಾಬನ್ನು ವಶಪಡಿಸಿಕೊಂಡು ಢಿಲ್ಲಿಗೂ ಬಂದನು. ಅಲ್ಲಿ ಅವನಿಗೆ ರೋಹಿಲರೂ ಅಯೋಧ್ಯೆಯ ನವಾಬನೂ ಸಹಾಯಮಾಡುವುದಾಗಿಯೂ ಮಾತುಕೊಟ್ಟರು. ಢಿಲ್ಲಿ ಪಂಜಾಬುಗಳು ಕೈಮೀರಿ ಹೋದುವೆಂದು ಮರಾಟರು ಮುನಿದು ಒಂದು ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಿದರು. ಪೇಶ್ವೆಯ ತಮ್ಮನಾದ ಸದಾಶಿವ ಭಾವು ಮತ್ತು ಮಗನಾದ ವಿಶ್ವಾಸರಾಯರ ನಾಯಕತ್ವದಲ್ಲಿ ಸೇನೆಯು ಢಿಲ್ಲಿಯ ಕಡೆಗೆ ನಡೆಯಿತು. ಪಾಣಿಪತದ ಬಯಲಲ್ಲಿ ಇಬ್ಬರಿಗೂ ಕರಾಳವಾದ ಕಾಳಗವು ನಡೆದು, ಮರಾಟರು ಸೋತು ಅವರ ಸೈನ್ಯವು ನುಚ್ಚುನೂರಾಯಿತು. ಭಾವು ವಿಶ್ವಾಸರಾಯರು ಮಡಿದುಬಿದ್ದರು. ಚಂಬಲ್‌ನದಿಯ ಉತ್ತರ ಪ್ರದೇಶವೆಲ್ಲ ಮರಾಟರಿಂದ ತಪ್ಪಿಹೋಯಿತು. ಅವರ ಪ್ರಾಬಲ್ಯವು ಇಳಿಯಿತು. ಸೈನ್ಯದ ಹೆಚ್ಚಿನಂಶವು ಅಳಿದುದರಿಂದ ಸಾಮ್ರಾಜ್ಯದ ಜವಾಬ್ದಾರಿಯನ್ನು ಹೊರುವುದು ಮರಾಟರಿಗೆ ಅಸಾಧ್ಯವೆನಿಸಿತು. ಬಾಲಾಜಿ ಬಾಜಿರಾಯನು ಪಾಣಿಪತದ ವಾರ್ತೆಯನ್ನು ಕೇಳಿ ಕೊರಗಿ ಸತ್ತುಹೋದನು. ಅವನ ಚಿಕ್ಕ ಬಾಲಕನಾದ ಮಾಧವರಾಯನು ಪೇಶ್ವೆಯಾದನು. ಮಹಾರಾಷ್ಟ್ರದ ಇತರ ಸರದಾರರು ಪೇಶ್ವೆಯ ಅಧೀನರಾಗಿರುವುದಕ್ಕೆ ಅಸಮ್ಮತಿಯನ್ನು ತೋರಿಸಿದರು.

14. ಇಂಗ್ಲಿಷ್ ರಾಜ್ಯದ ಆರಂಭ

ಪೋರ್ತುಗೀಸರು:—ಮೊಗಲ ಸಾಮ್ರಾಜ್ಯವು ಶಿಥಿಲವಾಗಿ ಮರಾಟರ ಸಾಮ್ರಾಜ್ಯವು ಬೆಳಗುತ್ತಿದ್ದ ಕಾಲದಲ್ಲಿ, ವ್ಯಾಪಾರಕ್ಕೆಂದು ನಮ್ಮ ದೇಶಕ್ಕೆ ಬಂದು ಕರಾವಳಿಯಲ್ಲಿದ್ದ ಪಾಶ್ಚಾತ್ಯ ವರ್ತಕರು ತಮ್ಮ ತಮ್ಮೊಳಗೆ ಜಗಳಾಡುತ್ತಲಿದ್ದರು.

ಪ್ರಾಬಲ್ಯ

ಮಧ್ಯಕಾಲದಲ್ಲಿ ಹಿಂದೂದೇಶದ ವ್ಯಾಪಾರವು ಅರಬರ ಕೈಯಲ್ಲಿದ್ದಿತು. ಹದಿನೈದನೆಯ ಶತಮಾನದಲ್ಲಿ ಯುರೋಪಿನ, ಮುಖ್ಯತಃ ಸ್ಪೈಯಿನ್ ಮತ್ತು ಪೋರ್ತುಗಲಿನ ವರ್ತಕರು ಹಿಂದೂದೇಶದವರೊಡನೆ ವ್ಯಾಪಾರ ಬೆಳೆಸಬೇಕೆಂದು ಹವಣಿಸಿ, ಹಿಂದೂದೇಶವನ್ನು ತಲಪಲು ಜಲಮಾರ್ಗವನ್ನು ಹುಡುಕುವ ಹವ್ಯಾಸದಲ್ಲಿಯೇ ಇದ್ದರು. 1498ರಲ್ಲಿ ಪೋರ್ತುಗೀಸ ನಾವಿಕನಾದ ವಾಸ್ಕೊ ಡಿ ಗಾಮನು ಆಫ್ರಿಕದ ಕರಾವಳಿಯನ್ನು ಸುತ್ತುವರಿದು ಕೇಪ್ ಒಫ್ ಗುಡ್ ಹೋಪನ್ನು ಹಾದು ಹಿಂದೂದೇಶಕ್ಕೆ ಬಂದನು. ಅಂದಿನಿಂದ ಪ್ರಾಯಶಃ ಒಂದು ಶತಮಾನದ ವರೆಗೆ ಹಿಂದೂದೇಶದ ವ್ಯಾಪಾರವು ಪೋರ್ತುಗೀಸರ ಕೈಯಲ್ಲಿಯೇ ಇದ್ದಿತು. ಉತ್ತರದಲ್ಲಿ ಮೊಗಲ್ ಸಾಮ್ರಾಜ್ಯವೂ, ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯವೂ ಮೆರೆಯುತ್ತಿದ್ದ ಕಾಲದಲ್ಲಿ ಪೋರ್ತುಗೀಸರು ಒಳ್ಳೆಯ ವ್ಯಾಪಾರದಿಂದ ಹೇರಳ ಲಾಭವನ್ನು ಪಡೆದು ಧನಿಕರಾದರು. ಕಲ್ಲಿಕೋಟೆ, ಕನ್ನಾನೂರು, ಮಂಗಳೂರು, ಕೊಚ್ಚಿಗಳಲ್ಲಿ ಅವರ ಬಂದಸಾಲೆಗಳಿದ್ದುವು. 1510ರಲ್ಲಿ ಪೋರ್ತುಗೀಸರು ಗೋವಾ ಪ್ರದೇಶವನ್ನು ಜಯಿಸಿಕೊಂಡು ತಮ್ಮ ನೌಕಾಬಲವನ್ನು ಹೆಚ್ಚಿಸಿ ಪೂರ್ವ ದೇಶಗಳಲ್ಲೆಲ್ಲಾ ವಿಖ್ಯಾತರಾದರು. ಕೇಪ್ ಒಫ್ ಗುಡ್ ಹೋಪಿನಿಂದ ಚೀನಾ ದೇಶದ ವರೆಗಿನ ಅನೇಕ ಬಂದರು ಸ್ಥಳಗಳಲ್ಲಿ ಪೋರ್ತುಗೀಸರ ಬಂದಸಾಲೆಗಳಿದ್ದುವು. ಅಲ್ಲದೆ ಕೆಲವೆಡೆಗಳಲ್ಲಿ ಅವರಿಗೆ ರಾಜಕೀಯ ಅಧಿಕಾರವೂ ಇದ್ದಿತು.

ಅವನತಿ


ಆದರೆ ಹದಿನಾರನೆಯ ಶತಮಾನದಲ್ಲಿ ಪೋರ್ತುಗೀಸರ ಅಧಿಕಾರವು ಕುಗ್ಗಲಾರಂಭಿಸಿತು. ಅವರ ನೌಕಾಬಲವು ಕಡಿಮೆಯಾಗಿದ್ದುದರಿಂದ, ಹಿಂದುಸ್ಥಾನಕ್ಕೆ ವ್ಯಾಪಾರಕ್ಕಾಗಿ ಬರತೊಡಗಿದ ಡಚ್ಚರನ್ನೂ, ಇಂಗ್ಲಿಷರನ್ನೂ, ಫ್ರೆಂಚರನ್ನೂ ತಡೆಗಟ್ಟಲು ಅವರು

ಸಮರ್ಥರಾಗಲಿಲ್ಲ. ಮುಖ್ಯವಾಗಿ ಡಚ್ಚರ ಸ್ಪರ್ಧೆಯಿಂದ ಪೋರ್ತುಗೀಸರ ವ್ಯಾಪಾರವು ಕಡಿಮೆಯಾಯಿತು. ಪೂರ್ವ ದ್ವೀಪಗಳ ವ್ಯಾಪಾರವು ಡಚ್ಚರ ಕೈವಶವಾಗಿಹೋಯಿತು.

ಡಚ್ಚರೂ, ಇಂಗ್ಲಿಷರೂ, ಫ್ರೆಂಚರೂ:—ಡಚ್ ಈಸ್ಟ್ ಇಂಡಿಯಾ ಕಂಪೆನಿಯು 1602ನೇ ವರ್ಷದಲ್ಲಿ ಸ್ಥಾಪಿತವಾಗಿ ಒಂದು ಶತಮಾನದ ವರೆಗೆ

ಡಚ್ಚರು

ಒಳ್ಳೆಯ ಸ್ಥಿತಿಯಲ್ಲಿದ್ದು, ಹಿಂದೂ ದೇಶದ ಮಸಾಲೆ ಸಾಮಾನುಗಳನ್ನೂ, ಹತ್ತಿ, ಬಟ್ಟೆ, ರೇಶ್ಮೆ, ನೀಲಿ ಮುಂತಾದ ವಸ್ತುಗಳನ್ನೂ ಯುರೋಪಿಗೆ ಒಯ್ದು ಹೆಚ್ಚಿನ ಲಾಭವನ್ನು ಪಡೆಯುತಿದ್ದಿತು. ಹದಿನೆಂಟನೆಯ ಶತಮಾನದಲ್ಲಿ ಈ ವ್ಯಾಪಾರದ ಮೇಲಾಟ



ಫೋರ್ಟ್ ಸೈಂಟ್ ಜೊರ್ಜ್, ಮದರಾಸು

(Courtesy: the Victoria Memorial Section, Indian Museum)

ದಿಂದಾಗಿ ಇಂಗ್ಲೆಂಡು ಹೊಲೆಂಡುಗಳೊಳಗೆ ಮೂರು ಯುದ್ಧಗಳು ನಡೆದುವು. ಆ ತರುವಾಯ ಡಚ್ಚರ ದರ್ಪವು ಇಳಿಯಿತು.

ಇಂಗ್ಲಿಷರು

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು 1600ರಲ್ಲಿ ಸ್ಥಾಪಿತವಾಯಿತು. ಸರ್ ಥೋಮಸ್ ರೋ ಎಂಬಾತನ ಪ್ರಯತ್ನದಿಂದ ಅವರಿಗೆ ಸೂರತಿನಲ್ಲಿ ಬಂಡಸಾಲೆಗಳನ್ನು ಕಟ್ಟಲು ಜಹಾಂಗೀರನು ಅನುಮತಿಯಿತ್ತನು. 1639ರಲ್ಲಿ ಅವರು ಮದರಾಸನ್ನು ಪಡೆಕೊಂಡರು. 1668ರಲ್ಲಿ ಮುಂಬಾಯಿಯೂ, 1690ರಲ್ಲಿ ಕಲ್ಕತ್ತವೂ

ಅವರಿಗೆ ದೊರಕಿದುವು. ಆ ಕಾಲನಲ್ಲಿ ಬರೇ ಹಳ್ಳಿಗಳಾಗಿದ್ದ ಈ ಸ್ಥಳಗಳನ್ನು ಕೇಂದ್ರಸ್ಥಳಗಳಾಗಿಟ್ಟುಕೊಂಡು ಇಂಗ್ಲಿಷರು ವ್ಯಾಪಾರವನ್ನು ನಡೆಸತೊಡಗಿದರು.

ಫ್ರೆಂಚರು

ಫ್ರೆಂಚರೂ ಹಿಂದೂದೇಶದಲ್ಲಿ ವ್ಯಾಪಾರವನ್ನು ಮಾಡುವ ಹವ್ಯಾಸದಿಂದ ಕ್ರಿ. ಶ. 1664ರಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ಕಂಪೆನಿಯನ್ನು ಸ್ಥಾಪಿಸಿ, ಪೊಂಡಿಚೇರಿ, ಮಾಹೆ ಮತ್ತು ಚಂದ್ರನಾಗೊರ ಎಂಬ ಹಳ್ಳಿಗಳಲ್ಲಿ ವ್ಯಾಪಾರ ಮಾಡುತ್ತಿದ್ದರು ಡಚ್ಚರು ಹಿಂದೂದೇಶದಲ್ಲಿನ ವ್ಯಾಪಾರದ ಹೆಚ್ಚಿನ ಆಸೆಯನ್ನು ಬಿಟ್ಟು, ಸಿಲೋನ್ ಮತ್ತು



ಫೋರ್ಟ್ ಸೈಂಟ್ ವಿಲ್ಲಿಯಮ್

(Courtesy-Trustees of the Victoria Memorial Section, Indian Museum)

ಪೂರ್ವ ದ್ವೀಪಗಳಲ್ಲಿಯೇ ವ್ಯಾಪಾರವನ್ನು ಕೇಂದ್ರೀಕರಿಸಿದರು. ಹೀಗಾಗಿ ಹಿಂದೂದೇಶದ ವ್ಯಾಪಾರದಲ್ಲಿ ಇಂಗ್ಲಿಷ್ ಮತ್ತು ಫ್ರೆಂಚರೊಳಗೆ ಮಾತ್ರ ಸ್ಪರ್ಧೆ ಉಂಟಾಯಿತು.

ಡೂಪ್ಲೆ

ಈ ಸ್ಪರ್ಧೆಯು ಹದಿನೆಂಟನೆಯ ಶತಮಾನದ ಆದಿಯಲ್ಲಿ ಬೆಳೆಯುತ್ತಾ ಬಂದಿತು. ಕ್ರಿ. ಶ. 1842ರಲ್ಲಿ ಡೂಪ್ಲೆ ಎಂಬವನು ಫ್ರೆಂಚರ ವಸಾಹತುಗಳಿಗೆಲ್ಲ ಅಧಿಕಾರಿಯಾಗಿ ತಮ್ಮ ವ್ಯಾಪಾರವನ್ನು ಮಾತ್ರವಲ್ಲದೆ ಅಧಿಕಾರವನ್ನೂ ಹೆಚ್ಚಿಸಲು ಹೆಣಗಾಡಿದನು. ಹಿಂದೂದೇಶದಿಂದ ಇಂಗ್ಲಿಷರನ್ನು ಅಟ್ಟಿಬಿಟ್ಟು ತಾವೇ ಮೆರೆಯಬೇಕೆಂದೂ ಅವನು ಹವಣಿಸಿದ್ದನು.

ಹಿಂದೂದೇಶದ ಆ ಕಾಲದ ಪರಿಸ್ಥಿತಿಯೂ ಆತನಿಗೆ ಅನುಕೂಲವಾಗಿದ್ದಿತು. ಮೊಗಲ ಸಾಮ್ರಾಜ್ಯವು ಅಸ್ತಮಿಸುತಲಿದ್ದಿತು. ದಕ್ಷಿಣದಲ್ಲಿ ನಿಜಾಮನು ಹೈದರಾಬಾದಿನಲ್ಲಿಯೂ, ಕರ್ಣಾಟಕದಲ್ಲಿ ಒಬ್ಬ ನವಾಬನೂ ಇದ್ದರು. ಇತರ ಪ್ರದೇಶಗಳಲ್ಲಿ ಪಾಳೆಗಾರರು ಇದ್ದರು. ದೇಶದಲ್ಲಿ ಬಲವಾದ ಸರಕಾರವಿಲ್ಲದಿದ್ದುದರಿಂದ ಕಳ್ಳಕಾಕರ ಮತ್ತು ದರೋಡೆಗಾರರ ಹಾವಳಿಗೆ ಕಡಿಮೆಯಿರಲಿಲ್ಲ. ಹೀಗಾಗಿ ಇಂಗ್ಲಿಷರೂ ಫ್ರೆಂಚರೂ ತಮ್ಮ ವಸಾಹತುಗಳ ಭದ್ರತೆಗಾಗಿ ಚಿಕ್ಕ ಚಿಕ್ಕ ಸೈನ್ಯಗಳನ್ನಿಟ್ಟಿದ್ದರು. ಇದೇ ಸೈನ್ಯವನ್ನು ಅಭಿವೃದ್ಧಿಗೊಳಿಸಿ ಪಾಶ್ಚಾತ್ಯ ರೀತಿಯಿಂದ ತರಬೇತುಗೊಳಿಸಿದರೆ ಹಿಂದೀ ಸೈನ್ಯಗಳನ್ನು ಸುಲಭವಾಗಿ ಸೋಲಿಸಬಹುದೆಂದು ಡೂಪ್ಲೆಗೆ ಮನವರಿಕೆಯಾಯಿತು. ಇದರಿಂದ ಹಿಂದೂದೇಶದ ವ್ಯಾಪಾರವನ್ನು ಬಲಗೊಳಿಸುವುದು ಮಾತ್ರವಲ್ಲದೆ, ಒಂದಲ್ಲ ಒಂದು ದಿನ ಪ್ರಭುತ್ವವನ್ನೂ ಪಡೆಯಬಾರದೇಕೆ? ಎಂದು ಆತನ ಮನಸ್ಸಿನಲ್ಲಿದ್ದಿತು.

ಯುರೋಪಿನಲ್ಲಿ ಹದಿನೆಂಟನೆಯ ಶತಮಾನದಲ್ಲೆಲ್ಲಾ ಇಂಗ್ಲಿಷರಿಗೂ ಫ್ರೆಂಚರಿಗೂ ಜಗಳಗಳಿದ್ದುವು. 1740ರಲ್ಲಿ ಅವರೊಳಗೆ ಯುದ್ಧವು ಆರಂಭವಾದ ವರ್ತಮಾನವು ಹಿಂದೂದೇಶಕ್ಕೆ ಬಂದೊಡನೆ ಡೂಪ್ಲೆಯು ಮದರಾಸನ್ನು ಸ್ವಾಧೀನಪಡಿಸಿಕೊಂಡನು. ಆದರೆ 1748ರಲ್ಲಿ ಯುರೋಪಿನಲ್ಲಿ ನಡೆದ ಒಪ್ಪಂದದ ಪ್ರಕಾರ ಅದನ್ನು ಇಂಗ್ಲಿಷರಿಗೆ ಬಿಟ್ಟುಕೊಡಬೇಕಾಯಿತು. ಆದರೆ ಇಂಗ್ಲಿಷರ ಮೇಲಿನ ವೈಷಮ್ಯವನ್ನು ಮಾತ್ರ ಅವನು ಬಿಡಲಿಲ್ಲ.

ಬ್ರಿಟಿಷ್ ಫ್ರೆಂಚರ ಹೊಡೆದಾಟ

ದಕ್ಷಿಣದಲ್ಲಿ ಫ್ರೆಂಚರ ಅಧಿಕಾರವನ್ನು ಹೆಚ್ಚಿಸಲಿಕ್ಕೆ ಡೂಪ್ಲೆಗೆ ಒಂದು ಸುಸಂದರ್ಭವು ಒದಗಿತು. ಆರ್ಕಾಟಿನ ನವಾಬನಿಗೆ ವಿರುದ್ಧವಾಗಿ ಪಿತೂರಿಯನ್ನು ನಡಿಸುತ್ತಿದ್ದ ಚಂದಾಸಾಹೇಬನೆಂಬವನು ಡೂಪ್ಲೆಯ ಸಹಾಯವನ್ನು ಬೇಡಿ ಪಡೆದನು. ಅದರಂತೆಯೇ ಕ್ರಿ. ಶ. 1748ರಲ್ಲಿ ನಿಜಾಮ ಆಸಫಜಾಹನು ಮಡಿಯಲು ಅಲ್ಲಿಯ ಪಟ್ಟಕ್ಕಾಗಿ ಮುಜಾಫರಜಂಗ ಮತ್ತು ನಾಸಿರಜಂಗ ಇವರೊಳಗೆ ಕಚ್ಚಾಟವಿದ್ದಿತು. ಫ್ರೆಂಚರು ಮುಜಾಫರಜಂಗನಿಗೆ ಸಹಾಯಮಾಡಲು ಒಪ್ಪಿಕೊಂಡರು. ಈ ಒಳಸಂಚಿನಲ್ಲಿ ತಾವು ವಿಜಯಿಗಳಾದರೆ ತಮಗೆ ದಕ್ಷಿಣ ಹಿಂದೂದೇಶದಲ್ಲಿ ರಾಜಕೀಯಾಧಿಕಾರವು ದೊರಕಿ

ಪ್ರಬಲರಾಗಿ ಇಂಗ್ಲಿಷರನ್ನು ಓಡಿಸಿಬಿಡಬೇಕೆಂದು ಡೂಪ್ಲೆಯ ಆಲೋಚನೆಯಾಗಿದ್ದಿತು.

ಪ್ರಾರಂಭದಲ್ಲಿ ಎಲ್ಲವೂ ಡೂಪ್ಲೆಯ ಇಚ್ಛೆಯಂತೆ ನಡೆಯಿತು. ಚಂದಾಸಾಹೇಬನು ಆರ್ಕಾಟಿನ ನವಾಬನನ್ನು ಕೊಂದು ತಾನೇ ನವಾಬನಾದನು. ಮೊದಲಿನ ನವಾಬನ ಮಗನಾದ ಮಹಮದಾಲಿಯು ತಿರುಚಿನಾಪಳ್ಳಿಗೆ ಓಡಿಹೋಗಿ ಅಲ್ಲಿಯ ಕೋಟೆಯಲ್ಲಿ ಅವಿತುಕೊಂಡನು. ಚಂದಾಸಾಹೇಬನ ಸೈನ್ಯವು ತಿರುಚಿನಾಪಳ್ಳಿಗೆ ಮುತ್ತಿಗೆ ಹಾಕಿತು. ಹೈದರಾಬಾದಿನಲ್ಲಿ ಕೆಲವರು ನಾಸಿರಜಂಗನನ್ನು ಕೊಂದುದರಿಂದ ಮುಜಾಫರಜಂಗನೇ ನಿಜಾಮನಾದನು. ಕೆಲವೇ ತಿಂಗಳುಗಳೊಳಗೆ ಅವನೂ ಕೊಲ್ಲಲ್ಪಟ್ಟನು. ಒಡನೆ ಅಲ್ಲಿದ್ದ ಫ್ರೆಂಚರ ಸೇನಾನಿ ಬುಸ್ಸಿಯು ಸಲಾಬತಜಂಗನೆಂಬವನನ್ನು ನಿಜಾಮನಾಗಿ ಮಾಡಿದನು. ಸಲಾಬತಜಂಗನು ಫ್ರೆಂಚರಿಗೆ ಉತ್ತರ ಸರಕಾರವನ್ನು ಕೊಟ್ಟುಬಿಟ್ಟನು.

ಆರ್ಕಾಟಿನ ಮುತ್ತಿಗೆ 1751

ಇತ್ತ ಮಹಮದಾಲಿಯು ನಿರಾಶನಾಗಿ ಇಂಗ್ಲಿಷರ ಸಹಾಯವನ್ನು ಬೇಡಿದನು. ಫ್ರೆಂಚರ ಅಧಿಕಾರವು ಹೆಚ್ಚುತ್ತಿರುವುದನ್ನು ಕಂಡು ಅಸೂಯೆಗೊಂಡ ಇಂಗ್ಲಿಷರು, ಇನ್ನು ತಾವು ಸುಮ್ಮನಿರುವುದು ಸರಿಯಲ್ಲವೆಂದು ತಾವೂ ಒಂದು ಸೇನೆಯನ್ನು ಸಜ್ಜುಗೊಳಿಸಿದ್ದರು. ಕಂಪನಿಯ ಕಾರಕೂನನಾಗಿದ್ದ ರೊಬರ್ಟ್ ಕ್ಲೈವನು, ತಿರುಚಿನಾಪಳ್ಳಿಗೆ ಸೇನೆಯನ್ನು ಕಳುಹಿಸುವ ಬದಲು, ಸೇನಾರಕ್ಷಣೆಯಿಲ್ಲದ ಆರ್ಕಾಟಿಗೆ ಹೋಗಿ ಅದನ್ನು ವಶಪಡಿಸಿಕೊಂಡರೆ ಇಂಗ್ಲಿಷರ ಯಶಸ್ಸು ಹೆಚ್ಚಾಗುವುದೆಂಬ ವಿಚಿತ್ರ ಆಲೋಚನೆಯನ್ನು ಗವರ್ನರನಿಗೆ ತಿಳಿಸಿದನು. ಇದು ಸರಿಯೆಂದು ಕಂಡುಕೊಂಡ ಗವರ್ನರನು ಕ್ಲೈವನು ಸೇನಾಪತಿಯಾಗಿ ಮಾಡಿ ಆರ್ಕಾಟಿಗೆ ಸೇನೆಯನ್ನು ಕಳುಹಿಸಿದನು. ಕ್ಲೈವನನ್ನು ಸುಲಭವಾಗಿ ಆರ್ಕಾಟನ್ನು ವಶಪಡಿಸಿಕೊಂಡನು. ಈ ವಾರ್ತೆಯನ್ನು ಕೇಳಿ ಚಂದಾಸಾಹೇಬನು ತಿರುಚಿನಾಪಳ್ಳಿಯನ್ನು ಬಿಟ್ಟು ಆರ್ಕಾಟಿಗೆ ಬಂದನು. ಅಷ್ಟರಲ್ಲಿ ಇಂಗ್ಲಿಷರಿಗೆ ಇತರರ ಸಹಾಯವು ದೊರಕಿ ಅವರು ಚಂದಾಸಾಹೇಬನನ್ನು ಸೋಲಿಸಿ ಕೊಂದರು. ಮಹಮದಾಲಿಯು ಆರ್ಕಾಟಿನ ನವಾಬನಾದನು. ಕರ್ಣಾಟಕದಲ್ಲಿ ಇಂಗ್ಲಿಷರ ಅಧಿಕಾರವು ಹೆಚ್ಚಿತು. ಅಲ್ಲಿಂದ

ಮುಂದೆ ಇಂಗ್ಲಿಷರ ಅಭ್ಯುದಯಕ್ಕೆ ಪ್ರಾರಂಭವಾಯಿತು. ಇಲ್ಲಿಯ ಗೊಂದಲವೇ ಬೇಡವೆಂದು ಡೂಪ್ಲೆಯನ್ನು ಫ್ರೆಂಚ ಸರಕಾರದವರು ಫ್ರಾನ್ಸಿಗೆ ಬರಮಾಡಿಕೊಂಡರು. ಕ್ರಿ. ಶ. 1754ರಲ್ಲಿ ಯುದ್ಧವು ಕೊನೆಗೊಂಡಿತು.

ಪುನಃ ಯುದ್ಧಾರಂಭ

ಯುರೋಪಿನಲ್ಲಿ ಪುನಃ 1756ರಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ಯುದ್ಧವು ಆರಂಭವಾಯಿತು. ಆ ವಾರ್ತೆಯು ಹಿಂದೂದೇಶಕ್ಕೆ ಮುಟ್ಟಿದೊಡನೆ ಮೊದಲೇ ಅವರೊಳಗೆ ನೆಲೆಸಿದ್ದ ವೈಷಮ್ಯವು ಹೆಚ್ಚಾಗಿ, ಇಲ್ಲಿಯೂ ಯುದ್ಧಕ್ಕೆ ಆರಂಭವಾಯಿತು. ಬಂಗಾಳದಲ್ಲಿ ಸಿರಾಜುದ್ದೌಲನೆಂಬವನು ಆಗತಾನೆ ನವಾಬನಾಗಿದ್ದನು. ಫ್ರೆಂಚರ ಭಯದಿಂದ ಇಂಗ್ಲಿಷರು ಕಲ್ಕತ್ತೆಯ ಕೋಟೆಯನ್ನು ಬಲಪಡಿಸುವುದನ್ನು ನೋಡಿ ಸಿರಾಜುದ್ದೌಲನು ಹಾಗೆ ಮಾಡಬಾರದೆಂದು ಇಂಗ್ಲಿಷರಿಗೆ ತಿಳಿಸಿದನು. ಇಂಗ್ಲಿಷರು ಅದಕ್ಕೆ ಕಿವಿಗೊಡಲಿಲ್ಲ. ಒಡನೆ ಸಿರಾಜುದ್ದೌಲನು ಕಲ್ಕತ್ತೆಯನ್ನು ವಶಪಡಿಸಿಕೊಂಡು ಇಂಗ್ಲಿಷರನ್ನು ಅಲ್ಲಿಂದ ಓಡಿಸಿದನು.



ರೊಬರ್ಟ್ ಕ್ಲೈವ್
(Courtesy-Trustees of the Victoria Memorial Section, Indian Museum)

ಇಂಗ್ಲೆಂಡಿಗೆ ತೆರಳಿದ್ದ ರೊಬರ್ಟ್ ಕ್ಲೈವನು ಆಗ ತಾನೆ ಹಿಂದಿರುಗಿದ್ದನು. ಅವನು ಮದರಾಸಿನಲ್ಲಿದ್ದು ಒಡನೆ ಸೈನ್ಯಸಮೇತ ಕಲ್ಕತ್ತೆಗೆ ಹೋಗಿ ಆ ಊರನ್ನು ಪುನಃ ಹಿಡಿದುಕೊಂಡನು. ಅಲ್ಲಿಂದ ಚಂದ್ರನಾಗೋರಕ್ಕೆ ಹೋಗಿ ಅದನ್ನು ವಶಪಡಿಸಿಕೊಂಡು ಫ್ರೆಂಚರನ್ನು ಬಂಗಾಳದಿಂದ ಓಡಿಸಿದನು.

ಪಲಾಸಿಯ ಕದನ 1757

ಸಿರಾಜುದ್ದೌಲನಿಗಿಂತಲೂ ತನಗೆ ಅನುಕೂಲನಾಗಿ ನಡೆಯುವ ಸುಭೇದಾರನಿದ್ದರೆ ಒಳ್ಳೆಯದಿತ್ತೆಂದು ಕ್ಲೈವನು ಬಗೆದನು. ಆಗ ಸಿರಾಜುದ್ದೌಲನ ಸೇನಾಧಿಪತಿಯಾದ ಮಿರ್ ಜಾಫರನು ತಾನೇ ನವಾಬನಾಗಬೇಕೆಂಬ ಆಸೆಯಿಂದ ಒಳಸಂಚು ನಡೆಸಿ ಕ್ಲೈವನ ಸಹಾಯವನ್ನು ಬೇಡಿದನು.

ಒಡನೆ ಕ್ಲೈವನು ಅದಕ್ಕೊಪ್ಪಿ ಸಿರಾಜುದ್ದೌಲನೊಡನೆ ಯುದ್ಧವನ್ನು ಹೂಡಿದಿದನು. ಕ್ರಿ. ಶ. 1757ರಲ್ಲಿ ಪಲಾಸಿ ಎಂಬಲ್ಲಿ ಅವರೊಳಗೆ ಕದನವಾಗಿ ಇಂಗ್ಲಿಷರೇ ವಿಜಯಿಗಳಾದರು. ಮೀರ್‌ಜಾಫರನು ನವಾಬನಾದನು. ಮೀರ್ ಜಾಫರನು ತನಗೆ ಸಹಾಯಮಾಡಿದ ಎಲ್ಲ ಇಂಗ್ಲಿಷ್ ಅಧಿಕಾರಿಗಳಿಗೆ ಯಥೇಷ್ಟವಾಗಿ ಬಹುಮಾನಗಳನ್ನು ಕೊಟ್ಟನು. ಇಂಗ್ಲಿಷರ ಪ್ರಭಾವವು ಇದರಿಂದ ಇನ್ನಷ್ಟು ಬೆಳೆಯಿತು.

ಫ್ರೆಂಚರ ಪರಾಜಯ

ಇತ್ತ ದಕ್ಷಿಣದಲ್ಲಿ ಫ್ರೆಂಚರು ಮದರಾಸನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ಕೊನೆಗೆ ಫ್ರೆಂಚ್ ಅಧಿಕಾರಿಯಾಗಿದ್ದ ಕೌಂಟ್‌ಡಿಲಾಲಿಯು ಹೈದರಾಬಾದಿನಲ್ಲಿದ್ದ ಬುಸ್ಸಿಗೆ ತನ್ನನ್ನು ಬಂದು ಸೇರಿಕೊಳ್ಳಬೇಕೆಂದು ತಿಳಿಸಿದನು. ಬುಸ್ಸಿಯು ಹೈದರಾಬಾದನ್ನು ಬಿಟ್ಟೊಡನೆ ಹೈದರಾಬಾದಿನಲ್ಲಿ ಫ್ರೆಂಚರ ಅಧಿಕಾರವು ಕಡಿಮೆಯಾಗಿಬಿಟ್ಟಿತು. ಕ್ಲೈವನು ಬಂಗಾಳದಿಂದ ಕಳುಹಿದ ಸೇನೆಯು ಕ್ರಿ. ಶ. 1758ರಲ್ಲಿ ಉತ್ತರ ಸರಕಾರಗಳನ್ನು ಫ್ರೆಂಚರಿಂದ ಗೆದ್ದುಕೊಂಡಿತು. ನಿಜಾಮನು ಆ ಪ್ರದೇಶವನ್ನು ಇಂಗ್ಲಿಷರಿಗೇ ಬಿಟ್ಟುಕೊಟ್ಟನು. ಇತ್ತ ಬುಸ್ಸಿಯೂ ಕೌಂಟ್ ಡಿಲಾಲಿಯೂ ಸೇರಿ ವ್ರೊಂಡಿವ್ರೋಶ್ ಎಂಬಲ್ಲಿ ಇಂಗ್ಲಿಷರನ್ನು 1760ರಲ್ಲಿ ಎದುರಿಸಲು ಫ್ರೆಂಚರು ಸಂಪೂರ್ಣವಾಗಿ ಸೋತರು. ಒಡನೆ ಇಂಗ್ಲಿಷರು ಪೊಂಡಿಚೇರಿಯನ್ನು ವಶಪಡಿಸಿಕೊಂಡರು. ಫ್ರೆಂಚರ ರಾಜಕೀಯ ಅಧಿಕಾರವು ನಿರ್ನಾಮವಾಯಿತು. ಕ್ರಿ. ಶ. 1763ರಲ್ಲಿ ಯುರೋಪಿನಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ಆದ ಒಪ್ಪಂದದಂತೆ, ಫ್ರೆಂಚರಿಗೆ ಪೊಂಡಿಚೇರಿ ಮತ್ತು ಚಂದ್ರನಾಗೋರಗಳು ವ್ಯಾಪಾರಸ್ಥಳಗಳಾಗಿ ಮರಳಿ ದೊರೆತುವು. ಆ ತರುವಾಯ ಹಿಂದೂದೇಶದೊಳಗಿನ ಪಾಶ್ಚಾತ್ಯರಲ್ಲಿ ಇಂಗ್ಲಿಷರೇ ಪ್ರಬಲರಾಗುತ್ತಾ ಬಂದರು. 1760ರಲ್ಲಿ ಕ್ಲೈವನು ಬಂಗಾಳದಿಂದ ಹೊರಟು ವಿಶ್ರಾಂತಿಗಾಗಿ ಇಂಗ್ಲೆಂಡಿಗೆ ಮರಳಿದನು.

ಮೀರ್‌ಜಾಫರನ ಆಳ್ವಿಕೆಯ ಕ್ರಮವು ಕಲ್ಕತ್ತೆಯಲ್ಲಿದ್ದ ಇಂಗ್ಲಿಷರಿಗೆ ಸರಿಯೆಂದು ತೋರಲಿಲ್ಲ. ಅವನು ದುರ್ಬಲನೂ, ದಯಾಳುವೂ ಆಗಿದ್ದು ರಾಜ್ಯವನ್ನು ಸುವ್ಯವಸ್ಥೆಯಲ್ಲಿಡಲು ಅಶಕ್ತನಾಗಿದ್ದನು. ಇದರಿಂದ ದೇಶದಲ್ಲೆಲ್ಲ

ಗಲಭೆಗಳೆದ್ದುದಲ್ಲದೆ ಬರಗಾಲವೂ ತಲೆದೋರಿತು. ಇದನ್ನೆಲ್ಲ ಸಿಸಾರಿಸಲು ಮೀರ್ ಜಾಫರನು ಸಮರ್ಥನಾಗಲಿಲ್ಲ. ಆದುದರಿಂದ ಇಂಗ್ಲಿಷರು ಅವನ ಅಳಿಯನಾದ ಮೀರ್ ಕಾಸಿಮನನ್ನು ನವಾಬನನ್ನಾಗಿ ಮಾಡಿದರು. ಮೀರ್ ಕಾಸಿಮನು ಕಂಪನಿಯ ಅಧಿಕಾರಿಗಳಿಗೆಲ್ಲ ಹದಮೀರಿದ ಬಹುಮಾನಗಳನ್ನಿತ್ತು ಬೊಕ್ಕಸವನ್ನು ಬರಿದುಮಾಡಿದನು.

ಮೀರ್ ಕಾಸಿಮನಿಗೆ ತಾನೇ ಚೆನ್ನಾಗಿ ರಾಜ್ಯಭಾರವನ್ನು ಮಾಡಬೇಕೆಂದು ಮನಸ್ಸಿದ್ದುದರಿಂದ ಇಂಗ್ಲಿಷರು ರಾಜಕಾರಣದಲ್ಲಿ ಕೈ ಹಾಕದಂತೆ ತಡೆದನು.

ಮೀರ್ ಕಾಸಿಮನು ಬಂಗಾಳದ ನವಾಬನಾದುದು

ಇಂಗ್ಲಿಷರು ಲಾಭಾಪೇಕ್ಷೆಯಿಂದ ಜನರಿಗೆ ತೊಂದರೆ ಕೊಡದಂತೆ ನೋಡಿಕೊಂಡನು. ಅವನು ತನ್ನ ರಾಜಧಾನಿಯನ್ನು ಮುರ್ಶಿದಾಬಾದಿನಿಂದ ಮೊಂಘೀರಿಗೆ ಬದಲಾಯಿಸಿದುದರಿಂದ ಇಂಗ್ಲಿಷರಿಂದ ದೂರವಾದನು. ಅದುವರೆಗೆ ಇಂಗ್ಲಿಷರ ಸರಕುಗಳ ಮೇಲೆ ಸುಂಕ ಹೊರಿಸುತ್ತಿದ್ದಿಲ್ಲ. ಇದರಿಂದ ದೇಶೀ ವ್ಯಾಪಾರಿಗಳಿಗೆ ಅನ್ಯಾಯವಾಗುವುದೆಂದು ತಿಳಿದು ಯಾರೂ ತೆರಿಗೆ ಕೊಡಬೇಕಾಗಿಲ್ಲವೆಂದು ಅವನು ಕಾನೂನು ಮಾಡಿದನು. ಹೀಗಾಗಿ ಇಂಗ್ಲಿಷ್ ಕಾರಕೂನರಿಗೆ ದೊರೆಯುತ್ತಿದ್ದ ಲಂಚವು ಕಡಿಮೆಯಾಗಿ ಅವರು ಮೀರ್ ಕಾಸಿಮನ ಮೇಲೆ ಉರಿದುಬಿದ್ದರು.

ಹೀಗೆ ಅವರೊಳಗೆ ವೈಷಮ್ಯವು ಬೆಳೆದು ಯುದ್ಧಕ್ಕಾರಂಭವಾಯಿತು. ಮೀರ್ ಕಾಸಿಮನು ಪಾಟ್ನಾದಲ್ಲಿದ್ದ ಇಂಗ್ಲಿಷರೆಲ್ಲರನ್ನೂ ಕೊಂದಿಕ್ಕಿದನು.

ಬಕ್ಸಾರ್ ಕದನ 1764

ಇಂಗ್ಲಿಷರ ಸೈನ್ಯವು ಅಲ್ಲಿಗೆ ಹೋಗಿ ಅವನನ್ನು ಓಡಿಸಿತು. ಮೀರ್ ಕಾಸಿಮನು ಅಯೋಧ್ಯೆಗೆ ಹೋಗಿ ಅಲ್ಲಿನ ಸುಭೇದಾರನಾದ ಶೂಜಾಉದ್ದೌಲನ ಮತ್ತು ಮೊಗಲ್ ಚಕ್ರವರ್ತಿಯಾದ ಷಾಹ ಆಲಮನ ಸಹಾಯವನ್ನು ಪಡೆದು ಮರಳಿದನು. ಇವರೆಲ್ಲರನ್ನೂ ಇಂಗ್ಲಿಷರು ಬಕ್ಸಾರ್ ಎಂಬಲ್ಲಿ ಸೋಲಿಸಿದರು. ಮೀರ್ ಕಾಸಿಮನು

ಅಲ್ಲಾಹಾಬಾದಿನ ಒಪ್ಪಂದ

ಪಲಾಯನ ಮಾಡಿದನು. ಅಷ್ಟರೊಳಗೆ ಕ್ಲೈವನು ಹಿಂದೂದೇಶಕ್ಕೆ ಮರಳಿದ್ದನು. ಅವನು ಅಲ್ಲಾಹಾಬಾದಿನಲ್ಲಿ ಇವರೊಡನೆ ಒಪ್ಪಂದವನ್ನು ಮಾಡಿದನು. ಒಪ್ಪಂದದ ಶರ್ತದಂತೆ ಶೂಜಾಉದ್ದೌಲನು ಇಂಗ್ಲಿಷರಿಗೆ ಯುದ್ಧದ ವೆಚ್ಚವನ್ನೂ ಅಲ್ಲಾಹಾಬಾದ,

ಕೋರಾ ಜಿಲ್ಲೆಗಳನ್ನು ಕೊಡಬೇಕಾಯಿತು. ಹೆಸರಿಗೆ ಮಾತ್ರ ಮೊಗಲ ಸಮ್ರಾಟನಾಗಿದ್ದ ಷಾಹ ಆಲಮನು ಮೊದಲೇ ಇಂಗ್ಲಿಷರ ಕೈಯಲ್ಲಿದ್ದ ಬಂಗಾಳ, ಬಿಹಾರ, ಒರಿಸ್ಸಾಗಳ ದಿವಾನಿ ಅಂದರೆ ತೆರಿಗೆಗಳನ್ನೆತ್ತುವ ಅಧಿಕಾರವನ್ನು ಅವರಿಗೇ ಕೊಟ್ಟನು. ಇಂಗ್ಲಿಷರು ಷಾಹ ಆಲಮನಿಗೆ ಅಲ್ಲಾಹಾಬಾದ, ಕೋರಾ ಜಿಲ್ಲೆಗಳನ್ನು ಕೊಟ್ಟುದಲ್ಲದೆ ಇಪ್ಪತ್ತಾರು ಲಕ್ಷ ರೂಪಾಯಿಗಳಂತೆ ವರ್ಷಾಶನವನ್ನು ಕೊಡುವುದಾಗಿಯೂ ವಾಗ್ದಾನವಿತ್ತರು. ಇದರಿಂದ ಹಿಂದೂ ದೇಶದಲ್ಲಿ ಇಂಗ್ಲಿಷರ ರಾಜ್ಯಾಧಿಕಾರವು ಬೇರೂರಿತು, ಬಂಗಾಳಕ್ಕೆ ಇಂಗ್ಲಿಷರ ನವಾಬನನ್ನು ನೇಮಿಸಿದರೂ ತೆರಿಗೆಗಳನ್ನು ಮಾತ್ರ ನಾಯಬರ ಮೂಲಕ ಅವರೇ ವಸೂಲು ಮಾಡುತಿದ್ದರು. ಇಷ್ಟೆಲ್ಲ ಸಂಗತಿಗಳೂ ಮೂರನೆಯ ಪಾಣಿಪತ ಯುದ್ಧವಾದ ನಾಲ್ಕು ವರ್ಷಗಳ ತರುವಾಯ ನಡೆದುವು.

ಸುಧಾರಣೆಗಳು:—ನಾಯಬರಿಂದ ಕಂದಾಯವನ್ನು ವಸೂಲು ಮಾಡುವ ಪದ್ಧತಿಯು ವ್ಯವಸ್ಥಿತವಾಗಿ ನಡೆಯಲಿಲ್ಲ. ಹೀಗಾಗಿ ಬಂಗಾಳದಲ್ಲಿ ಕ್ಷಾಮವು ತಲೆದೋರಿ ಜನರು ಬಹಳ ತೊಂದರೆಗೀಡಾದರು. 1772 ರಲ್ಲಿ ವಾರನಹೇಸ್ಟಿಂಗ್ಸ ಎಂಬವನು ಬಂಗಾಳದ ಗವರ್ನರ ನಾಗಿ ನೇಮಕ ಹೊಂದಿದನು. ಅವನು ಬಂಗಾಳದ ವ್ಯವಹಾರಗಳನ್ನು ಗಟ್ಟಿ ಯಾದ ತಳಹದಿಯ ಮೇಲಿರಿಸಬೇಕೆಂದು ತೆರಿಗೆ ವಸೂಲುಮಾಡುವ ಅಧಿಕಾರ ವನ್ನು ನಾಯಬರಿಂದ ತೆಗೆದು ಕಂಪನಿಯವರು ನೇಮಿಸಿದ ಅಧಿಕಾರಿಗಳಿಗೆ ಕೊಟ್ಟನು. ಅವರು ಹಳ್ಳಿಗಳನ್ನು ಜಮೀನುದಾರರ ವಶಕೊಟ್ಟು ಅವರಿಂದ ಕಂದಾಯವನ್ನು ವಸೂಲು ಮಾಡಿಸುತಿದ್ದರು.

ವಾರನಹೇಸ್ಟಿಂಗ್ಸ

ಅದಲ್ಲದೆ ಕಂಪನಿಯವರ ಖರ್ಚನ್ನು ವಾರನಹೇಸ್ಟಿಂಗ್ಸನು ಕಡಿಮೆ ಮಾಡಿದನು. ಷಾಹಆಲಮನು ಅಲ್ಲಾಹಾಬಾದನ್ನು ಬಿಟ್ಟು ದಿಲ್ಲಿಗೆ ಹೋಗಿ ಮರಾಟರ ಆಶ್ರಯಪಡೆದನೆಂಬ ನೆವನದ ಮೇಲೆ ಅವನಿಗೆ ಸಲ್ಲಿಸುವೆವೆಂದು ವಾಗ್ದಾನಮಾಡಿದ ವರ್ಷಾಶನವನ್ನು ಹೇಸ್ಟಿಂಗ್ಸನು ನಿಲ್ಲಿಸಿದನು. ಅದರಂತೆಯೇ ಬಂಗಾಳದ ನವಾಬನಿಗೆ ಕೊಡುತ್ತ ಬಂದಿದ್ದ ವರ್ಷಾಶನವನ್ನು ಅರ್ಧಕ್ಕೆ ಇಳಿಸಿ ದನು. ಈ ರೀತಿಯಲ್ಲಿ ಖರ್ಚಿನಲ್ಲಿ ಕಡಿತವನ್ನು ಮಾಡಿದರೂ ಬಂಗಾಳದ ಸ್ಥಿತಿಯು ಸುಧಾರಿಸಲಿಲ್ಲ.

ಆ ಸಮಯದಲ್ಲಿಯೇ ಬ್ರಿಟಿಷ್ ಸರಕಾರಕ್ಕೆ ಬಂಗಾಳದಂಥ ದೊಡ್ಡ

ಪ್ರಾಂತವನ್ನು ಕಂಪೆನಿಯ ಸ್ವೇಚ್ಛೆಯಂತೆ ಆಳಲು ಬಿಡಬಾರದು, ಅವರ ಮೇಲೆ ಒಂದು ತರದ ಮೇಲ್ವಿಚಾರಣೆಯನ್ನು ಇಡುವುದು ನೆಟ್ಟಗೆ ಎಂದು ಮನಸಾರೆ 1773ರಲ್ಲಿ 'ರೆಗ್ಯುಲೇಟಿಂಗ್ ಎಕ್ಟ್' ಎಂಬ ಕಾನೂನನ್ನು ಜಾರಿಗೆ ತಂದರು. ಅದರ ಪ್ರಕಾರ ಬಂಗಾಳದ ಗವರ್ನ ರನಿಗೆ ಮದ್ರಾಸು ಮತ್ತು ಮುಂಬಾಯಿ ಕಂಪೆನಿಯ ಮೇಲ್ವಿಚಾರಣೆಯನ್ನು ಮಾಡುವ ಹಕ್ಕನ್ನು ಕೊಟ್ಟು ಅವನನ್ನು ಗವರ್ನರ್ ಜನರಲನಾಗಿ ನೇಮಿಸಿದರು. ಅವನಿಗೆ ಸಹಾಯಮಾಡಲು ನಾಲ್ಕು ಸಭಾಸದರ ಕೌನ್ಸಿಲನ್ನು ಸ್ಥಾಪಿಸಿದರು. ಈ ಕೌನ್ಸಿಲಿನ ಅಭಿಪ್ರಾಯದ ಪ್ರಕಾರ ಗವರ್ನರ್ ಜನರಲನು ನಡೆಯತಕ್ಕದ್ದು. ನ್ಯಾಯವಿಚಾರಣೆಯನ್ನು ನೋಡಿಕೊಳ್ಳಲು ಒಂದು ಮುಖ್ಯ ನ್ಯಾಯಸ್ಥಾನವೂ ಸ್ಥಾಪಿತವಾಯಿತು. ಈ ಕಾನೂನು ಜಾರಿಗೆ ಬಂದ ಕೂಡಲೆ ಬಂಗಾಳದ ಗವರ್ನರನಾದ ವಾರನ ಹೇಸ್ಟಿಂಗ್ಸನು ಗವರ್ನರ್ ಜನರಲನಾದನು.


ರೆಗ್ಯುಲೇಟಿಂಗ್ ಎಕ್ಟ್ 1773

---

15. ಇಂಗ್ಲಿಷ್ ಸಾಮ್ರಾಜ್ಯದ ಬೆಳವಣಿಗೆ

ಮೂರನೆಯ ಪಾನಿಪತದ ಯುದ್ಧದ ಕಾಲದಲ್ಲಿ ಮೈಸೂರಿನಲ್ಲಿ ಹೈದರ್ ಆಲಿ ಎಂಬ ವೀರನು ಪ್ರಬಲನಾಗಿದ್ದನು. ಮೈಸೂರನ್ನು ಬಲು ಹಿಂದಿನ ಕಾಲದಿಂದ ಹಿಂದೂ ಅರಸರು ಆಳುತ್ತಿದ್ದರು. ಸುಮಾರು ಕ್ರಿ. ಶ. 1760ರಲ್ಲಿ ಮೈಸೂರು ಸೇನೆಯಲ್ಲಿ ಸೈನಿಕನಾಗಿದ್ದು ವೀರನೆನಿಸಿಕೊಂಡ ಹೈದರಾಲಿಯು ಸೇನಾಧಿಪತಿಯಾಗಿ ನೇಮಿಸಲ್ಪಟ್ಟನು. 1763ರಲ್ಲಿ ಹೈದರ್ ಆಲಿಯು ಸಂಪತ್ಸಮೃದ್ಧವಾದ ಬಿದನೂರನ್ನು ಸೂರೆಮಾಡಿ ಅದನ್ನು ಮೈಸೂರಿಗೆ ಸೇರಿಸಿದನು. ಅಂದಿನಿಂದ ಹಿಂದೂ ಅರಸನು ಹೆಸರಿಗೆ ಮಾತ್ರ ಸಿಂಹಾಸನದಲ್ಲಿದ್ದು ಹೈದರ್ ಆಲಿಯೇ ಮೈಸೂರಿನ ಅಧಿಕಾರಿಯಾದನು. ಆತನು ಮೆಲ್ಲಮೆಲ್ಲನೆ ರಾಜ್ಯವನ್ನು ವಿಸ್ತರಿಸುತ್ತ ಹೋದನು. ಅವನ ರಾಜ್ಯಕ್ಕೆ ಈಗಿನ ಮೈಸೂರು, ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳು, ಮಲಬಾರು, ನೀಲಗಿರಿ, ಕೊಯಮುತ್ತೂರು, ಡಿಂಡಿಗಲ್, ಸೇಲಮ್, ಬಳ್ಳಾರಿ, ಕಡಪ, ಕರ್ನೂಲು, ಅನಂತಪುರ ಮತ್ತು ಧಾರವಾಡ

ಹೈದರ್ ಆಲಿಯು 1722–82


ಧಾರವಾಡ
ಬಳ್ಳಾರಿ
ಗುತ್ತಿ
ಕರ್ನೂಲು
ಕಡಪೆ
ನಗರ
ಮಂಗಳೂರು
ಬೆಂಗಳೂರು
ಮೈಸೂರು
ಸೇಲಂ
ಮದ್ರಾಸು
ತಲಚೇರಿ
ಮಾಹೆ
ಕೊಯಮುತ್ತೂರು
ಕಾರಿಕಲು
ತಂಜಾವೂರು
ದಿಂಡಿಗಲ್
ಮಧುರೆ
ಕೊಚ್ಚಿ
ಸ ಮು ದ್ರ
ಹೈದರನ ರಾಜ್ಯ
ತಿರುವನಂತಪುರ

ಜಿಲ್ಲೆಗಳು ಸೇರಿದ್ದುವು. ಹೈದರ್ ಆಲಿಯ ರಾಜ್ಯವು ಈ ರೀತಿ ವಿಸ್ತೃತವಾದು ದನ್ನು ಕಂಡು ನಿಜಾಮನೂ, ಮರಾಟರೂ, ಆರ್ಕಾಟಿನ ನವಾಬನೂ ಅಸೂಯೆ ಗೊಂಡರು. ಇಂಗ್ಲಿಷರೂ ಅವರೊಡನೆ ಸೇರಿಕೊಂಡು ಹೈದರನೊಡನೆ ಯುದ್ಧ ವನ್ನು ಹೂಡಿದರು. ಹೈದರ್ ಆಲಿಯು ಮರಾಟರೊಡನೆ ಮತ್ತು ನಿಜಾಮ ನೊಡನೆ ಸಂಧಿಮಾಡಿ, ಕರ್ಣಾಟಿಕವನ್ನು ಸುಲಿದು, ಆರ್ಕಾಟನ್ನು ವಶಪಡಿಸಿ ಕೊಂಡು ಮದರಾಸಿಗೆ ಮುತ್ತಿಗೆಹಾಕಿದನು. ಇಂಗ್ಲಿಷರು ಹೆದರಿ ಅವನೊಡನೆ ಒಪ್ಪಂದವನ್ನು ಮಾಡಿಕೊಂಡರು (1769). ಹೈದರನು ಕರ್ಣಾಟಿಕವನ್ನು ಬಿಟ್ಟುಕೊಟ್ಟನು. ಆಪತ್ಕಾಲದಲ್ಲಿ ಒಬ್ಬರಿಗೊಬ್ಬರು ಸಹಾಯಮಾಡಬೇಕೆಂದು ಅವರು ಒಪ್ಪಿಕೊಂಡರು. ಆದರೆ ಎರಡೇ ವರ್ಷಗಳಲ್ಲಿ ಮರಾಟರು ಮೈಸೂರಿಗೆ ದಂಡೆತ್ತಿ ಬರಲು, ಒಪ್ಪಂದದ ಶರ್ತದಂತೆ ಇಂಗ್ಲಿಷರು ಹೈದರ್ಆಲಿಗೆ ಸಹಾಯ ಮಾಡಲಿಲ್ಲ. ಇದರಿಂದ ಆತನು ಸಿಟ್ಟಿಗೆದ್ದನು.

ಪುನರುತ್ಥಾನ

ಮರಾಟರ ಸಾಮ್ರಾಜ್ಯ:—ಮೂರನೆಯ ಪಾಣಿಪತದ ಯುದ್ಧದಿಂದ ಮರಾಟರ ಸಂಯುಕ್ತರಾಜ್ಯವು ಒಮ್ಮೆಗೆ ಶಿಥಿಲವಾಗಿದ್ದರೂ ಅವರು ಸಾಮ್ರಾಜ್ಯ ವನ್ನು ಬಲಪಡಿಸಿಕೊಂಡರು. ನಾಲ್ಕನೆಯ ಪೇಶ್ವೆಯಾದ ಮಾಧವರಾಯನೂ, ಗ್ವಾಲಿಯರಿನ ಮಹದಾಜಿ ಸಿಂಧ್ಯನೂ ಶೀಘ್ರದಲ್ಲಿ ರಾಜ್ಯವನ್ನು ವಿಸ್ತರಿಸಿದರು. ಮಾಧವರಾಯನ ಸೈನ್ಯವು ಮೈಸೂರಿಗೆ ಹೋಗಿ ಹೈದರ್ ಆಲಿಯಿಂದ ಚೌತನ್ನು ವಸೂಲುಮಾಡಿತು. ಮಹದಾಜಿ ಸಿಂಧ್ಯನಾದರೋ ಚಂಬಲ್ ನದಿಯನ್ನು ದಾಟಿ ಢಿಲ್ಲಿಯನ್ನು ಸ್ವಾಧೀನಪಡಿಸಿ ಕೊಂಡು ರೋಹಿಲರನ್ನೂ ರಜಪೂತರನ್ನೂ ಸೋಲಿಸಿ ಉತ್ತರದಲ್ಲಿ ಇನ್ನೊಮ್ಮೆ ಮರಾಟರ ಅಧಿಕಾರವನ್ನು ಸ್ಥಾಪಿಸಿದನು. ಆ ಮೇಲೆ, ಇಂಗ್ಲಿಷರಿಂದ ವರ್ಷಾ ಶನವನ್ನು ಪಡೆದು ಅಲ್ಲಾಹಾಬಾದಿನಲ್ಲಿ ವಾಸವಾಗಿದ್ದ ಷಾಹ ಆಲಮನನ್ನು ಢಿಲ್ಲಿಗೆ ತರಿಸಿ ಅವನೇ ಮೊಗಲ್ ಸಮ್ರಾಟನೆಂದು ಸಾರಿದನು. ಹೀಗಾಗಿ ಷಾಹ ಆಲಮನು ಸಂಪೂರ್ಣವಾಗಿ ಮರಾಟರ ಅಧಿಕಾರಕ್ಕೊಳಗಾದನು. ಇದರಿಂದ ಬಂಗಾಳದ ಗವರ್ನರನಾಗಿದ್ದ ವಾರನ ಹೇಸ್ಟಿಂಗ್ಸನು ಷಾಹ ಆಲಮ ನಿಗೆ ಕೊಡುತ್ತಿದ್ದ ವರ್ಷಾಶನವನ್ನು ನಿಲ್ಲಿಸಿ ಬಿಟ್ಟುದಲ್ಲದೆ ಅಲ್ಲಾಹಾಬಾದ, ಕೋರಾ ಜಿಲ್ಲೆಗಳನ್ನು ಸ್ವಾಧೀನಪಡಿಸಿಕೊಂಡು ಅಯೋಧ್ಯೆಯ ನವಾಬನಿಗೆ ಮಾರಿಬಿಟ್ಟನು.

ಮರಾಟ ಸಾಮ್ರಾಜ್ಯದ ಪುನರುಜ್ಜೀವನಕ್ಕೆ ಕಾರಣಪುರುಷನಾದ ಮಾಧವರಾಯನು ಚಿಕ್ಕ ಪ್ರಾಯದಲ್ಲಿಯೇ ಮರಣಹೊಂದಿದನು. ಆ ಮೇಲೆ ಅವನ ಕಿರಿಯ ಸಹೋದರನಾದ ನಾರಾಯಣರಾಯನು ಪೇಶ್ವೆಯಾಗಿ, ಅವನ ಚಿಕ್ಕಪ್ಪನಾದ ರಾಘೋಬನು ಅವನ ರಕ್ಷಕನಾದನು. ರಾಘೋಬನು ಮಹತ್ವಾಕಾಂಕ್ಷಿಯು. ನಾರಾಯಣರಾಯನು ಸತ್ತರೆ ತಾನೇ ಪೇಶ್ವೆಯಾಗಿರಬಹುದೆಂದು ಅವನಲ್ಲಿ ದುರಾಲೋಚನೆಯು ಅಂಕುರಿಸಿತು. ಅವನ ಹೆಂಡತಿಯು ಗುಪ್ತಚಾರರ ಸಹಾಯದಿಂದ ನಾರಾಯಣರಾಯನನ್ನು ಕೊಲ್ಲಿಸಿಬಿಟ್ಟಳು (1773). ಗರ್ಭವತಿಯಾಗಿದ್ದ ನಾರಾಯಣನ ಹೆಂಡತಿಯು ನಾನಾಫಡ್ನೀಸನೆಂಬ ಮಂತ್ರಿಯ ಸಹಾಯದಿಂದ ಪಲಾಯನ ಮಾಡಿದಳು. ಕೆಲವೇ ತಿಂಗಳುಗಳಲ್ಲಿ ಅವಳು ಒಂದು ಗಂಡು ಮಗುವನ್ನು ಹೆತ್ತಳು. ಒಡನೆ ಮಹಾರಾಷ್ಟ್ರದ ಜನರು ಎರಡು ಪಕ್ಷಗಳಾಗಿ ಒಂದು ಪಕ್ಷದವರು ರಾಘೋಬನಿಗೆ ಬೆಂಬಲವನ್ನಿತ್ತರು; ಇನ್ನೊಂದು ಪಕ್ಷದವರು ನಾನಾಫಡ್ನೀಸನ ಪ್ರೇರಣೆಯಿಂದ ಚಿಕ್ಕ ಮಗುವಾದ ಮಾಧವರಾವ ನಾರಾಯಣನೇ ಪೇಶ್ವೆಯಾಗಬೇಕೆಂದು ಸಾಧಿಸಿದರು. ಈ ಅಂತಃಕಲಹದಲ್ಲಿ ರಾಘೋಬನು ಸೋತು ಓಡಿಹೋಗಿ ಇಂಗ್ಲಿಷರ ಮರೆಹೊಕ್ಕನು. ಇಂಗ್ಲಿಷರು ಅವನಿಗೆ ಪೇಶ್ವೆಯಾಗಲು ಸಹಾಯಮಾಡುವುದಾಗಿ ವಚನವಿತ್ತು ನಾನಾಫಡ್ನೀಸನ ಪಕ್ಷದವರೊಂದಿಗೆ ಯುದ್ಧವನ್ನು ಹೂಡಿದರು. ಈ ಯುದ್ಧದಲ್ಲಿ ಗಾಯಕವಾಡನೂ ಸಿಂಧ್ಯನೂ ಫಡ್ನೀಸನ ಪಕ್ಷವನ್ನು ಸೇರಿಕೊಂಡರು.

ಅಂತಃಕಲಹ

ನಾಲ್ಕು ವರ್ಷಗಳ ವರೆಗೆ ಈ ಯುದ್ಧವು ನಡೆದರೂ ರಾಘೋಬನನ್ನು ಪೇಶ್ವೆಯಾಗಿ ಮಾಡಲು ಇಂಗ್ಲಿಷರಿಗೆ ಅಸಾಧ್ಯವಾಯಿತು. ಕ್ರಿ. ಶ. 1780ರಲ್ಲಿ ಹೈದರ್ ಆಲಿಯು ಇಂಗ್ಲಿಷರು ಒಪ್ಪಂದವನ್ನು ಮುರಿದ ಸೇಡನ್ನು ತೀರಿಸುವ ಸಲುವಾಗಿ, ಫ್ರೆಂಚರನ್ನು ಕೂಡಿಕೊಂಡು ಇಂಗ್ಲಿಷರೊಡನೆ ಯುದ್ಧವನ್ನು ಪ್ರಾರಂಭಿಸಿದನು. ಯುರೋಪಿನಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ 1778ರಲ್ಲಿ ಯುದ್ಧವು ಆರಂಭವಾಗಲು ಮದ್ರಾಸಿನಿಂದ ಇಂಗ್ಲಿಷ್ ಸೇನೆಯು ಹೈದರ್ ಆಲಿಯ ರಾಜ್ಯದಿಂದ ಹಾದು, ಮಾಹೆಗೆ ಹೋಗಿ ಅದನ್ನು ವಶಪಡಿಸಿಕೊಂಡಿತು. ಇಂಗ್ಲಿಷರು ತನ್ನ ಅನುಮತಿಯಿಲ್ಲದೆ ತನ್ನ ರಾಜ್ಯದಿಂದ ಹಾದುಹೋದರೆಂಬುದೇ, ಹೈದ

ಹೈದರ್ ಆಲಿಯೂ ಇಂಗ್ಲಿಷರೂ

ರನು ಯುದ್ಧಮಾಡಲು ನೆವವಾಯಿತು. ಈ ಯುದ್ಧವಾದರೋ ಬಹು ಭೀಕರವಾಗಿ ನಡೆಯಿತು. ಹೈದರನು ಅಪರಿಮಿತ ಸೇನೆಯಿಂದ ಕೂಡಿ ಕರ್ನಾಟಕದ ಹಳ್ಳಿಗಳನ್ನೆಲ್ಲ ಹಾವಳಿ ಮಾಡಿದನು. ಈ ಸಂದಿಗ್ಧ ಕಾಲದಲ್ಲಿ ವಾರನ್ ಹೇಸ್ಟಿಂಗ್ಸನು ಮಹಾರಾಷ್ಟ್ರಕ್ಕೆ ಸೈನ್ಯಗಳನ್ನು ಕಳುಹಿಸಿದಂತೆ ದಕ್ಷಿಣ ಹಿಂದುದೇಶಕ್ಕೂ ಸೇನೆಯನ್ನು ಕಳುಹಿಸಿದನು. ಈ ಸೇನೆಯು ಪೋರ್ಟೋನೋವೊ ಎಂಬಲ್ಲಿ ಹೈದರಾಲಿಯನ್ನು ಸೋಲಿಸಿತು (1781). ಹೈದರಾಲಿಯು ಇನ್ನೊಮ್ಮೆ ಯುದ್ಧಮಾಡಲು ಸನ್ನಾಹ ಮಾಡುತ್ತಿರುವಾಗಲೇ ಅಕಸ್ಮಾತ್ ಜ್ವರ ಪೀಡಿತನಾಗಿ ಸತ್ತುಹೋದನು.

ಹೈದರನ ಮರಣ ವಾರ್ತೆಯು ಮಹಾರಾಷ್ಟ್ರದಲ್ಲಿ ತಲ್ಪಿದೊಡನೆ ಇನ್ನು ಇಂಗ್ಲಿಷರನ್ನು ಸೋಲಿಸುವುದು ಕಷ್ಟವೆಂದರಿತು ಮರಾಟರು ಇಂಗ್ಲಿಷರೊಡನೆ ಸಂಧಿಗೆ ಒಪ್ಪಿಕೊಂಡರು. ಸಾಲಬಾಯಿಯಲ್ಲಿ ನಡೆದ ಈ ಒಪ್ಪಂದದ ಪ್ರಕಾರ ಉಭಯಪಕ್ಷದವರು ತಾವು ಜಯಿಸಿಕೊಂಡ ಪ್ರದೇಶಗಳನ್ನು ಮರಳಿ ಬಿಟ್ಟುಕೊಡಬೇಕೆಂದೂ ಮಾಧವರಾವ ನಾರಾಯಣನು ಪೇಶ್ವೆಯೆಂದೂ, ನಾನಾಫಡ್ನೀಸನು ಬಾಲ ಪೇಶ್ವರಕ್ಷಕನೆಂದೂ ನಿಶ್ಚಯವಾಯಿತು. ಪೇಶ್ವೆಯು ಬೊಕ್ಕಸದಿಂದ ಇಪ್ಪತ್ತು ಲಕ್ಷ ರೂಪಾಯಿ ವರ್ಷಾಶನವನ್ನು ರಘೋಬನಿಗೆ ಕೊಡಲು ಮರಾಟರು ಒಪ್ಪಿಕೊಂಡರು. ಇಂಗ್ಲಿಷರಿಗೆ ಸಾಲ್ಸೆಟ್ ದ್ವೀಪವು ದೊರಕಿತು.

ಸಾಲಬಾಯಿ ಒಪ್ಪಂದ 1782

ದಕ್ಷಿಣದಲ್ಲಿ ಹೈದರ್ ಅಲಿಯು ಕೈಕೊಂಡ ಈ ಎರಡನೆಯ ಮೈಸೂರು ಯುದ್ಧವನ್ನು ಅವನ ಮಗನಾದ ಟಿಪ್ಪುಸುಲ್ತಾನನು ಕೆಲ ಸಮಯ ಮುಂದುವರಿಸಿದನು. ತಂದೆ ಸತ್ತ ವಾರ್ತೆಯನ್ನು ಕೇಳಿದೊಡನೆ ಟಿಪ್ಪುವು ಶ್ರೀರಂಗಪಟ್ಟಣಕ್ಕೆ ಹೋಗಿ ಬೊಕ್ಕಸವನ್ನು ಸ್ವಾಧೀನಪಡಿಸಿಕೊಂಡು ತಾನೇ ಸುಲ್ತಾನನೆಂದು ಸಾರಿ ಮಂಗಳೂರಿಗೆ ಹೋಗಿ ಅಲ್ಲಿ ಇಂಗ್ಲಿಷರು ವಶಪಡಿಸಿಕೊಂಡ ಕೋಟೆಯನ್ನು ಮರಳಿ ಪಡೆದುಕೊಂಡನು. ಅಷ್ಟರಲ್ಲಿ ಯುರೋಪಿನಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ಒಪ್ಪಂದವಾದುದರಿಂದ ಫ್ರೆಂಚರು ಟಿಪ್ಪುವಿಗೆ ಸಹಾಯಮಾಡುವುದನ್ನು ನಿಲ್ಲಿಸಿದರು. ಹೀಗಾಗಿ 1784ರಲ್ಲಿ ಟಿಪ್ಪುವು ಇಂಗ್ಲಿಷರೊಡನೆ ಮಂಗಳೂರಲ್ಲಿ ಒಪ್ಪಂದ ಮಾಡಿಕೊಂಡನು. ಉಭಯ ಪಕ್ಷದವರು ತಾವು

ಟಿಪ್ಪುಸುಲ್ತಾನನು 1782-1799

ಜಯಿಸಿಕೊಂಡ ಪ್ರದೇಶಗಳನ್ನು ಮರಳಿಕೊಟ್ಟು, ತಮ್ಮಲ್ಲಿದ್ದ ಸೆರೆಯಾಳುಗಳನ್ನು ಬಿಡುಗಡೆಪಡಿಸಿದರು.

ವಾರನ ಹೇಸ್ಟಿಂಗ್ಸನ ಹಣದ ಅಡಚಣಿ

ಹೀಗೆ ಬ್ರಿಟಿಷರಿಗೆ ಒದಗಿದ್ದ ದೊಡ್ಡ ಗಂಡಾಂತರಗಳನ್ನು ವಾರನ ಹೇಸ್ಟಿಂಗ್ಸನು ನಿವಾರಿಸಿ ಹಿಂದುಸ್ಥಾನದಲ್ಲಿ ಇಂಗ್ಲಿಷ್ ಸಾಮ್ರಾಜ್ಯದ ತಳಹದಿಯನ್ನು ಬಲಪಡಿಸಿದನು. ಈ ಯುದ್ಧಗಳಿಂದಾಗಿ ಹೇಸ್ಟಿಂಗ್ಸನಿಗೆ ಹಣದ ಅಡಚಣೆಯು ಉಂಟಾಗಲು ಅವನು ಕಾಶಿಯ ಅರಸನು ತಮಗೆ ಕೊಡುತ್ತಿದ್ದ ಪೊಗದಿಯನ್ನು ಹೆಚ್ಚಿಸಿದನು. ಕಾಶಿಯ ಅರಸನು ಅದನ್ನು ತೆರಲು ನಿರಾಕರಿಸಿದನು. ಹೇಸ್ಟಿಂಗ್ಸನು ಅವನನ್ನು ಪಟ್ಟದಿಂದ ತಳ್ಳಿ ಅವನ ಅಳಿಯನನ್ನು ರಾಜನಾಗಿ ಮಾಡಿ ಅವನಿಂದ ಹೆಚ್ಚಿನ ಪೊಗದಿಯನ್ನು ಪಡೆದನು. ಅಯೋಧ್ಯೆಯ ನವಾಬನು ಇಂಗ್ಲಿಷರಿಗೆ ಕೊಡಬೇಕಾಗಿದ್ದ ಹಣವು ಬಾಕಿಯಿದ್ದಿತು. ವಾರನ ಹೇಸ್ಟಿಂಗ್ಸನು ಅದನ್ನು ಕೇಳಲು, ಮೊದಲಿನ ನವಾಬನ ಹೆಂಡತಿಯೂ ತಾಯಿಯೂ ಹಣವನ್ನು ದೋಚಿರುವರೆಂದೂ, ಅವರಿಂದ ಅದನ್ನು ಪಡೆಯಲು ಅನುಮತಿಯನ್ನೀಯಬೇಕೆಂದೂ ಆತನು ಬಿನ್ನವಿಸಿದನು. ಹೇಸ್ಟಿಂಗ್ಸನು ಆತನ ಅರಿಕೆಯನ್ನು ಸಲ್ಲಿಸಲು ನವಾಬನು ಅವರಿಂದ ಒತ್ತಾಯದಿಂದ ಹಣವನ್ನು ವಸೂಲುಮಾಡಿ ಅದರ ಒಂದಂಶವನ್ನು ಇಂಗ್ಲಿಷರಿಗೆ ಕೊಟ್ಟನು. ಇವೆಲ್ಲ ಕೆಲಸಗಳಿಂದಾಗಿ ವಾರನ ಹೇಸ್ಟಿಂಗ್ಸನು ಜನರ ನಿಂದೆಗೆ ಪಾತ್ರನಾದನು.

ಪಿಟ್ಸ್ ಇಂಡಿಯಾ ಎಕ್ಟ್ 1784

ಆಗ ಇಂಗ್ಲೆಂಡಿನಲ್ಲಿ ಮಂತ್ರಿಯಾಗಿದ್ದ ವಿಲಿಯಮ್ ಪಿಟ್ಟನು ಹಿಂದೂ ದೇಶದ ರಾಜ್ಯಾಂಗದ ಸುಧಾರಣೆಗಾಗಿ "ಪಿಟ್ಸ್ ಇಂಡಿಯಾ ಎಕ್ಟ್" ಎಂಬ ರಾಜಶಾಸನವನ್ನು ಜ್ಯಾರಿಗೆ ತಂದನು. ಈ ಕಾನೂನಿನ ಪ್ರಕಾರ ಎಲ್ಲಾ ಗವರ್ನರರು ಗವರ್ನರ್ ಜನರಲನ ಅಂಕೆಯಲ್ಲಿ ಇರಬೇಕೆಂದೂ ಗವರ್ನರ್ ಜನರಲನ ಸಹಾಯಕ್ಕೆ ಮೂರು ಸಭಾಸದರ ಒಂದು ಸಭೆಯು ಇರತಕ್ಕುದೆಂದೂ ಹಿಂದೂ ದೇಶದಲ್ಲಿ ಯಾವನೊಬ್ಬ ಅರಸನೊಡನೆ ಯುದ್ಧ ಅಥವಾ ಒಪ್ಪಂದವನ್ನು ಮಾಡುವ ಮೊದಲು ಹಿಂದೂದೇಶದ ರಾಜಕೀಯ ವಿಚಾರಗಳ ಮೇಲ್ವಿಚಾರಣೆಗಾಗಿ ಇಂಗ್ಲೆಂಡಿನಲ್ಲಿ ಸ್ಥಾಪಿತವಾದ "ಬೋರ್ಡ್ ಒಫ್ ಕಂಟ್ರೋಲ" ಎಂಬುದರ ಅನುಮತಿಯನ್ನು ಪಡೆಯಬೇಕೆಂದೂ ನಿರ್ಣಯಿಸಲಾಯಿತು. ಈ ಈ ಶಾಸನವು ಜ್ಯಾರಿಗೆ ಬಂದೊಡನೆ ವಾರನ ಹೇಸ್ಟಿಂಗ್ಸನು ತನ್ನ ಹುದ್ದೆಗೆ ರಾಜಿ


ನಾಮೆಯಸ್ನಿತ್ತನು. ಆ ಮೇಲೆ ಲೊರ್ಡ್ ಕೊರ್ನ್‌ವಾಲಿಸನು ಗವರ್ನರ್ ಜನರಲನಾದನು.

ಲೊರ್ಡ್ ಕೊರ್ನ್‌ವಾಲಿಸ (1786-93)-ಲೊರ್ಡ್ ಕೊರ್ನ್‌ವಾಲಿಸನು ಬಂದಾಗ ಭಂಗಾಳದ ಸರಕಾರದಲ್ಲಿ ಕೆಲವು ಸುಧಾರಣೆಗಳು ಅಗತ್ಯವಿದ್ದುವು. ಆಗಿನ ಭೂಕಂದಾಯ ವಸೂಲಿಯ ರೀತಿಯು ಸರಿಯಾಗಿರಲಿಲ್ಲ. ವರ್ಷ ವರ್ಷವೂ ಆಸ್ತಿಗಳನ್ನು ಏಲಂ ಕರೆದು ಜಮೀನುದಾರರಿಗೆ ಕೊಟ್ಟು ಕಂದಾಯ ವಸೂಲುಮಾಡುವ ಪದ್ಧತಿಯಿಂದ ದೇಶಕ್ಕೆ ಬಹಳ ಹಾನಿಯುಂಟಾಗುತಿತ್ತು. ರೈತರಿಗೂ ತೊಂದರೆಗಳಾಗುತಿದ್ದುವು. ಕೊರ್ನ್‌ವಾಲಿಸನು ಇದಕ್ಕಾಗಿ ಆಸ್ತಿಗಳ ಕಂದಾಯ ವಸೂಲು ಮಾಡಲು ಅಧಿಕಾರ ಹೊಂದಿದ ಜಮೀನುದಾರರಿಗೇ ಆಸ್ತಿಗಳನ್ನು ಶಾಶ್ವತವಾಗಿ ಕೊಟ್ಟು ಅವರು ಸರಕಾರಕ್ಕೆ ಇಂತಿಷ್ಟೆ ಕಂದಾಯವನ್ನು ಕೊಡಬೇಕೆಂದು ನಿರ್ಣಯಿಸಿದನು (1793). ಇದರಿಂದ ಜಮೀನುದಾರರಿಗೆ ತಾವು ವಹಿಸಿಕೊಂಡ ಆಸ್ತಿಗಳನ್ನು ಊರ್ಜಿತಗೊಳಿಸಲು ಅನುಕೂಲತೆಯೊದಗಿತು. ಆಗ ನಿಶ್ಚಯಿಸಿದ ತೆರಿಗೆಯನ್ನೇ ಈಗಲೂ ಬಂಗಾಳದ ಜಮೀನುದಾರರು ತೆರುತಿದ್ದಾರೆ. ತೆರಿಗೆಯನ್ನು ವಸೂಲು ಕೊಡದಿದ್ದರೆ ಅವರ ಆಸ್ತಿಗಳು ಏಲಂ ಆಗಿ ಇತರರಿಗೆ ಸೇರುವುವು.

ಪರ್ಮನೆಂಟ್ ಸೆಟ್ಲ್‌ಮೆಂಟ್

ಕೊರ್ನ್‌ವಾಲಿಸನ ಕಾಲದಲ್ಲಿ ಇಂಗ್ಲಿಷರಿಗೂ ಟಿಪ್ಪುವಿಗೂ ಇನ್ನೊಮ್ಮೆ ಯುದ್ಧ ನಡೆಯಿತು. ಮಂಗಳೂರಿನ ಒಪ್ಪಂದವಾದಂದಿನಿಂದ ಟಿಪ್ಪುವು ತನ್ನ ರಾಜ್ಯವನ್ನು ಬಲಪಡಿಸುತ್ತಲೇ ಇದ್ದನು. ಇದರಿಂದ ಟಿಪ್ಪುವಿನ ರಾಜ್ಯದ ಸುತ್ತಲಿನ ಅರಸರೆಲ್ಲ ಜಾಗರೂಕರಾಗಿಯೇ ಇದ್ದರು. 1789ರಲ್ಲಿ ಟಿಪ್ಪುವು ತಿರುವಾಂಕೂರು ರಾಜ್ಯಕ್ಕೆ ನುಗ್ಗಿದನು. ತಿರುವಾಂಕೂರಿನ ಅರಸನು ಇಂಗ್ಲಿಷರ ಸಹಾಯವನ್ನು ಬೇಡಿದನು. ಕೊರ್ನ್‌ವಾಲಿಸನು ಮರಾಟರನ್ನೂ ನಿಜಾಮನನ್ನೂ ಒಡಗೊಂಡು ಟಿಪ್ಪುವಿನೊಡನೆ ಯುದ್ಧವನ್ನು ಹೂಡಿ ಮೈಸೂರನ್ನು ಪ್ರವೇಶಿಸಿ ಟಿಪ್ಪುವು ಯುದ್ಧಸನ್ನದ್ಧನಾಗುವುದರೊಳಗೆ ಶ್ರೀರಂಗ ಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆಕಸ್ಮಾತ್ ಬೆದರಿದ ಟಿಪ್ಪುವು ಒಪ್ಪಂದಕ್ಕೆ ಒಪ್ಪಿಕೊಂಡನು. ಹೀಗೆ 1792ರಲ್ಲಿ ಆದ ಶ್ರೀರಂಗಪಟ್ಟಣದ ಒಪ್ಪಂದದಂತೆ ಟಿಪ್ಪುವು ಯುದ್ಧದ ಖರ್ಚು 330 ಲಕ್ಷರೂಪಾಯಿಯನ್ನೂ ತನ್ನ

ಟಿಪ್ಪುವಿನೊಡನೆ ಯುದ್ಧ 1790-92


-ಹಿಂದೂದೇಶ-
1795
ಇಂಗ್ಲಿಷರ ರಾಜ್ಯ
ಆಶ್ರಿತ ರಾಜ್ಯ
ಸ್ವತಂತ್ರ ರಾಜ್ಯ
ಟಿಬೆಟ್
ಕಂದಹಾರ
ಪಂಜಾಬ
ಮುಲ್ತಾನ
ಬಂಗಾಳ
ಗೋವೆ
ಮದರಾಸು
ಮಂಗಳೂರು
ಕೊಚ್ಚಿ
ಅರಬ
ಸಮುದ್ರ
ಬಂಗಾಳ
ಆಖಾತ

ಅರ್ಧ ರಾಜ್ಯವನ್ನು ಎದುರಾಳಿಗಳಿಗೆ ಕೊಡಬೇಕಾಯಿತು. ಇಂಗ್ಲಿಷರು ಸಿಕ್ಕಿದ ರಾಜ್ಯದ ಮೂರು ಭಾಗಗಳನ್ನಾಗಿ ಮಾಡಿ ಸೇಲಂ, ಮಲಬಾರು ಮತ್ತು ದಿಂಡಿಗಲ್ ಜಿಲ್ಲೆಗಳನ್ನು ತಮಗಾಗಿ ಇಟ್ಟುಕೊಂಡರು. ಕೊಡಗನ್ನು ವಿಂಗಡಿಸಿ ಸ್ವತಂತ್ರ ರಾಜ್ಯವನ್ನಾಗಿ ಮಾಡಿದರು. ಉಳಿದವುಗಳನ್ನು ನಿಜಾಮನಿಗೂ ಮರಾಟರಿಗೂ ಹಂಚಿಕೊಟ್ಟರು. ಈ ಯುದ್ಧದಿಂದಾಗಿ ಟಿಪ್ಪುವಿನ ಅಧಿಕಾರವು ಬಹಳ ಕಡಿಮೆಯಾಯಿತು.

ಮರಾಟರು ನಿಜಾಮನನ್ನು ಸೋಲಿಸಿದುದು

ಆ ಮೇಲೆ ಎರಡೇ ವರ್ಷಗಳಲ್ಲಿ ಮರಾಟರಿಗೂ ನಿಜಾಮನಿಗೂ ಯುದ್ಧವಾಯಿತು. ಕೊನೆಯ ಸಲಕ್ಕೆ ಎಲ್ಲ ಮರಾಟ ಸರದಾರರೂ ಒಟ್ಟಾಗಿ ನಿಜಾಮನ ರಾಜ್ಯವನ್ನು ಹೊಕ್ಕು ಖರ್ದಾ ಎಂಬಲ್ಲಿ ಅತನನ್ನು ಸಂಪೂರ್ಣ ಸೋಲಿಸಿಬಿಟ್ಟರು (1795). ನಿಜಾಮನು ಮರಾಟರಿಗೆ ಹೇರಳ ಹಣವನ್ನು ಕೊಡಬೇಕಾದುದಲ್ಲದೆ ತನ್ನ ರಾಜ್ಯದಿಂದ ಕೆಲವು ಜಿಲ್ಲೆಗಳನ್ನು ಅವರಿಗೆ ಕೊಡಬೇಕಾಯಿತು. ಮರಾಟರ ಪ್ರಾಬಲ್ಯವು ಇದರಿಂದ ಹೆಚ್ಚಿತು. ನಿಜಾಮನು ಇಂಗ್ಲಿಷರ ಸಹಾಯವನ್ನು ಬೇಡಿದರೂ ಇಂಗ್ಲಿಷರು ಆತನಿಗೆ ಒತ್ತಾಸೆ ಮಾಡದಿದ್ದುದರಿಂದ ನಿರಾಶನಾಗಿ ಫ್ರೆಂಚರಿಂದ ತರಬೇತಾದ ಸೈನ್ಯವನ್ನು ಇಟ್ಟುಕೊಳ್ಳಲಾರಂಭಿಸಿದನು. ಆಗಿನ ಗವರ್ನರ್ ಜನರಲನಾಗಿದ್ದ ಸರ್ ಜೊನ್ ಶೋರನು ಹಿಂದೂದೇಶದ ರಾಜಕೀಯ ವ್ಯವಹಾರಗಳಲ್ಲಿ ಕೈಹಾಕುವುದಿಲ್ಲವೆಂದೇ ನಿಶ್ಚಯಿಸಿದ್ದನು. ಹೀಗಾಗಿ ಫ್ರೆಂಚ್ ಅಧಿಕಾರಿಗಳು ಎಲ್ಲ ಹಿಂದೀ ಅರಸರ ಆಸ್ಥಾನಗಳಲ್ಲಿಯೂ ಸೇನೆಗಳಲ್ಲಿಯೂ ದೊಡ್ಡ ದೊಡ್ಡ ಪದವಿಗಳನ್ನು ಪಡೆದು, ಅವರಿಗೆ ಸಹಾಯವನ್ನು ಮಾಡುತ್ತ ಕೀರ್ತಿವಂತರಾದರು.

---

16. ಇಂಗ್ಲಿಷ್ ರಾಜ್ಯದ ಅಭಿವೃದ್ಧಿ

ಲೊರ್ಡ್ ವೆಲ್ಲೆಸ್ಲಿ (1798–1805)–1798ರಲ್ಲಿ ಲೊರ್ಡ್ ವೆಲ್ಲೆಸ್ಲಿಯು ಗವರ್ನರ್ ಜನರಲನಾದನು. ಹಿಂದೂದೇಶದಲ್ಲಿ ಉಂಟಾಗುತ್ತಿದ್ದ

ಧೋರಣ

ಗೊಂದಲಗಳನ್ನು ನಿವಾರಿಸಲಿಕ್ಕೆ ಇಂಗ್ಲಿಷರು ಮಾತ್ರ ಶಕ್ತರೆಂದೂ, ಅದಕ್ಕಾಗಿ ಇಂಗ್ಲಿಷರೇ ಹೆಚ್ಚು ಕಡಿಮೆ ಎಲ್ಲ ಪ್ರದೇಶಗಳನ್ನು ಜಯಿಸಿಕೊಂಡು ಈ ದೇಶದ ಅರಸರನ್ನೂ ನವಾಬರನ್ನೂ

ತಮ್ಮ ಅಂಕೆಯಲ್ಲಿಟ್ಟುಕೊಂಡು, ಅವರು ಪರಸ್ಪರ ಕಾದಾಡದಂತೆ ನೋಡಿಕೊಳ್ಳುವುದು ಯುಕ್ತವೆಂದೂ ಅವನಿಗೆ ತೋರಿತು. ಹಾಗೆ ಮಾಡದಿದ್ದರೆ ಹಿಂದೂದೇಶದಲ್ಲಿ ಶಾಂತಿಸ್ಥಾಪನೆಯಾಗಲಾರದೆಂದು ಅವನು ಮನಗಂಡುದರಿಂದ, ಇಂಗ್ಲಿಷರ ಅಧಿಕಾರವನ್ನು ಹೆಚ್ಚಿಸಲು ಅವನು ಪ್ರಯತ್ನಿಸಿದನು.

ಆ ಕಾಲದಲ್ಲಿ ಯುರೋಪಿನಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ಯುದ್ಧವು ನಡೆಯುತಿದ್ದಿತು. ಆಗ ಹಿಂದೂದೇಶದ ಅನೇಕ ಅರಸರ ಆಸ್ಥಾನಗಳಲ್ಲಿ ಫ್ರೆಂಚ್ ಅಧಿಕಾರಿಗಳಿದ್ದರು. ಅವರ ಪ್ರೇರಣೆಯಿಂದ ಹಿಂದೀ ಅರಸರು ತಮ್ಮ ಮೇಲೆ ಬೀಳಬಹುದೆಂದು ಇಂಗ್ಲಿಷರು ಹೆದರಿದರು. ಅದಕ್ಕಾಗಿ ಫ್ರೆಂಚ್ ಅಧಿಕಾರಿಗಳನ್ನು ಓಡಿಸಿ ಹಿಂದೀ ಅರಸರನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಲು ವೆಲ್ಲೆಸ್ಲಿಯು ಪ್ರಯತ್ನಿಸಿದನು.


ಸೈನ್ಯ ಸಹಾಯ ಮೈತ್ರಿ


ಮೊದಲಾಗಿ ವೆಲ್ಲೆಸ್ಲಿಯು ನಿಜಾಮನಿಗೆ ಒಂದು ಪತ್ರವನ್ನು ಬರೆದನು. ತನ್ನ ಆಸ್ಥಾನದಿಂದ ಫ್ರೆಂಚರನ್ನು ಓಡಿಸಿ, ಒಂದು ಇಂಗ್ಲಿಷ್ ಸೈನ್ಯವನ್ನಿಟ್ಟುಕೊಂಡು ಅದರ ವೆಚ್ಚವನ್ನು ಅವನೇ ವಹಿಸಿಕೊಳ್ಳಬೇಕೆಂದೂ, ಇಂಗ್ಲಿಷರ ಅಪ್ಪಣೆಯು ವಿನಹ ಆತನು ಬೇರಾವ ಅರಸನೊಡನೆಯೂ ಯುದ್ಧ ಅಥವಾ ಒಪ್ಪಂದಗಳನ್ನು ಮಾಡಬಾರದೆಂದೂ, ಅವನು ಇಂಗ್ಲಿಷರ ಅಧೀನನಾಗಿರಬೇಕೆಂದೂ ಪತ್ರದಲ್ಲಿದ್ದಿತು. ಈ ಪದ್ಧತಿಗೆ ಸೈನ್ಯ ಸಹಾಯ ಮೈತ್ರಿ ಎಂದು ಹೇಳುತ್ತಾರೆ. ನಿಜಾಮನು ಮರಾಟರ ಹೆದರಿಕೆಯಿಂದ ಪಾರಾಗಲು ಈ ಪದ್ಧತಿಗೆ ಒಪ್ಪಿಗೆಯನ್ನಿತ್ತು ಇಂಗ್ಲಿಷರ ಆಶ್ರಿತನಾದನು.

ಟಿಪ್ಪುಸುಲ್ತಾನನು ಫ್ರೆಂಚರನ್ನು ಕೂಡಿಕೊಂಡು ಇಂಗ್ಲಿಷರ ವಿರುದ್ಧವಾಗಿ ಒಳಸಂಚು ನಡೆಸುತ್ತಿರುವನೆಂಬ ಸಂಶಯದಿಂದ ವೆಲ್ಲೆಸ್ಲಿಯು ಸೈನ್ಯ ಸಹಾಯ ಮೈತ್ರಿಗೆ ಒಪ್ಪಿಕೊಳ್ಳಬೇಕೆಂದು ಅವನಿಗೂ ತಿಳಿಸಿದನು. ಟಿಪ್ಪುವು ಅದಕ್ಕೊಪ್ಪಲಿಲ್ಲ.

ಮೈಸೂರು ಯುದ್ಧ

ಒಡನೆ ವೆಲ್ಲೆಸ್ಲಿಯು ಮರಾಟರನ್ನೂ ನಿಜಾಮನನ್ನೂ ಕೂಡಿಕೊಂಡು ಟಿಪ್ಪುವಿನೊಡನೆ ಯುದ್ಧವನ್ನು ಹೂಡಿದನು. ಲೊರ್ಡ್ ವೆಲ್ಲೆಸ್ಲಿಯು ತಮ್ಮನಾದ ಸರ್ ಆರ್ಥರ್ ವೆಲ್ಲೆಸ್ಲಿಯು ಸೇನಾಧಿಪತಿಯಾಗಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಈ ಯುದ್ಧದಲ್ಲಿ ಕೋಟೆಯು ಇಂಗ್ಲಿಷರ ವಶವಾಯಿತು. ಟಿಪ್ಪುವು ಮಡಿದನು. ಇಂಗ್ಲಿಷರು ಮೈಸೂರು ರಾಜ್ಯವನ್ನು ಚಿಕ್ಕದು ಮಾಡಿ ಹಿಂದಿನ ಹಿಂದೂ ರಾಜವಂಶದ ಒಬ್ಬ ಬಾಲಕನಿಗೆ ಪಟ್ಟಕಟ್ಟಿ, ಅವನು ಪ್ರಾಯಕ್ಕೆ





ಒರುವ ತನಕ ರಾಜ್ಯವನ್ನಾಳಲು ರಾಜ್ಯರಕ್ಷಣಾ ಸಮಿತಿಯೊಂದನ್ನು ನೇಮಿಸಿದನು. ಉಳಿದ ಭಾಗಗಳಲ್ಲಿ ಇಂಗ್ಲಿಷರಿಗೆ ದಕ್ಷಿಣ ಉತ್ತರ ಕನ್ನಡ ಜಿಲ್ಲೆಗಳೂ, ನೀಲಗಿರಿ ಕೊಯಮುತ್ತೂರು ಜಿಲ್ಲೆಗಳೂ ದೊರಕಿದುವು. ಈಶಾನ್ಯದ ಪ್ರದೇಶಗಳು ನಿಜಾಮನಿಗೆ ದೊರೆತುವು.


ನಿಜಾಮನು ಇಂಗ್ಲಿಷರಿಗೆ ತಾನು ಸೈನ್ಯದ ವೆಚ್ಚಕ್ಕಾಗಿ ಕೊಡಬೇಕಾಗಿದ್ದ ಹಣದ ಬದಲು, ಮೈಸೂರು ಯುದ್ಧಗಳಿಂದ ದೊರೆತ ಬಳ್ಳಾರಿ, ಕಡಪಾ' ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳನ್ನು ಅವರಿಗೆ ಕೊಟ್ಟುಬಿಟ್ಟನು. ಈ ಜಿಲ್ಲೆಗಳನ್ನು ದತ್ತಮಂಡಲ ಸೀಮೆ (Ceded districts) ಎಂದು ಕರೆಯುತ್ತಾರೆ. 1801ರಲ್ಲಿ ಆರ್ಕಾಟಿನ ನವಾಬನು ಸಾಯಲು ಅವನ ಉತ್ತರಾಧಿಕಾರಿಗೆ ನವಾಬನೆಂಬ ಬಿರುದನ್ನು ಮಾತ್ರ ಇರಿಸಿ ವರ್ಷಾಶನವನ್ನು ನಿಶ್ಚಯಿಸಿ ಅವನ ರಾಜ್ಯವನ್ನು ಇಂಗ್ಲಿಷರು ಸ್ವಾಧೀನಪಡಿಸಿಕೊಂಡರು. ಅಂತೆಯೇ ತಂಜಾವೂರನ್ನೂ ಪಡೆದುಕೊಂಡು ಈಗಿನ ಮದ್ರಾಸು ಆಧಿಪತ್ಯವನ್ನು ಪೂರ್ಣಗೊಳಿಸಿದರು. ಅಯೋಧ್ಯೆಯ ನವಾಬನನ್ನು ಸೈನ್ಯಸಹಾಯ ಮೈತ್ರಿಗೆ ಒಪ್ಪುವಂತೆ ಮಾಡಿ ಅವನ ರಾಜ್ಯದ ಅರ್ಧ ಭಾಗವನ್ನು ಇಂಗ್ಲಿಷ್ ರಾಜ್ಯಕ್ಕೆ ಸೇರಿಸಲಾಯಿತು.

ಮಹಾರಾಷ್ಟ್ರ ಸಾಮ್ರಾಜ್ಯದ ವ್ಯವಹಾರಗಳಲ್ಲಿ ಕೈಹಾಕುವ ಪ್ರಸಂಗವೂ ವೆಲ್ಲೆಸ್ಲಿಗೆ ಬಂದೊದಗಿತು. 1800ರಲ್ಲಿ ನಾನಾ ಫಡ್ನಿಸನು ಸಾಯಲು ಎಲ್ಲ ಸರದಾರರನ್ನು ಅಂಕೆಯಲ್ಲಿಟ್ಟುಕೊಳ್ಳಲು ಸಮರ್ಥನಾದವನಾರೂ ಮಹಾರಾಷ್ಟ್ರದಲ್ಲಿ ತೋರಿಬರಲಿಲ್ಲ. ಪೇಶ್ವೆಯಾಗಿದ್ದ ಬಾಜಿರಾಯನೂ ರಾಜ್ಯಭಾರಮಾಡಲು ಅಸಮರ್ಥನಾಗಿದ್ದನು. ಮರಾಟರಾಜರು ಒಬ್ಬರೊಡನೊಬ್ಬರು ಜಗಳವಾಡಲಾರಂಭಿಸಿದರು. ಅವರಲ್ಲಿ ಸಿಂಧ್ಯ ಮತ್ತು ಹೋಳ್ಕರರೊಳಗಿನ ವೈಶಮ್ಯವು ಒಂದೇ ಸಮನೆ ಬೆಳೆದು ಯುದ್ಧದಲ್ಲಿ ಪರ್ಯವಸಾಯಿಯಾಯಿತು. ಬಾಜಿರಾಯನು ಸಿಂಧ್ಯನ ಪಕ್ಷವನ್ನು ವಹಿಸಿದನು. ಇದನ್ನು ನೋಡಿ ಸಿಟ್ಟಾಗಿ ಹೋಳ್ಕರನು ಪೂನೆಯ ಕಡೆಗೆ ದಂಡೆತ್ತಿ ಬಂದು ಸಿಂಧ್ಯನನ್ನೂ ಪೇಶ್ವೆಯನ್ನೂ ಸೋಲಿಸಿ, ಪೂನಾ ಪಟ್ಟಣವನ್ನು ವಶಪಡಿಸಿಕೊಂಡು ಸೂರೆಮಾಡಿದನು. ಬಾಜಿರಾಯನು ಬೆಸ್ಸಿನಿಗೆ ಪಲಾಯನ ಮಾಡಿ ಇಂಗ್ಲಿಷರ ಮರೆಹೊಕ್ಕು ಸೈನ್ಯಸಹಾಯ ಮೈತ್ರಿಗೆ ಒಪ್ಪಿಕೊಂಡನು. ಮರಾಟ ಸಾಮ್ರಾಜ್ಯದ ಮಕುಟಮಣಿಯಂತಿದ್ದ ಬಾಜಿರಾಯನ

ಮರಾಟರೊಡನೆ ಯುದ್ಧ

ಆಶ್ರಿತರಾಜನಾದುದು ಇಡೀ ಮಹಾರಾಷ್ಟ್ರಕ್ಕೆ ಅಪಮಾನಕರವಲ್ಲವೇ? ಒಡನೆ ಸಿಂಧ್ಯ ಮತ್ತು ಭೊನ್ಸ್ಲೆಯರು ಇಂಗ್ಲಿಷರೊಡನೆ ಯುದ್ಧಕ್ಕೆ ಸಿದ್ಧರಾದರು. ಇಂಗ್ಲಿಷರು ಪೂನೆಗೆ ಬಂದು ಬಾಜಿರಾಯನನ್ನು ಪೇಶ್ವೆಯಾಗಿ ಮಾಡಿದರು. ಆಗಲೆ ಯುದ್ಧಕ್ಕೆ ಆರಂಭವಾಯಿತು.


ಮಹಾರಾಷ್ಟ್ರಕ್ಕೆ ಇಂಗ್ಲಿಷರ ಎರಡು ಸೈನ್ಯಗಳು ಹೊರಟು, ಒಂದು ಮುಂಬಾಯಿಯಿಂದ ಸರ್ ಆರ್ಥರ್ ವೆಲ್ಲೆಸ್ಲಿಯ ಕೈಕೆಳಗೂ ಇನ್ನೊಂದು ಕಾನ್ಪುರದಿಂದ ಜನರಲ್ ಲೇಕನ ಕೈಕೆಳಗೂ ಬಂದುವು.



ಮರಾಟರ ದರ್ಬಾರು (1790)

ವೆಲ್ಲೆಸ್ಲಿಯು ಸಿಂಧ್ಯನ ಮತ್ತು ಭೊನ್ಸ್ಲೆಯ ಸೈನ್ಯಗಳನ್ನು ಅಸಾಯಿ (1803) ಎಂಬಲ್ಲಿ ಸೋಲಿಸಿದನು. ಪುನಃ ಭೊನ್ಸ್ಲೆಯು ಅರಗಾಂವಿನಲ್ಲಿ ಸೋತು ಒಪ್ಪಂದಕ್ಕೆ ಬಂದನು. ಅವನು ಒರಿಸ್ಸವನ್ನು ಇಂಗ್ಲಿಷರಿಗೂ ಬೀರಾರನ್ನು ನಿಜಾಮನಿಗೂ ಅರ್ಪಿಸಿ ಸೈನ್ಯ ಸಹಾಯ ಮೈತ್ರಿಗೆ ಒಪ್ಪಿದನು. ಇತ್ತ ಜನರಲ್ ಲೇಕನು ಸಿಂಧ್ಯನಿಂದ ಆಗ್ರಾ ಢಿಲ್ಲಿ ಪಟ್ಟಣಗಳನ್ನು ವಶಪಡಿಸಿಕೊಂಡು ಲಾಸ್ವಾರಿಯಲ್ಲಿ

ಸಿಂಧ್ಯ ಭೊನ್ಸ್ಲೆಯರ ಪರಾಜಯ


ಹಿಂದೂದೇಶ
1805
ಇಂಗ್ಲಿಷರ ರಾಜ್ಯ
ಆಶ್ರಿತ ರಾಜ್ಯ
ಸ್ವತಂತ್ರ ರಾಜ್ಯ
ರಜಪೂತರು
ಬಿಹಾರ
ಬಂಗಾಳ
ಸಿಂಧ್ಯ
ನಾಗಪುರ
ಸುರತು
ಹೈದರಾಬಾದು
ಗೋವೆ
ಮದರಾಸು
ಪಾಂಡಿಚೇರಿ
ಮಂಗಳೂರು
ಬಳ್ಳಾರಿ

ಅವನನ್ನು ಸೋಲಿಸಿ, ಅವನನ್ನು ಒಪ್ಪಂದಕ್ಕೆ ಬರುವಂತೆ ಮಾಡಿದನು. ಸಿಂಧ್ಯ
ಇಂಗ್ಲೀಷರಿಗೆ ಸೇರಿದ ಮಹಾಯುದ್ಧ ಸೋಲಿನ ಸಮಯದ ಪ್ರದೇಶವನ್ನು ಬಿ
ಕವನ್ನು ಕೃಷ್ಣನದಿಯ ದಕ್ಷಿಣಕ್ಕೆ ಬಿಟ್ಟುಕೊಟ್ಟನು.

ಅದುವರೆಗೆ ಸುಮ್ಮನಿದ್ದ ಹೋಳ್ಕರನು ಇನ್ನು ತನ್ನ ಸ್ವಾತಂತ್ರ್ಯಕ್ಕೆ ಭಂಗ
ಬರುವುದೆಂದು ಭಯಪಟ್ಟು ಇಂಗ್ಲೀಷರೊಡನೆ ಯುದ್ಧವನ್ನು ಹೂಡಿದನು (೧೮೦೪

ಹೋಳ್ಕರನು

ಇಂಗ್ಲೀಷರು ಅವನನ್ನು ಹಲವು ಯುದ್ಧಗಳಲ್ಲಿ ಸೋಲಿಸಿ
ದರೂ ಸೋಲಿಸಲಾರದಾದರು. ವೆಲ್ಲೆಸ್ಲಿಯು ಅಧಿಕಾರದಿಂದ ನಿ
ವೃತ್ತನಾದ ನಂತರ ಬಂದ ಗವರ್ನರ್ ಜನರಲರು ಹೋಳ್ಕರನೊಡನೆ
ಒಪ್ಪಂದ ಮಾಡಿಕೊಂಡು, ಅವನು ಇಂಗ್ಲೀಷರಿಗೆ ವಿಧೇಯನಾ
ಗಿರಬೇಕೆಂದು ಆಜ್ಞಾಪಿಸಿದನು.

ಈ ರೀತಿಯಲ್ಲಿ ವೆಲ್ಲೆಸ್ಲಿಯು ಮರಾಠಾ ಸಾಮ್ರಾಜ್ಯವನ್ನು ಮುರಿದು
ಇಂಗ್ಲೀಷ್ ಸಾಮ್ರಾಜ್ಯವನ್ನು ಬೆಳಸಿದನು. ಮರಾಠರಲ್ಲಿದ್ದ ಒಗ್ಗಟ್ಟು ಅವನ
ಇಂಗ್ಲೀಷರಿಗೆ ಅತ್ಯುಪಯೋಗವಾಯಿತು. ಅವನ ಕಾಲದಿಂದ ಹಿಂದುಸ್ಥಾನ
ಸಾರ್ವಭೌಮತ್ವವು ಮರಾಠರ ಕೈಯಿಂದ ತಪ್ಪಿ ಇಂಗ್ಲೀಷರಿಗೆ ಸೇರಿ
ದಿಲ್ಲಿ ಆಗ್ರಾ ಪಟ್ಟಣಗಳು ಇಂಗ್ಲೀಷರ ವಶವಾಯಿತು.

ಶಾಂತಿಯ ಕಾಲ.—೧೮೦೫ರಿಂದ ೧೮೧೩ರವರೆಗೆ ಅಧಿಕಾರದಲ್ಲಿದ್ದ
ಜನರಲರು ಈ ದೇಶದಲ್ಲಿ ಯಾವ ಯುದ್ಧದಲ್ಲಿಯೂ ಭಾಗವಹಿಸ
ಯುರೋಪಿನಲ್ಲಿ ಇಂಗ್ಲೀಷರು ನೆಪೋಲಿಯನನೊಡನೆ ಕಠೋರ ಯುದ್ಧ
ನಿರತರಾಗಿದ್ದರು. ಹಿಂದುಸ್ಥಾನದಲ್ಲಿ ಶಾಂತಿ ಸ್ಥಾಪನೆಯನ್ನು ಕಾಪಾಡಿ
ಕೊಳ್ಳುವುದೇ ಇಲ್ಲಿನ ಅಧಿಕಾರಿಗಳ ಮುಖ್ಯ ಕರ್ತವ್ಯವೆಂದು ಅ
ತಿಳಿದುಕೊಂಡಿದ್ದರು.

ಆದರೆ, ಪಂಜಾಬ್ ನಾಡು ಉತ್ತರಕ್ಕೆ ಪಂಜಾಬಿನಲ್ಲಿ ಸಿಕ್ಕರು ಪ್ರಬಲ
ರಾಗುತ್ತ ಇದ್ದರು. ಮಹಾರಾಜ ರಣಜಿತ್‌ಸಿಂಗನು ಮುಲ್ತಾನ,


ಸಿಕ್ಕರ ರಾಜ್ಯವಿಸ್ತಾರ

ಕಾಶ್ಮೀರ ಪೇಶಾವರ ಮೊದಲಾದ ಪ್ರದೇಶಗಳನ್ನು
ಗೆದ್ದುಕೊಂಡಿದ್ದನು. ಅವನೊಡನೆ ಪ್ರಬಲ
ಸೈನ್ಯವಿತ್ತು. ೧೮೦೯ರಲ್ಲಿ ಅವನು ಇಂಗ್ಲೀಷರೊಡನೆ ಒಪ್ಪಂದಮಾಡಿ
ಮಿತ್ರನಾಗಿರಲು ಒಪ್ಪಿಕೊಂಡನು.

ಲಾರ್ಡ್ ಹೇಸ್ಟಿಂಗ್ಸ್ (1813-23)—1813ರಲ್ಲಿ ಲಾರ್ಡ್ ಸ್ಟಿಂಗ್ಸನು ಗವರ್ನರ್ ಜನರಲನಾದನು. ಇವನಿಗೆ ದೇಶೀಯರು ಧೋರಣೆ ಗಮನಾರ್ಹವಾಗಿ ತಾನೂ ಪರಿಗಣಿಸಿಕೊಂಡು ಮುನ್ನುಗ್ಗಿದ. ಮುಖ್ಯವಾಗಿ ಮಧ್ಯ ಹಿಂದೂದೇಶದಲ್ಲಿನ ಮರಾಠರ ಪ್ರಾಬಲ್ಯವನ್ನು ತಗ್ಗಿಸಿ ಇಂಗ್ಲಿಷರನ್ನು ಸರ್ವೋಚ್ಚರ ಗಿ ಮಾಡಬೇಕೆಂದು ಇವನು ನಿಶ್ಚಯಿಸಿದನು. ಮೊದಲನೆಯದಾಗಿ ನೇಪಾ ಅವರೊಡನೆ ಯುದ್ಧಮಾಡುವ ಪ್ರಸಂಗವು ಇವನಿಗೆ ಒದಗಿತು. ಇವನು ವರ್ಷಗಳೊಳಗೆ ನೇಪಾಳದ ಬಲಿಷ್ಠ ಸೈನಿಕರಾದ ಗೂರ್ಖರನ್ನು ಸೋಲಿಸಿ, ಪಾಳ ಅರಸನಿಂದ ಸಿಮ್ಲಾ, ನೈನಿತಾಲ, ಮುಸ್ಸೂರಿ ಮುಂತಾದ ಭಾಗಗಳ ಳ ಗಢವಾಲ್ ಜಿಲ್ಲೆಯನ್ನು ಪಡೆದು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಳೆಗೆ ಮಧ್ಯ ಹಿಂದೂದೇಶದಲ್ಲಿ ಬಹಳ ಹಾವಳಿಯನ್ನುಂಟುಮಾಡುತ್ತಿದ್ದ ರಿಗಳೆಂಬ ಸುಲಿಗೆಮಾಡುವ ಸೈನಿಕರ ಗುಂಪುಗಳ ತುಟ್ಟನ್ನು ಅವನಿ ನು. ಅವನಿಗೆ ಮರಾಠರ ಬೆಂಬಲವಿದ್ದುದರಿಂದ ಮರಾಠರೊಡನೆ ಅವನು ದ್ಧ ಮಾಡಬೇಕಾಗಿ ಬಂದಿತು.

ಮರಾಠರ ಸ್ವಾತಂತ್ರ್ಯ ವಿನಾಶ

ಬಾಜಿರಾಯನು ಸೈನ್ಯಸಹಾಯ ಮೈತ್ರಿಗೆ ಒಪ್ಪಿಕೊಂಡಿದ್ದರೂ, ಇಂಗ್ಲಿಷ ಈ ದೇಶದಿಂದ ಅಟ್ಟಿಬಿಟ್ಟು ಹೇಗೆ ಸ್ವತಂತ್ರನಾಗಬಹುದು ಎಂದು ಒಳಗಿಂದೊಳಗೇ ಯೋಚಿಸುತ್ತಿದ್ದನು. ಈ ಒಳಸಂಚಿನಲ್ಲಿ ಅವನಿಗೆ ಹೋಳ್ಕರನೂ ಭೋನ್ಸ್ಲೆಯೂ ಸಹಾಯಮಾಡು ವುದು ಖಂಡಿತವಾಗಿತ್ತು. ಈ ಗುಟ್ಟು ಹೇಗೋ ಇಂಗ್ಲಿಷ ತಿಳಿಯಿತು. ಒಡನೆ ಅವರು ಪೇಶ್ವೆಯನ್ನು ಹೆಚ್ಚಿನ ನಿರ್ಬಂಧಗಳಿಗೊಳಗಾಗಿ ರು. ಅದನ್ನು ಸಹಿಸಲಾರದೆ ಪೇಶ್ವೆಯು 1817ರಲ್ಲಿ ದಂಗೆ ಎದ್ದನು. ಷರು ಅವನನ್ನು ಸೋಲಿಸಿ, ಅವನ ರಾಜ್ಯವನ್ನು ತಮ್ಮ ಸಾಮ್ರಾಜ್ಯಕ್ಕೆ ಸಿ, ಅವನಿಗೆ ಮಾಸಾಶನವನ್ನು ಕೊಡಲು ನಿಶ್ಚಯಿಸಿ, ಅವನನ್ನು ರಿಗೆ ಕಳುಹಿಸಿಕೊಟ್ಟರು. ಅತ್ತ ಭೋನ್ಸ್ಲೆಯೂ ದಂಗೆ ಏಳಲು, ಇಂಗ್ಲಿ ಅವನನ್ನು ಸೋಲಿಸಿದರು. ಮಹೀದಪುರ ಎಂಬಲ್ಲಿ ಹೋಳ್ಕರನನ್ನು ಲಿಸಿದರು. ಇದರಿಂದ ದೊರೆತ ನರ್ಮದಾ ನದಿಯ ಪ್ರದೇಶವನ್ನು ರೇ ಇಟ್ಟುಕೊಂಡರು. ಅಲ್ಲದೆ, ರಜಪುತಾನದ ಎಲ್ಲ ಅರಸರನ್ನು ಠರ ಅಧಿಕಾರದಿಂದ ತಪ್ಪಿಸಿ ಇಂಗ್ಲಿಷರು ತಮ್ಮ ಆಶ್ರಿತರನ್ನಾಗಿ ಮಾಡಿದರು.


ಹಿಂದೂದೇಶ
-1823-
ಇಂಗ್ಲಿಷರ ರಾಜ್ಯ
ಸ್ವತಂತ್ರ ರಾಜ್ಯ
ಬಂಗಾಲ ಅಧಿಪತ್ಯ

ಹೀಗೆ ಲೊರ್ಡ್ ಹೇಸ್ಟಿಂಗ್ಸನು ಈಗಿನ ಮುಂಬಾಯಿ ಪ್ರಾಂತವನ್ನು ದೊರಕಿಸಿ ಕೊಂಡುದಲ್ಲದೆ ಮರಾಟರ ಸಾಮ್ರಾಜ್ಯವನ್ನು ಸಂಪೂರ್ಣವಾಗಿ ಮುರಿದು ಬಿಟ್ಟನು. ಗಾಯಕವಾಡ, ಹೋಳ್ಕರ, ಸಿಂಧ್ಯ ಮತ್ತು ಭೊನ್ಸ್ಲೆಯವರು ಬರೆ ಚಿಕ್ಕ ಆಶ್ರಿತ ರಾಜರಾಗಿ ಉಳಿದರು. ಪೇಶ್ವೆಯ ರಾಜ್ಯದಲ್ಲಿನ ಸತಾರಾ ಜಿಲ್ಲೆ ಯನ್ನು ಮಾತ್ರ ಇಂಗ್ಲಿಷರು ಶಿವಾಜಿಯ ಕುಟುಂಬದವನಿಗೆ ಕೊಟ್ಟು ಅವನನ್ನು ಆಶ್ರಿತರಾಜನಾಗಿ ಮಾಡಿಕೊಂಡರು.

ಲೊರ್ಡ್ ಅಮ್‌ಹರ್ಸ್ಟ್ 1823-28

ಹೇಸ್ಟಿಂಗ್ಸನ ತರುವಾಯ ಲೊರ್ಡ್ ಅಮ್‌ಹರ್ಸ್ಟ್ ಎಂಬವನು ಗವರ್ನರ್ ಜನರಲನಾದನು. ಇವನ ಕಾಲದಲ್ಲಿ ಇಂಗ್ಲಿರು ಬರ್ಮಾದೇಶದ ಅರಸನೊಡನೆ ಯುದ್ಧ ವನ್ನು ಮಾಡಿ, ಅವನನ್ನು ಸೋಲಿಸಿ ಆಸ್ಸಾಮು, ಅರಕ್ಕಾನ ಮತ್ತು ಟೆನಾಸೆರಿಮ್ ಪ್ರದೇಶಗಳನ್ನು ದೊರಕಿಸಿಕೊಂಡರು.

ಲೊರ್ಡ್ ಬೆಂಟಿಂಕ್ (1828–35)– ಲೊರ್ಡ್ ಅಮ್‌ಹರ್ಸ್ಟನ ತರುವಾಯ ಗವರ್ನರ್ ಜನರಲನಾಗಿ ಲೊರ್ಡ್ ವಿಲಿಯಂ ಬೆಂಟಿಂಕನು

ಲೊರ್ಡ್ ಬೆಂಟಿಂಕನ ಸುಧಾರಣೆಗಳು

ಬಂದನು. ಈತನು ರಾಜ್ಯವನ್ನು ವಿಸ್ತರಿಸಲು ಶ್ರಮ ವನ್ನು ವಹಿಸದೆ, ತಮ್ಮ ಕೈಕೆಳಗಿನ ಪ್ರದೇಶಗಳಲ್ಲಿ ಶಾಂತಿ ಯನ್ನು ನೆಲೆಗೊಳಿಸಿ ರಾಜ್ಯಭಾರದಲ್ಲಿ ಹೆಚ್ಚಿನ ಸುಧಾರಣೆ ಗಳನ್ನು ಮಾಡಿದನು. ಅವನ ಕಾಲದಲ್ಲಿ ಕೊಡಗು ಪ್ರಾಂತವು ಮಾತ್ರ ಇಂಗ್ಲಿಷ್ ಸಾಮ್ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಮೈಸೂರಿನ ರಾಜನು ಪ್ರಜೆಗಳನ್ನು ಚೆನ್ನಾಗಿ ಆಳಮದರಿಂದ ಪ್ರಜೆಗಳು ದಂಗೆಯೆದ್ದರು. ಬೆಂಟಿಂಕನು ಅದನ್ನು ಅಣಗಿಸಿ, ಮೈಸೂರಿನ ಅರಸನನ್ನು ಪದಚ್ಯುತನನ್ನಾಗಿ ಮಾಡಿ, ಮೈಸೂರನ್ನು ಆಳಲು ಒಂದು ಕಮಿಶನನ್ನು ನೇಮಿಸಿದನು. 50 ವರ್ಷಗಳ ವರೆಗೆ ಮೈಸೂರು ಇದೇ ರೀತಿಯಲ್ಲಿ ಆಳಲ್ಪಟ್ಟಿತು. 1861ರಲ್ಲಿ ಆಗಿನ ಗವರ್ನರ್ ಜನರಲನಾಗಿದ್ದ ಲೊರ್ಡ್ ರಿಪ್ಪನನು ಕಮಿಶನನ್ನು ರದ್ದುಮಾಡಿ ಒಡೆಯ ಮನೆತನದ ಅರಸನಿಗೆ ಮೈಸೂರನ್ನು ಪುನಃ ಕೊಡಿಸಿದನು. ಅಂದಿನಿಂದ ಮೈಸೂರನ್ನು ಆ ವಂಶ ದವರೇ ಆಳುತ್ತ ಬಂದು ಆ ದೇಶವನ್ನು ಅಭಿವೃದ್ಧಿಗೊಳಿಸುತ್ತಲಿದ್ದಾರೆ.

ಬೆಂಟಿಂಕನು ತನ್ನ ಕಾಲದಲ್ಲಿ, ರಾಜ್ಯದಲ್ಲೆಲ್ಲ ಸುಲಿಗೆಯನ್ನು ಮಾಡುತ್ತಿದ್ದ, ಠಕ್ಕರೆಂಬ ದರೋಡೆಗಾರರ ಹುಟ್ಟಡಗಿಸಿಬಿಟ್ಟನು. ಹಿಂದೂಗಳಲ್ಲಿ ವಾಡಿಕೆಯಾ ಗಿದ್ದ ಸಹಗಮನ ಪದ್ಧತಿಯನ್ನು ನಿಲ್ಲಿಸಿದನು. ಹಿಂದುಸ್ಥಾನದಲ್ಲೆಲ್ಲ ಹಲವು

ವಿದ್ಯಾಶಾಲೆಗಳನ್ನು ತೆರೆದು ಹಿಂದೀ ಜನರಿಗೆ ಇಂಗ್ಲಿಷನ್ನೂ, ಪಾಶ್ಚಾತ್ಯ ಸಾಹಿತ್ಯವನ್ನೂ ಕಲಿಯುವ ಅನುಕೂಲತೆಯನ್ನೊದಗಿಸಿದನು. ಇದರಿಂದ ಜನರಲ್ಲಿ ಪಾಶ್ಚಾತ್ಯ ಸಂಸ್ಕೃತಿಯೂ ಪದ್ಧತಿಗಳೂ, ನಡೆನುಡಿಗಳೂ ಪ್ರಚಾರಕ್ಕೆ ಬರಲಾರಂಭಿಸಿದುವು.

---

17. ಇಂಗ್ಲಿಷ್ ಸಾಮ್ರಾಜ್ಯದ ಪೂರ್ಣತೆ

ಇಂಗ್ಲಿಷರೂ ರಷ್ಯದ ಜ್ಹಾರನೂ

ಹದಿನೆಂಟನೆ ಶತಮಾನದಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ ವೈಷಮ್ಯ ಬೆಳೆದಂತೆ ಹತ್ತೊಂಬತ್ತನೆ ಶತಮಾನದಲ್ಲಿ, ಇಂಗ್ಲಿಷರಿಗೂ ರಷ್ಯದ ಜ್ಹಾರನಿಗೂ ವಿರೋಧವುಂಟಾಯಿತು. ಜ್ಹಾರನು ತನ್ನ ಸೇನೆಯನ್ನೂ ನೌಕಾಬಲವನ್ನೂ ಹೆಚ್ಚಿಸಿ, ಪೂರ್ವದಲ್ಲಿ ಕೆಸ್ಪಿಯನ್ ಸಮುದ್ರದ ಸುತ್ತಮುತ್ತಲಿನ ಪ್ರದೇಶಗಳನ್ನು ಗೆಲ್ಲುತ್ತ ಬಂದನು. ಮುಂದೆ ಹಿಂದುಸ್ಥಾನದ ಮೇಲೂ ಜ್ಹಾರನು ಕಣ್ಣಿಡುವನೋ ಎಂಬ ಸಂಶಯಕ್ಕೆ ಇಂಗ್ಲಿಷರು ಒಳಗಾದರು.

ಇಂಗ್ಲಿಷರೂ ರಷ್ಯದ ಅಫಘಾನಿಸ್ಥಾನವೂ

ಲಾರ್ಡ್ ಆಕ್‌ಲೆಂಡನು ಹಿಂದುಸ್ಥಾನದಲ್ಲಿ ಗವರ್ನರ್ ಜನರಲನಾಗಿದ್ದಾಗ (1836–'42) ಈ ಹೆದರಿಕೆಯು ಹೆಚ್ಚಲು ಕಾರಣವಾಯಿತು. ಏಕೆಂದರೆ ಆ ಕಾಲದಲ್ಲಿ ಅಫಘಾನಿಸ್ಥಾನದ ಅರಸನಾಗಿದ್ದ ದೋಸ್ತ್ ಮಹಮ್ಮದನು, ಇಂಗ್ಲಿಷರ ರಾಯಭಾರಿಯನ್ನು ತನ್ನ ಆಸ್ಥಾನದಲ್ಲಿರಿಸಿಕೊಂಡು ಇಂಗ್ಲಿಷರೊಡನೆ ಸ್ನೇಹ ಬೆಳೆಸಲು ಒಪ್ಪದೆ, ತನ್ನ ಆಸ್ಥಾನಕ್ಕೆ ಬಂದ ರಷ್ಯದ ರಾಯಭಾರಿಯನ್ನು ಮನ್ನಿಸಿದನು. ತಮಗಾದ ಈ ತಿರಸ್ಕಾರವನ್ನು ಸಹಿಸದೆ ಆಕ್‌ಲೆಂಡನು ದೋಸ್ತ್ ಮಹಮ್ಮದನೊಡನೆ ಯುದ್ಧವನ್ನು ಹೂಡಿದನು. 1809ರಲ್ಲಿ ಅಫಘಾನರು, ಅಲ್ಲಿನ ಹಿಂದಣ ರಾಜವಂಶಕ್ಕೆ ಸೇರಿದ ಷಾಷುಜನೆಂಬ ಅರಸನನ್ನು ಅಲ್ಲಗಳೆದು ಓಡಿಸಿಬಿಟ್ಟಿದ್ದರು. ಆತನಾದರೋ ಪಂಜಾಬಿನಲ್ಲಿ ಉಳಕೊಂಡಿದ್ದನು. ಇಂಗ್ಲಿಷರು ಷಾಷುಜನೇ ಅಫಘಾನಿಸ್ಥಾನದ ನ್ಯಾಯವಾದ ಅರಸನೆಂದೂ ಅವನನ್ನೇ ತಾವು ಅರಸನಾಗಿ ಮಾಡುವೆವೆಂದೂ ಘೋಷಿಸಿ ಬೋಲಾನ್ ಕಣಿವೆಯ ಮಾರ್ಗವಾಗಿ ಸೈನ್ಯವನ್ನು ಅಫಘಾನಿಸ್ಥಾನಕ್ಕೆ ಕಳುಹಿಸಿದರು. ದಾರಿಯಲ್ಲಿ ಕಂದಹಾರ, ಘಜನಿಗಳನ್ನು ವಶಪಡಿಸಿಕೊಂಡು ಕಾಬೂಲಿನ

(1839) ಹೋದರು. ದೋಸ್ತ್ ಮುಹಮ್ಮದನು ಶರಣಾಗತನಾಗಲು, ಇಂಗ್ಲಿಷರು ಅವನನ್ನು ಕಲ್ಕತ್ತೆಗೆ ಕಳುಹಿಸಿದರು. ಇಂಗ್ಲಿಷರ ಸಹಾಯದಿಂದ ಷಾಹಸೂಜನು ಕಾಬೂಲಿನ ಅರಸನಾದನು. ಅವನ ಸಹಾಯಕ್ಕೆಂದು ಒಂದು ಇಂಗ್ಲಿಷ್ ಸೈನ್ಯವನ್ನು ಕಾಬೂಲಿನಲ್ಲಿ ಇಡಲಾಯಿತು.

ಆದರೆ ಈ ಹೊಸ ವ್ಯವಸ್ಥೆಗೆ ಅಫಘಾನರು ಒಪ್ಪದೆ, ಗೋಪ್ಯವಾಗಿ ಸೇನೆಗಳನ್ನು ಸಜ್ಜುಗೊಳಿಸುತ್ತಾ 1841ರಲ್ಲಿ ಫಕ್ಕನೆ ಕಾಬೂಲಿನಲ್ಲಿದ್ದ ಇಂಗ್ಲಿಷ್ ಸೈನ್ಯದ ಮೇಲೆ ಬಿದ್ದು ಸೇನಾನಾಯಕರನ್ನು ಕೊಂದಿಕ್ಕಿದರು. ಉಳಿದ ಸೈನಿಕರನ್ನು ಹಿಂದೂದೇಶಕ್ಕೆ ಹಿಂತೆರಳಲು ಬಿಡುವೆನೆಂದು ದೋಸ್ತ್ ಮುಹಮ್ಮದನ ಮಗನಾದ ಅಕ್ಬರ್ ಖಾನನು ಮಾತುಕೊಟ್ಟನು. 4500 ಸೈನಿಕರೂ, 9000 ಸೇವಕರೂ ಹತಾಶರಾಗಿ ಕಾಬೂಲಿನಿಂದ ಹೊರಟು ಜಲಾಲಾಬಾದಿನ ಕಡೆಗೆ ಹೋಗುತ್ತಿದ್ದಾಗ ಇಕ್ಕಟ್ಟಿನ ಮಾರ್ಗದಲ್ಲಿ ಅಫಘಾನರು ಅವರ ಮೇಲೆ ಬಿದ್ದು ಎಲ್ಲರನ್ನೂ ಕೊಂದುಹಾಕಿದರು. ಈ ಘೋರವಾದ ಹತ್ಯಾಕಾಂಡದ ಸುದ್ದಿಯು ಹಿಂದೂದೇಶಕ್ಕೆ ತಲಪಿದೊಡನೆ ಇಲ್ಲಿ ಹಾಹಾಕಾರವೆದ್ದಿತು. ಒಕ್‌ಲೆಂಡನು ರಾಜಿನಾಮೆಯನ್ನಿತ್ತನು. ಲೊರ್ಡ್ ಎಲೆನ್‌ಬರೋ ಎಂಬವನು ಗವರ್ನರ್ ಜನರಲನಾದನು. ಅಫಘಾನಿಸ್ತಾನದಲ್ಲಿ ದಂಗೆಕಾರರು ಷಾಹಸೂಜನನ್ನು ವಧಿಸಿ ತಾವೇ ಅಧಿಕಾರವನ್ನು ಸೆಳೆದುಕೊಂಡಿದ್ದರು. ಇಂಗ್ಲಿಷ್ ಸೈನ್ಯಗಳು ಮರಳಿ ಅಫಘಾನಿಸ್ತಾನಕ್ಕೆ ಹೋಗಿ, ಅಫಘಾನರನ್ನು ಸೋಲಿಸಿ, ಕಾಬೂಲನ್ನು ವಶಪಡಿಸಿಕೊಂಡು ತಮ್ಮ ಗೌರವವನ್ನು ಉಳಿಸಿಕೊಂಡುವು. ಮುಂದೆ ಇಂಗ್ಲಿಷ್ ಸೈನ್ಯವನ್ನು ಅಲ್ಲಿಡುವುದು ಅಪಾಯಕರವೆಂದು ತಿಳಿದು ಇಂಗ್ಲಿಷರು ದೋಸ್ತ್ ಮುಹಮ್ಮದನನ್ನೇ ಅಫಘಾನಿಸ್ತಾನಕ್ಕೆ ಕಳುಹಿಸಿ ಅಲ್ಲಿನ ಅರಸನನ್ನಾಗಿ ಮಾಡಿದರು.

ಅಫಘಾನ ಯುದ್ಧ 1839–42

ಈ ಯುದ್ಧದಿಂದಾಗಿ ಸಿಂಧಪ್ರದೇಶವು ಎಷ್ಟು ಮುಖ್ಯವಾದುದೆಂದು ಇಂಗ್ಲಿಷರಿಗೆ ಮನವರಿಕೆಯಾಯಿತು. ಇಂಗ್ಲಿಷರ ಎಲ್ಲ ಸೈನ್ಯಗಳೂ ಸಿಂಧ ಪ್ರಾಂತವನ್ನು ಹಾದುಕೊಂಡೇ ಅಫಘಾನಿಸ್ತಾನಕ್ಕೆ ಹೋಗಿದ್ದುವು. ಹೀಗಾಗಿ ಸಿಂಧವನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿದರೆ ಅಫಘಾನಿಸ್ತಾನಕ್ಕೆ ಹೋಗುವ ದಾರಿಯು ತನ್ನ ವಶದಲ್ಲಿರುವುದೆಂದು ಅಫಘಾನಿಸ್ತಾನದಿಂದ ಹಿಂದಿರುಗಿದ ಇಂಗ್ಲಿಷ್ ಸೈನಿಕರಿಗೆ ಮನವರಿಕೆಯಾಗಿ ಸಿಂಧವನ್ನು ಆಳುತ್ತಿದ್ದ ಅಮೀರರೊಡನೆ 1843

ಇಂಗ್ಲಿಷರು ಸಿಂಧವನ್ನು ಗೆದ್ದುದು

ರಲ್ಲಿ ಯುದ್ಧಹೂಡಿ ಜಯಶಾಲಿಗಳಾಗಿ ಸಿಂಧವನ್ನೂ ತಮ್ಮ ಸ್ವಾಧೀನಪಡಿಸಿಕೊಂಡರು.

ಆ ತರುವಾಯ 1844ರಲ್ಲಿ ಸರ್ ಹೆನ್ರಿ ಹಾರ್ಡಿಂಗನು ಗವರ್ನರ್ ಜನರಲನಾದನು. ಅದಕ್ಕಿಂತ ಐದು ವರ್ಷಗಳ ಮೊದಲೇ ಪಂಜಾಬದಲ್ಲಿ ಪ್ರಬಲನಾಗಿದ್ದ ರಣಜಿತಸಿಂಹನು ಮಡಿದಿದ್ದನು. ಅಂದಿನಿಂದಲೂ ಪಂಜಾಬದ ಜನರು ತಮ್ಮ ಅರಸನಾರೆಂದು ನಿಶ್ಚಯಿಸಲಾರದಿದ್ದುದರಿಂದ ಅಲ್ಲಿನ ಬಲಿಷ್ಠವಾದ ಸೇನೆಯೇ ಅಧಿಕಾರವನ್ನು ವಹಿಸಿದ್ದಿತು. ಸೇನಾಧಿಕಾರಿಗಳು ರಣಜಿತಸಿಂಹನ ಚಿಕ್ಕ ಮಗುವಾದ ದಿಲೀಪಸಿಂಹನನ್ನು ಸಿಂಹಾಸನದ ಮೇಲಿರಿಸಿ ತಾವೇ ರಾಜ್ಯಭಾರ ಮಾಡುತಿದ್ದರು. ಅವರಿಗೂ ಸೇನೆಯನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳುವುದು ಕಷ್ಟವಾಗಿದ್ದಿತು.

ಸಿಕ್ಖರ ಯುದ್ಧ

1845 ರಲ್ಲಿ ಅವರು ಸಟ್ಲೆಜ್ ನದಿಯನ್ನು ದಾಟಿ ಇಂಗ್ಲಿಷರ ರಾಜ್ಯದಲ್ಲಿಯೂ ಹಾವಳಿಯನ್ನುಂಟುಮಾಡತೊಡಗಿದರು. ಒಡನೆ ಇಂಗ್ಲಿಷರು ಸಿಕ್ಖರೊಡನೆ ಯುದ್ಧಕ್ಕೆ ಅನುವಾದರು. ನಾಲ್ಕು ಘೋರವಾದ ಕದನಗಳು ನಡೆದು ಸಿಕ್ಖರು ಸೋತು ಒಪ್ಪಂದಕ್ಕೆ ಒಪ್ಪಿಕೊಂಡರು. ಲಾಹೋರಿನಲ್ಲಿ ಆದ ಈ ಒಪ್ಪಂದದ ಪ್ರಕಾರ ಇಂಗ್ಲಿಷರಿಕೆ ಸಟ್ಲೆಜ್ ಬಿಯಾಸ್ ನದಿಗಳ ನಡುವಣ ಪ್ರದೇಶವೂ ಯುದ್ಧದ ವೆಚ್ಚವೂ ದೊರಕಿತು. ಒಬ್ಬ ಇಂಗ್ಲಿಷ್ ರಾಯಭಾರಿಯೂ, ಒಂದು ಇಂಗ್ಲಿಷ್ ಸೈನ್ಯವೂ ಲಾಹೋರಿನಲ್ಲಿ ಇರುವಂತಾಯಿತು. ಇಂಗ್ಲಿಷರು ತಮಗೆ ಸಹಾಯ ಮಾಡಿದುದಕ್ಕಾಗಿ ಗುಲಾಬಸಿಂಹ ಎಂಬವನನ್ನು ಕಾಶ್ಮೀರದ ಅರಸನನ್ನಾಗಿ ಮಾಡಿದರು.

ಆದರೆ ಈ ಒಪ್ಪಂದವು ಬಹುಕಾಲ ಬಾಳಲಿಲ್ಲ. ಇಂಗ್ಲಿಷರನ್ನು ಪಂಜಾಬಿನಿಂದ ಹೊರಗೋಡಿಸಬೇಕೆಂದು ಸಿಕ್ಖರು ಹಂಚಿಕೆಯನ್ನು ಮಾಡುತ್ತಲೇ ಇದ್ದರು.

ಪಂಜಾಬು ಇಂಗ್ಲಿಷರ ಪ್ರಾಂತವಾದುದು

1848ರಲ್ಲಿ ಮುಲ್ತಾನಿನಲ್ಲಿ ದಂಗೆಗೆ ಆರಂಭವಾಗಿ ಅದು ಪಂಜಾಬಿನಲ್ಲೆಲ್ಲ ವ್ಯಾಪಿಸಿತು. ಆಗ ಲೊರ್ಡ್ ಡಾಲ್‌ಹೌಸಿಯು ಗವರ್ನರ್ ಜನರಲನಾಗಿದ್ದನು. ಅವನು ಇಂಗ್ಲಿಷ್ ಸೈನ್ಯವನ್ನು ಕಳುಹಿಸಿ ಗುಜರಾತ ಎಂಬ ಹಳ್ಳಿಯಲ್ಲಿ ಸಿಕ್ಖರನ್ನು ಸಂಪೂರ್ಣವಾಗಿ ಸೋಲಿಸಿ ಪಂಜಾಬನ್ನು ಸ್ವಾಧೀನಪಡಿಸಿಕೊಂಡನು. ದಿಲೀಪಸಿಂಹನು ಸಿಂಹಾಸನವನ್ನು ಕಳೆದುಕೊಂಡು ಇಂಗ್ಲಿಷ್ ಸರಕಾರದಿಂದ ವರ್ಷಾಶನವನ್ನು ಪಡೆದು

ಇಂಗ್ಲೆಂಡಿನಲ್ಲಿಯೇ ಇರಹತ್ತಿದನು. ಪಂಜಾಬವನ್ನು ಒಂದು ಪ್ರತ್ಯೇಕ ಪ್ರಾಂತವನ್ನಾಗಿ ಮಾಡಿ ಶಿಸ್ತಿನಲ್ಲಿರಿಸಿ ಅಲ್ಲಿನ ರಾಜ್ಯಭಾರವನ್ನು ಕೈಕೊಂಡು ಇಂಗ್ಲಿಷರು ಅಲ್ಲಿನ ಜನರ ಒಲುಮೆಗೆ ಪಾತ್ರರಾದರು. ಇದರಿಂದಲೇ ಮುಂದೆ ಸಿಪಾಯಿಗಳು ದಂಗೆಯೆದ್ದಾಗ ಸಿಕ್ಕರು ಇಂಗ್ಲಿಷರ ವಿರುದ್ಧವಾಗಿ ಕೈ ಎತ್ತದೆ ಅವರಿಗೆ ಹೆಚ್ಚಿನ ಸಹಾಯವನ್ನು ಮಾಡಿದರು.

ಡಾಲ್‌ಹೌಸಿಗೆ ಹಿಂದೂದೇಶವ ಹೆಚ್ಚಿನ ಭಾಗಗಳು ಇಂಗ್ಲಿಷರ ಆಳ್ವಿಕೆಯಲ್ಲಿಯೇ ಇದ್ದರೆ ಹಿಂದೂದೇಶದಲ್ಲಿ ಶಾಂತತೆಯನ್ನು ಇರಿಸಲಿಕ್ಕೂ ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸಲಿಕ್ಕೂ ಅನುಕೂಲವಾಗುವುದೆಂದು ಖಚಿತವಾಗಿದ್ದಿತು. ವೆಲ್ಲೆಸ್ಲಿ ಮತ್ತು ಹೇಸ್ಟಿಂಗ್ಸ್ ಮಾಡಿದಂತೆ ಬ್ರಿಟಿಷ್ ರಾಜ್ಯವಿಸ್ತಾರ ಮಾಡಿದರೆ ತಮ್ಮ ಕೆಲಸವು ಪೂರ್ತಿಯಾಗುವುದೆಂದು ಅವನಿಗೆ ಮನವರಿಕೆಯಾಯಿತು. ಆದುದರಿಂದ ಡಾಲ್‌ಹೌಸಿಯು ಇತರ ರಾಜ್ಯಗಳನ್ನೂ ಇಂಗ್ಲಿಷರ ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಮಾಡಿದನು. 1852ರಲ್ಲಿ ಬರ್ಮಾದೇಶದ ಅರಸನ ರಾಜ್ಯಭಾರದಿಂದ ಆ ದೇಶದಲ್ಲಿ ನೆಲೆಸಿದ್ದ ಇಂಗ್ಲಿಷ್ ವರ್ತಕರಿಗೆ ಕೆಡುಕಾಗಿದೆಯೆಂದು ಅವನೊಡನೆ ಹಗೆತನವನ್ನು ಕಟ್ಟಿಕೊಂಡು ಯುದ್ಧವನ್ನು ಹೂಡಿ ಅವನನ್ನು ಸೋಲಿಸಿ ಇರಾವತಿ ನದಿಯ ಮುಖಪ್ರದೇಶವಾದ ಪೆಗೂ ಪ್ರಾಂತವನ್ನು ಸ್ವಾಧೀನಪಡಿಸಿಕೊಂಡನು. ಬರ್ಮಾದೇಶದ ಅರಸನಾದರೋ ಸುಮ್ಮನಿದ್ದುಬಿಟ್ಟನು. ಹೀಗಾಗಿ ಅವನು ಮಂಡಲೇಯ ಸುತ್ತಲಿನ ಪ್ರದೇಶಗಳನ್ನು ಮಾತ್ರ ಆಳಿಕೊಂಡಿರುವಂತಾಯಿತು.

ಬರ್ಮಾದೊಡನೆ ಯುದ್ಧ

ಸಾಧ್ಯವಿದ್ದಷ್ಟು ಆಶ್ರಿತರಾಜ್ಯಗಳನ್ನೆಲ್ಲ ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂದು ಡಾಲ್‌ಹೌಸಿಗೆ ಆಸೆಯಿದ್ದಿತು. ಅದುಕಾರಣ ಅಯೋಧ್ಯೆಯ ನವಾಬನು ತನ್ನ ರಾಜ್ಯವನ್ನು ಚೆನ್ನಾಗಿ ಆಳುವುದಿಲ್ಲವೆಂದು ಅವನಿಂದ ರಾಜ್ಯವನ್ನು ಕಿತ್ತು ಅವನಿಗೆ ವರ್ಷಾಶನವನ್ನು ನಿಶ್ಚಯಿಸಿದನು. ನಿಜಾಮನಿಂದ ಬರತಕ್ಕ ಹಣದ ಬದಲು ಅವನಿಂದ ಬಿರಾರು ಪ್ರದೇಶವನ್ನು ಪಡೆದುಕೊಂಡನು. ಆಶ್ರಿತರಾಜರಿಗೆ ನ್ಯಾಯವಾದ ಉತ್ತರಾಧಿಕಾರಿಗಳಿಲ್ಲದಿದ್ದರೆ ಅವರು ದತ್ತಕ್ಕೆ ತೆಗೆದುಕೊಳ್ಳುವ ಹಕ್ಕನ್ನು ತಾನು ಮನ್ನಿಸಲಾರೆನೆಂದೂ,

ಡಾಲ್‌ಹೌಸಿಯೂ ಆಶ್ರಿತ ರಾಜ್ಯಗಳೂ

ಅವರ ಮರಣಾನಂತರ ಅವರ ರಾಜ್ಯವು ಇಂಗ್ಲಿಷ್ ಸಾಮ್ರಾಜ್ಯಕ್ಕೆ ಸೇರುವುದೆಂದೂ ಅವನು ಸಾರಿದನು. ಈ ಧೋರಣೆಯಿಂದಾಗಿ ನಾಗಪುರ, ಸತಾರ ಮತ್ತು ಝಾನ್ಸಿ ರಾಜ್ಯಗಳು ಇಂಗ್ಲಿಷರಿಗೆ ದೊರೆತುವು. ಅಲ್ಲದೆ ಬಾಜಿರಾಯನು ಸತ್ತನಂತರ ಅವನಿಗೆ ಕೊಡುತ್ತಲಿದ್ದ ವರ್ಷಾಶನವನ್ನು ಅವನ ದತ್ತಕ ಮಗನಾದ ನಾನಾ ಸಾಹೇಬನಿಗೆ ಕೊಡಲೊಪ್ಪದೆ ನಿಲ್ಲಿಸಿಬಿಟ್ಟನು.

ಈ ರೀತಿ ಡಾಲ್‌ಹೌಸಿಯು ಹಿಂದೂದೇಶದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಬೆಳೆಯಿಸಿದುದಲ್ಲದೆ ಇತರ ಸುಧಾರಣೆಗಳನ್ನೂ ಕೈಕೊಂಡನು.

ಅವನ ಸುಧಾರಣೆಗಳು

ಅನೇಕ ಶಾಲೆಗಳನ್ನು ತೆರೆಯಿಸಿದನು. ಮಾರ್ಗಗಳನ್ನು ನಿರ್ಮಿಸಿದನು. ಅವನ ಕಾಲದಲ್ಲಿಯೇ ಹಿಂದೂದೇಶದಲ್ಲಿ ರೈಲ್ವೇ ಮಾರ್ಗಗಳೂ, ತಂತಿ ಇಲಾಖೆಯೂ ತೆರೆಯಲ್ಪಟ್ಟುವು. ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಈ ದೇಶದಲ್ಲಿ ಪ್ರಚಾರಕ್ಕೆ ತರಲು ಅವನು ಬಹಳ ಪ್ರಯತ್ನಿಸಿದನು.

ಆದರೆ ಡಾಲ್‌ಹೌಸಿಯ ಕೆಲವು ಕೃತ್ಯಗಳಿಂದ ಹಿಂದೂದೇಶದ ಜನರಿಗೆ ಸಿಟ್ಟು ಬಂದಿತು. ದತ್ತಕ್ಕೆ ತೆಗೆದುಕೊಳ್ಳುವ ಹಕ್ಕನ್ನು ರದ್ದುಪಡಿಸಿದುದರಿಂದ ದೊರೆಗಳಲ್ಲಿ ಹಲವರು ಮನನೊಂದಿದ್ದರು.

ಡಾಲ್‌ಹೌಸಿಯು ಆಳ್ವಿಕೆಯಿಂದುಂಟಾದ ಅಸಂತೋಷ

ಅದಲ್ಲದೆ ಇಂಗ್ಲಿಷರ ಸಾಮ್ರಾಜ್ಯ ಸ್ಥಾಪನೆಯಾದಂದಿಂದ ಉಂಟಾದ ಸಾಮಾಜಿಕ ಸುಧಾರಣೆಗಳ ತಮ್ಮ ಮತವನ್ನು ಕೆಡಿಸುತ್ತವೆಂಬ ಅಭಿಪ್ರಾಯದಿಂ ಕೆಲವರು ಇಂಗ್ಲಿಷರನ್ನು ವಿರೋಧಿಸಹತ್ತಿದರು. ಇದೇ ರೀತಿ ಸಿಪಾಯಿಗಳಲ್ಲೂ ಅತೃಪ್ತಿಯುಂಟಾಗಿತ್ತು. ಸೇನೆಯಲ್ಲಿ ಉಚ್ಚಾಧಿಕಾರಗಳೆ ತಮಗೆ ದೊರೆಯದೆ ಇಂಗ್ಲಿಷರಿಗೆ ಮಾತ್ರ ಸಿಗುತ್ತವೆಂದೂ, ತಾವು ಬಾಯಿಯಿಂದ ಕಚ್ಚಿ ಬಿಡಿಸಬೇಕಾದ ತೋಟಿಗಳನ್ನು ದನ ಮತ್ತು ಹಂದಿಯ ಚರ್ಬಿಯಿಂದ ಸವರಿರುತ್ತಾರೆಂದೂ ಸಿಪಾಯಿಗಳ ಪಾಳ್ಯದಲ್ಲೆಲ್ಲ ಅಪ್ರಾಯಗಳು ಹಬ್ಬಿದುವು.

ಲೊರ್ಡ್ ಡಾಲ್‌ಹೌಸಿಯು ಹೋದ ತರುವಾಯ ಲೊರ್ಡ್ ಕೆನಿಂಗನು ಗವರ್ನರ ಜನರಲನಾದನು. ಸಿಪಾಯಿಗಳಲ್ಲಿ ಮೊದಲೆ ಉಂಟಾಗಿದ್ದ ಅತೃಪ್ತಿಯು ಬೆಳೆದು ಅವರು 1857ರಲ್ಲಿ ಇಂಗ್ಲಿಷರನ್ನು ವಿರೋಧಿಸಿ ದಂಗೆಯೆದ್ದರು. ಇಂಗ್ಲಿಷರ ಮೇಲೆ ಮನನೊಂದ ಎಷ್ಟೋ

ನರು ಸಿಪಾಯಿಗಳೊಡನೆ ಸೇರಿಕೊಂಡರು, ಗಂಗಾನದಿಯ ಪ್ರದೇಶದ ಲ್ಲಿ ಈ ದಂಗೆಯು ಭೀಕರವಾಗಿ ಹಬ್ಬಿಕೊಂಡಿತು. ಮೊತ್ತಮೊದಲು ರರಿಗೆ ಕೆಲವೆಡೆಗಳಲ್ಲಿ ವಿಜಯವು ದೊರಕಿತು. ಸಿಪಾಯಿಗಳು ಢಿಲ್ಲಿ ಯನ್ನು ವಶಪಡಿಸಿಕೊಂಡು ಬಹದ್ದೂರ್ ಷಾಹನನ್ನು ಮೊಗಲ ಚಕ್ರವರ್ತಿ ಯೆಂದು ಘೋಷಿಸಿದರು. ಲಖನೋ, ಕಾನ್ಪುರ ಪಟ್ಟಣಗಳೂ ದಂಗೆ ಗಾರರ ವಶವಾದುವು; ಕಾನ್ಪುರದಲ್ಲಿದ್ದ ನಾನಾ ಸಾಹೇಬನು ತಾನೇ ಪೇಶ್ವೆಯೆಂದು ಸಾರಿದನು. ಝಾನ್ಸಿಯಲ್ಲಿ ಮಹಾರಾಣಿ ಲಕ್ಷ್ಮೀಬಾ ಯಿಯೂ ದಂಗೆಯಲ್ಲಿ ಸೇರಿಕೊಂಡಳು. ಆದರೆ

ಸಿಪಾಯಿಗಳ ದಂಗೆ 1857

ಇತರ ಪ್ರದೇಶಗಳಿಂದ, ಮುಖ್ಯವಾಗಿ ಪಂಜಾಬಿ ನಿಂದ, ಇಂಗ್ಲಿಷ್ ಸೈನ್ಯಗಳು ಬಂದು ದಂಗೆಯನ್ನು ಅಡಗಿಸಿ ಕೈತಪ್ಪಿಹೋದ ಪಟ್ಟಣಗಳನ್ನು ಪುನಃ ವಶಪಡಿಸಿಕೊಂಡುವು. ಬಹದ್ದೂರ್ ಷಾಹನನ್ನು ಇಂಗ್ಲಿಷರು ರಂಗೂನಿಗೆ ಕಳುಹಿಸಿದರು. ನಾನಾಸಾಹೇಬನು ಪಲಾಯನ ಮಾಡಿದನು. ಝಾನ್ಸಿ ಮಹಾರಾಣಿ ಯಾದ ಲಕ್ಷ್ಮೀಬಾಯಿಯು ಗಂಡಸರಂತೆ ಶೌರ್ಯದಿಂದ ಇಂಗ್ಲಿಷರೊಡನೆ ಕಾದಾಡಿ ರಣರಂಗದಲ್ಲಿ ಮಡಿದು ವೀರಸ್ವರ್ಗವನ್ನೈದಿದಳು. ಹೀಗೆ ಒಂದು ವರ್ಷದೊಳಗೆ ದಂಗೆಯು ಕೊನೆಗಂಡಿತು.

ಆಗ ಇಂಗ್ಲೆಂಡಿನಲ್ಲಿ ವಿಕ್ಟೋರಿಯಾ ಮಹಾರಾಣಿಯವರು ರಾಜ್ಯ ವಾಳುತ್ತಿದ್ದರು. ಹಿಂದುಸ್ಥಾನದಲ್ಲಿ ಇಷ್ಟು ದೊಡ್ಡ ಸಾಮ್ರಾಜ್ಯದ ಆಡಳಿತವನ್ನು ವ್ಯಾಪಾರಕ್ಕಾಗಿ ಬಂದಿದ್ದ ಕಂಪೆನಿಯ ಕೈಯಲ್ಲಿ ಇನ್ನು ಬಿಡುವುದು ಸರಿಯಲ್ಲವೆಂದು ವಿಕ್ಟೋರಿಯಾ ಮಹಾರಾಣಿಯವರು ತಿಳಿದುಕೊಂಡು, ಅಲ್ಲಿಂದ ಮುಂದೆ ಬ್ರಿಟಿಷ್ ಸರಕಾರದವರೇ, ಕಂಪೆನಿ ಯವರು ಗೆದ್ದುಕೊಂಡ ಸಾಮ್ರಾಜ್ಯದ ರಾಜ್ಯಾಡಳಿತದ ಜವಾಬ್ದಾರಿ ಯನ್ನು ಹೊತ್ತುಕೊಳ್ಳುವರೆಂದು ಜಾಹೀರನಾಮೆಯನ್ನು ಹೊರಡಿಸಿದರು. ಹಿಂದೂದೇಶದ ಜನರನ್ನು ನ್ಯಾಯಪ್ರಕಾರವಾಗಿ ಆಳುವರೆಂದೂ ಆಶ್ರಿತ ರಾಜರಿಗೆ ದತ್ತಕ್ಕೆ ತೆಗೆದುಕೊಳ್ಳುವ ಹಕ್ಕನ್ನು ಪುನಃ ಕರುಣಿಸಲಾಗುವ ದೆಂದೂ, ಈ ದೇಶದ ಪ್ರಜೆಗಳ ಮತಸಂಬಂಧವಾದ ವಿಷಯಗಳಲ್ಲಿ ಸರಕಾರವು ಎಂದಿಗೂ ಕೈ ಹಾಕುವುದಿಲ್ಲವೆಂದೂ, ಜಾತಿ ಮತ ಭೇದ ಗಳಿಲ್ಲದೆ ಸರ್ವರನ್ನೂ, ಏಕಪ್ರಕಾರವಾಗಿ ಕಾಣುವರೆಂದೂ ಆ ಜಾಹೀರ


ಟಿ ಬೆ ಟ್
ಬಿಹಾರ
ಬಂಗಾಳ
ಅ ರ ಬಿ
ಸ ಮು ದ್ರ
ಬಂ ಗಾ ಳ
ಅ ಖಾ ತ
ಹಿಂದೂದೇಶ
1857
ಇಂಗ್ಲಿಷರ ರಾಜ್ಯಗಳು
ಆಶ್ರಿತ ರಾಜ್ಯಗಳು

ನಾಮೆಯಲ್ಲಿ ಘೋಷಿಸಲಾಯಿತು. ಅಲ್ಲಿಂದ ಮುಂದೆ, ಇಂಗ್ಲೆಂಡಿನ ಮಂತ್ರಿಮಂಡಲದ ಸದಸ್ಯನಾದ ಹಿಂದೂದೇಶದ ಸೆಕ್ರೆಟರಿ ಒಫ್ ಸ್ಟೇಟು ಐದು ವರ್ಷಗಳಿಗೊಮ್ಮೆ ಕಳುಹಿಸಲ್ಪಡುವ ರಾಜ ಪ್ರತಿನಿಧಿಯಾದ ವೈಸ ರಾಯರು, ಈ ದೇಶದ ರಾಜ್ಯಭಾರವನ್ನು ನೋಡಿಕೊಳ್ಳುವ ವ್ಯವಸ್ಥೆ ಯನ್ನೂ ಮಾಡಲಾಯಿತು.

---

18. ವೈಸರಾಯರ ಆಡಳಿತೆ.

ವೈಸರಾಯರ ಆಳಿಕೆ

1857ರಿಂದ ಇಂದಿನ ವರೆಗೆ ಹದಿನೇಳು ಮಂದಿ ವೈಸರಾಯರು ನಮ್ಮ ದೇಶದ ಅಧಿಕಾರವನ್ನು ವಹಿಸಿಕೊಂಡರು. ಅವರ ಕಾಲದಲ್ಲಿ ನಮ್ಮ ಜೀವನದ ವಿವಿಧ ಕ್ಷೇತ್ರಗಳಲ್ಲಿ ಹಲವು ಬದಲಾವಣೆಗಳುಂಟಾದುವು. ದೇಶದ ಪರಿಸ್ಥಿತಿಯು ತುಂಬಾ ಮಾರ್ಪಟ್ಟಿರುವುದು. ಹಿಂದಿನ ಸರಕಾರದ ರೀತಿಗೂ, ಇಂದಿನ ಸರಕಾರದ ರೀತಿಗೂ ಎಷ್ಟೋ ಹೆಚ್ಚುಕಡಿಮೆಯಿದೆ. ಹಿಂದೂ ದೇಶವು ಬ್ರಿಟಿಷ್ ಸಾಮ್ರಾಜ್ಯದ ಒಂದು ಅಂಗವಾಗಿರುವುದರಿಂದ ಸಾಮ್ರಾಜ್ಯ ಸಂಬಂಧವಾದ ಸಮಸ್ಯೆಗಳ ಪರಿಣಾಮಗಳು ಹಿಂದೂದೇಶದ ಮೇಲೂ ತೋರಿಬಂದಿವೆ. ಅವುಗಳೆಲ್ಲವನ್ನು ಈ ಚಿಕ್ಕ ಪುಸ್ತಕದಲ್ಲಿ ಕೊಡಲಸಾಧ್ಯವಾದುದರಿಂದ ಮುಖ್ಯವಾದ ಕೆಲವೇ ವಿಷಯಗಳನ್ನು ಇಲ್ಲಿ ಕೊಡುವೆವು.

ಲೊರ್ಡ್ ಲಿಟನ್ ಮತ್ತು ಅಫಘಾನಿಸ್ಥಾನ

ಲೊರ್ಡ್ ಲಿಟನನು ವೈಸರಾಯಿಯಾಗಿದ್ದಾಗ(1876-'80)ಹಿಂದೂ ದೇಶದ ಸರಕಾರಕ್ಕೂ ಅಫಘಾನಿಸ್ಥಾನಕ್ಕೂ ಎರಡನೆಯ ಯುದ್ಧವು ನಡೆಯಿತು. ರಷ್ಯದವರು ಅಫಘಾನಿಸ್ಥಾನದಲ್ಲಿ ತಮ್ಮ ವರ್ಚಸ್ಸನ್ನು ಬೆಳೆಸಿ ಹಿಂದೂದೇಶಕ್ಕೆ ಬರುವರೊ ಎಂಬ ಹೆದರಿಕೆ ಇಂಗ್ಲಿಷರಿಗೆ ಇದ್ದೇ ಇದ್ದಿತು. 1876ರಲ್ಲಿ ಇಲ್ಲಿಯ ಸರಕಾರದವರು ಬಲೂಚಿಸ್ಥಾನದ ಅರಸರಿಂದ ಕ್ವೆಟ್ಟಾ ಪಟ್ಟಣವನ್ನು ವಶಪಡಿಸಿಕೊಂಡು ಬೋಲಾನ್ ಕಣಿವೆಯ ಮಾರ್ಗವನ್ನು ಭದ್ರಪಡಿಸಿಕೊಂಡರು. ಇದರಿಂದ ಅಫಘಾನರ ಅರಸನಾದ ಷೇರ್ ಆಲಿಗೆ ಸಿಟ್ಟುಬಂದಿತು. ಇಂಗ್ಲಿಷರು ತಮ್ಮ ರಾಯಭಾರಿಯನ್ನು ಕಾಬೂಲಿಗೆ ಕಳುಹಿಸುವರೆಂದಿದ್ದಾಗ ಷೇರ್ ಆಲಿಯು ನಿರಾಕರಿಸಿ 1878ರಲ್ಲಿ ರಷ್ಯದ

ರಾಯಭಾರಿಯನ್ನು ಬರಮಾಡಿಕೊಂಡನು. ಇದರಿಂದ ಹಿಂದೀ ಸರಕಾರವು ಸಿಟ್ಟುಗೊಂಡು ಯುದ್ಧವನ್ನು ಹೂಡಿತು.

ಇಂಗ್ಲಿಷ ಸೈನ್ಯಗಳು ಅಫಘಾನಿಸ್ತಾನದೊಳಗೆ ನುಗ್ಗಿ ಕಾಬೂಲನ್ನು ವಶಪಡಿಸಿಕೊಂಡುವು. ಶೇರ್ ಅಲಿಯು ಪಲಾಯನ ಮಾಡಿದನು. ಅವನ ಮಗನಾದ ಯಾಕೂಬ ಖಾನನು ಇಂಗ್ಲಿಷರೊಡನೆ ಒಪ್ಪಂದವನ್ನು ಮಾಡಿಕೊಂಡು ಇಂಗ್ಲಿಷ ರಾಯಭಾರಿಯನ್ನು ತನ್ನ ಆಸ್ಥಾನದಲ್ಲಿ ಇರಗೊಡಲೊಪ್ಪಿ, ರಷ್ಯದ ರಾಯಭಾರಿಗೆ ತನ್ನಲ್ಲಿ ಎಡೆಕೊಡುವುದಿಲ್ಲೆಂದು ವಾಗ್ದಾನ ಮಾಡಿದನು (1879). ಆದರೆ ಇದಾದ ಕೆಲವೇ ವಾರಗಳಲ್ಲಿ ಇಂಗ್ಲಿಷ್ ರಾಯಭಾರಿಯೂ ಅವನ ಸಹಚರರೂ ಸಿಟ್ಟಿಗೆದ್ದ ಅಫಘಾನರಿಂದ ಕಾಬೂಲಿನಲ್ಲಿ ವಧಿಸಲ್ಪಟ್ಟರು.

ಪುನಃ ಯುದ್ಧಕ್ಕೆ ಆರಂಭವಾಯಿತು. ಲಾರ್ಡ ರಾಬರ್ಟ್ಸನು ಕಾಬೂಲಿಗೆ ಹೋಗಿ ಆ ಪಟ್ಟಣವನ್ನು ವಶಪಡಿಸಿಕೊಂಡನು. ಯಾಕೂಬ ಖಾನನು ಶರಣಾಗತನಾಗಲು ಅವನನ್ನು ಹಿಂದೂ ದೇಶಕ್ಕೆ ಕಳುಹಿಸಲಾಯಿತು. ಅಷ್ಟರೊಳಗೆ ಹಿಂದೂ ದೇಶದಲ್ಲಿ ಲಾರ್ಡ ರಿಪನನು ವೈಸರಾಯನಾಗಿ ಬಂದಿದ್ದನು. ಅವನು ಅಬ್ದುರ್ ರಹಮಾನನೆಂಬವನನ್ನು ಅಫಘಾನಿಸ್ತಾನದ ಅಮೀರನೆಂದು ಒಪ್ಪಿಕೊಂಡು ಆ ದೇಶದಿಂದ ಇಂಗ್ಲಿಷ್ ಸೇನೆಗಳನ್ನು ಹಿಂದಕ್ಕೆ ಬರಮಾಡಿಕೊಂಡನು. ಅಂದಿನಿಂದ ಅಫಘಾನಿಸ್ತಾನವು ಸರ್ವಸಾಧಾರಣವಾಗಿ ಇಂಗ್ಲಿಷರೊಡನೆ ಮೈತ್ರಿಯಿಂದಲೇ ಇರುತ್ತದೆ.

ಲಾರ್ಡ ರಿಪನನು
1880–1884

ಲಾರ್ಡ ರಿಪನ್ ದೊರೆಯು ವೈಸರಾಯನಾಗಿದ್ದಾಗ ಹಿಂದೂ ದೇಶದ ರಾಜಕೀಯ ವ್ಯವಹಾರದಲ್ಲಿ ಹಲವು ಸುಧಾರಣೆಗಳನ್ನು ಮಾಡಿ ಅವನು ಜನರ ಒಲುಮೆಗೆ ಪಾತ್ರನಾದನು. ಹಿಂದೂ ದೇಶದ ಜನರು ರಾಜ್ಯಾಂಗದಲ್ಲಿ ಭಾಗವಹಿಸಬೇಕೆಂಬ ಇಚ್ಛೆಯು ಅವನದಾಯಿತು. ಅವನು ಮೊದಲಾಗಿ ಸ್ಥಳೀಕ ಬೋರ್ಡುಗಳನ್ನು ಸ್ಥಾಪಿಸಿ ಅವುಗಳಿಗೆ ಸ್ವಲ್ಪ ಮಟ್ಟಿಗೆ ಕರಗಳನ್ನು ಎತ್ತಲಿಕ್ಕೂ ಅವನ್ನು ಖರ್ಚುಮಾಡಲಿಕ್ಕೂ ಅಧಿಕಾರವನ್ನು ಕೊಟ್ಟನು. ಪಟ್ಟಣಗಳ ಆಡಳಿತೆಗೆ ನಗರಸಭೆಗಳನ್ನೂ, ಜಿಲ್ಲೆಯ ಆಡಳಿತೆಗೆ ಜಿಲ್ಲಾ ಬೋರ್ಡುಗಳನ್ನೂ ಸ್ಥಾಪಿಸಿದನು. ಇದರಿಂದ ಜನರಿಗೆ ಸರಕಾರದಿಂದ

ಸುಧಾರಣೆಗಳು

ರೇನೆಂದು ಪರಿಚಯಮಾಡಲಾಯಿತು. ಈ ಸಭೆಗಳಿಗೆ ಸದಸ್ಯರನ್ನು ಚುನಾಯಿಸುವ ಪದ್ಧತಿಯನ್ನೂ ಜ್ಯಾರಿಗೆ ತಂದು ಚುನಾವಣೆಯ ರೀತಿಯನ್ನು ದೇಶದಲ್ಲಿ ಬಳಕೆಗೆ ತಂದನು.

ಆ ತರುವಾಯ ವೈಸರಾಯಿಯಾಗಿ ಬಂದ ಲೊರ್ಡ್ ಡಫರಿನನ ಕಾಲದಲ್ಲಿ (1884–1888) ಬರ್ಮಾದೇಶದಲ್ಲಿ ಸ್ವತಂತ್ರವಾಗಿದ್ದ ಮಂಡಲೇಯ ಸುತ್ತಲಿನ ಚಿಕ್ಕ ರಾಜ್ಯವೂ ಹಿಂದೀಸರಕಾರಕ್ಕೆ ದೊರೆಯಿತು (1886). ಬರ್ಮದ ಬೇರೆಬೇರೆ ಭಾಗಗಳನ್ನು ಒಟ್ಟುಸೇರಿಸಿ ಪ್ರತ್ಯೇಕ ಪ್ರಾಂತವನ್ನಾಗಿ ಮಾಡಿ ಅಲ್ಲಿಗೆ ಒಬ್ಬ ಗವರ್ನರನನ್ನು ನೇಮಿಸಿದರು.

ಡಫರಿನನ ಕಾಲದಲ್ಲಿಯೇ, ಹಿಂದೂದೇಶದಲ್ಲಿ ನಾವೆಲ್ಲರೂ ಒಂದೇ ಜನಾಂಗಕ್ಕೆ ಸೇರಿದವರೆಂಬ ಭಾವನೆಯು ತಲೆದೋರಿ, ನಮಗೆ ನಮ್ಮ ಸರಕಾರದಲ್ಲಿ ಹಕ್ಕುಗಳು ಸಿಗಬೇಕು, ವೈಸರಾಯರು ಹಿಂದೀ ಜನರ ಇಚ್ಛೆಯಂತೆ ರಾಜಕಾರ್ಯಗಳನ್ನು ನಡೆಸುತ್ತಿರಬೇಕು ಎಂಬ ಬೇಡಿಕೆಗಳನ್ನು ಭಾರತೀಯರು ಮುಂದೊತ್ತತೊಡಗಿದರು. ಈ ಚಳವಳವನ್ನು ನಿರ್ವಹಿಸುವ ಸಲುವಾಗಿ ಆಗಿನ ಧುರೀಣರು 'ಹಿಂದೀ ರಾಷ್ಟ್ರೀಯ ಸಭೆ' (Indian National Congress) ಎಂಬ ಸಭೆಯನ್ನು ಸ್ಥಾಪಿಸಿದರು. ಅದರ ಮೊದಲನೆಯ ಅಧಿವೇಶನವು ಮುಂಬಾಯಿಯಲ್ಲಿ ಸೇರಿತು. ಅಂದಿನಿಂದ ಪ್ರತಿವರ್ಷವೂ ಕೊಂಗ್ರೆಸ್ ಅಧಿವೇಶನಗಳು ಈ ದೇಶದ ಒಂದಲ್ಲ ಒಂದು ಸ್ಥಳದಲ್ಲಿ ನೆರೆಯುತ್ತಲಿವೆ.

ಈ ರಾಷ್ಟ್ರೀಯ ಚಳವಳವು ಲೊರ್ಡ್ ಕರ್ಜನನು ವೈಸರಾಯಿಯಾಗಿದ್ದಾಗ ಇನ್ನೂ ಹೆಚ್ಚಾಯಿತು (1899–1905). ಆ ಕಾಲದಲ್ಲಿ ಬಂಕಿಮ್‌ಚಂದ್ರ ಚಟರ್ಜಿಯವರ ಕಾದಂಬರಿಗಳಿಂದಲೂ, ಸ್ವಾಮಿ ವಿವೇಕಾನಂದರು ಉಂಟುಮಾಡಿದ ಧಾರ್ಮಿಕ ಪುನರುಜ್ಜೀವನದಿಂದಲೂ ಕೊಂಗ್ರೆಸ್ ಧುರೀಣರ ಭಾಷಣಗಳಿಂದಲೂ ನವಜಾಗ್ರತಿಯುಂಟಾಗಿದ್ದಿತು. ಅದಲ್ಲದೆ 1905ರಲ್ಲಿ, ಬಂಗಾಳ, ಬಿಹಾರ ಪ್ರಾಂತಗಳನ್ನು ಒಬ್ಬ ಗವರ್ನರನು ನೋಡಿಕೊಳ್ಳುವುದು ಕಷ್ಟವಾಗುವುದೆಂದು ಲೊರ್ಡ್ ಕರ್ಜನನು ಬಂಗಾಳವನ್ನು ವಿಭಜನೆ ಮಾಡಿದನು. ಇದು ಬಂಗಾಳಿಗಳಿಗೆ ಹಾನಿಕರವೆಂದು ಅಲ್ಲಿನ ಜನರು ಪ್ರಚಂಡ ಚಳವಳವನ್ನು ಹೂಡಿದರು.

ಲೊರ್ಡ್ ಕರ್ಜನನೂ ರಾಷ್ಟ್ರೀಯ ಚಳವಳವೂ

ಕರ್ಜನನು ರಾಜ್ಯಪರಿಪಾಲನೆಯಲ್ಲಿ ಅನೇಕ ಸುಧಾರಣೆಗಳನ್ನು ಉಂಟುಮಾಡಿದನು. 1901ರಲ್ಲಿ ವಾಯುವ್ಯ ಸರಹದ್ದಿನಲ್ಲಿರುವ ಜಿಲ್ಲೆಗಳನ್ನೆಲ್ಲಾ ಪಂಜಾಬಿನಿಂದ ವಿಂಗಡಿಸಿ ಪ್ರತ್ಯೇಕ ಪ್ರಾಂತವನ್ನಾಗಿ ಮಾಡಿ ಪೇಶಾವರವನ್ನು ಅದರ ರಾಜಧಾನಿಯನ್ನಾಗಿ ಮಾಡಿದನು. ಅದಲ್ಲದೆ ಇತಿಹಾಸಕ್ಕೆ ಸಂಬಂಧಿಸಿದ ಹಳೆಯ ಕಟ್ಟಡಗಳನ್ನು ಹಾಳಾಗದಂತೆ ಕಾಪಾಡಲಿಕ್ಕೂ ಶಿಲಾಲೇಖ ಮತ್ತು ಇತರ ಪ್ರಾಚೀನ ಶಾಸನಗಳನ್ನು ಶೋಧಿಸಲಿಕ್ಕೂ, 'ಆರ್ಕೆಯೊಲೊಜಿಕಲ್ ಡಿಪಾರ್ಟ್‌ಮೆಂಟ'ನ್ನು ಸ್ಥಾಪಿಸಿದನು. ಜನರ ಉಪಕಾರಕ್ಕಾಗಿ ಸಹಕಾರ ಸಂಘಗಳನ್ನು ಸ್ಥಾಪಿಸಿದನು.

ನವ ಸುಧಾರಣೆಗಳು

ಲೊರ್ಡ್ ಮಿಂಟೊ ವೈಸರಾಯಿಯಾಗಿದ್ದಾಗ (1905-1910) ಸರಕಾರದಲ್ಲಿ ಜನರಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಡುವುದಕ್ಕೆ (1909) ಒಂದು ರಾಜಶಾಸನವು ಜ್ಯಾರಿಗೆ ತರಲ್ಪಟ್ಟಿತು. ಅದಕ್ಕೆ 'ಮಿಂಟೊ ಮೊರ್ಲೆ ಸುಧಾರಣೆ' ಎನ್ನುತ್ತಾರೆ. ಆ ಶಾಸನದ ಪ್ರಕಾರ ಪ್ರತಿ ಪ್ರಾಂತದಲ್ಲಿ ಗವರ್ನರನಿಗೂ ಅವನ ಮಂತ್ರಿ (Executive Councillors) ಗಳಿಗೂ ಜನರ ಅಭಿಪ್ರಾಯಗಳನ್ನು ತಿಳಿಸುವುದಕ್ಕಾಗಿ ಜನರಿಂದ ಬಹುಮತವಾಗಿ ಆರಿಸಲ್ಪಟ್ಟ ಪ್ರತಿನಿಧಿಗಳ ನ್ಯಾಯವಿಧಾಯಕ ಸಭೆಗಳನ್ನು ಸ್ಥಾಪಿಸಿದರು. ವೈಸರಾಯರ ಸಹಾಯಕ್ಕೂ ಒಂದು ಕೇಂದ್ರ ನ್ಯಾಯವಿಧಾಯಕ ಸಭೆಯು ಸ್ಥಾಪಿಸಲ್ಪಟ್ಟಿತು. ಈ ಸುಧಾರಣೆಗಳು ಕೆಲವು ಧುರೀಣರಿಗೆ ಸಾಕೆನಿಸಲಿಲ್ಲ. ಅವರು ಹಿಂದೀ ಜನರಿಗೆ ಹೆಚ್ಚಿನ ಹಕ್ಕುಗಳನ್ನೂ ಅಧಿಕಾರಗಳನ್ನೂ ಕೊಡಬೇಕೆಂದು ಕೇಳುತ್ತಲೆ ಇದ್ದರು. ಅದಲ್ಲದೆ ಬಂಗಾಳ ವಿಭಜನೆಯನ್ನು ವಿರೋಧಿಸುತಿದ್ದ ಚಳವಳವು ಬಹು ರಭಸದಿಂದ ಸಾಗುತಿತ್ತು.

ಲೊರ್ಡ್ ಮಿಂಟೊ ಮತ್ತು ಶಾಸನ ಸುಧಾರಣೆ


ಲೊರ್ಡ್ ಹಾರ್ಡಿಂಗನು ವೈಸರಾಯಿಯಾಗಿದ್ದಾಗ 1910ರಲ್ಲಿ ನಮ್ಮನ್ನು ಆಳುತಿದ್ದ ಏಳನೆಯ ಎಡ್ವರ್ಡ್ ಸಾರ್ವಭೌಮರು ಸ್ವರ್ಗಸ್ಥರಾಗಿ ಅವರ ಪುತ್ರ ಐದನೆಯ ಜೊರ್ಜ್ ಚಕ್ರವರ್ತಿಯವರು ಪಟ್ಟಕ್ಕೆ ಬಂದರು. ಅವರು ಹಿಂದುಸ್ಥಾನಕ್ಕೆ ಬಂದು 1911ನೇ ಇಸವಿ ಡಿಸೆಂಬರ್ 12ನೇ ತಾರೀಕಿನ ದಿನ ಢಿಲ್ಲಿಯಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿಕೊಂಡರು.

ಢಿಲ್ಲಿ ದರಬಾರು 1911

ಆ ಶುಭಮುಹೂರ್ತದಲ್ಲಿ ಚಕ್ರವರ್ತಿಗಳು ಡಿಲ್ಲಿ ಪಟ್ಟಣವನ್ನು ಹಿಂದೂದೇಶದ ರಾಜಧಾನಿಯನ್ನಾಗಿ ಮಾಡಲಾಗಿದೆಯೆಂದೂ ಬಂಗಾಳ ವಿಭಜನೆಯು ರದ್ದುವಾಡಲ್ಪಡುವುದೆಂದೂ ಪ್ರಕಟಿಸಿದರು. ಆಸ್ಸಾಮುವನ್ನೂ, ಬಿಹಾರವನ್ನೂ ಬೇರೆ ಬೇರೆ ಪ್ರಾಂತಗಳಾಗಿ ಮಾಡಿ ಬಂಗಾಳವನ್ನು ವಿಂಗಡಿಸದೆ ಒಂದೇ ಪ್ರಾಂತವನ್ನಾಗಿ ಮಾಡಿದರು.

ಮಹಾಯುದ್ಧ 1914–1918

1914ರಲ್ಲಿ ಯುರೋಪಿನಲ್ಲಿ ಜರ್ಮನಿ, ಆಸ್ಟ್ರಿಯಾ, ಬಲ್ಗೇರಿಯಾ, ಟರ್ಕಿ ಇವು ಒಂದು ಪಕ್ಷವಾಗಿಯೂ, ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಸರ್ವಿಯಾ ಇವು ಇನ್ನೊಂದು ಪಕ್ಷವಾಗಿಯೂ ಮಹಾಯುದ್ಧವು ಆರಂಭವಾಯಿತು. ಈ ಯುದ್ಧದ ಪರಿಣಾಮವಾಗಿ ಇಡೀ ಪ್ರಪಂಚಕ್ಕೆ ಹಾನಿಯುಂಟಾಯಿತು. ನಮ್ಮ ದೇಶದಲ್ಲೂ ಅದರಿಂದ ಹಾನಿಯುಂಟಾಗದಿರಲಿಲ್ಲ.


ಮಹಾತ್ಮಾ ಗಾಂಧಿ

ಯುದ್ಧ ನಡೆದ ನಾಲ್ಕು ವರ್ಷಗಳಲ್ಲಿ ಸಾಮಾನುಗಳ ಕ್ರಯವು ಹೆಚ್ಚುತ್ತಾ ಬಂದಿತು. ಹಿಂದೂದೇಶದ ಸರಕಾರವು ಅನೇಕ ಕೋಟಿ ರೂಪಾಯಿಗಳನ್ನು ಇಂಗ್ಲೆಂಡಿಗೆ ಯುದ್ಧದ ವೆಚ್ಚಕ್ಕಾಗಿ ಕಳುಹಿಸಿತು. ಇಲ್ಲಿನ ಸೈನಿಕರು ಯುದ್ಧದಲ್ಲಿ ಸೇರಿ ತಮ್ಮ ಸಾಮರ್ಥ್ಯವನ್ನು ತೋರಿಸಿದರು. ಪರದೇಶದ ಸಾಮಾನುಗಳು ಇಲ್ಲಿಗೆ ಬರಲಾಗುತ್ತಿದ್ದಿಲ್ಲವಾದ ಕಾರಣ ಅನೇಕ ಕೈಗಾರಿಕೆಗಳು ಹಿಂದೂದೇಶದಲ್ಲಿ ಸ್ಥಾಪಿಸಲ್ಪಟ್ಟುವು. 1918ರಲ್ಲಿ ಯುದ್ಧವು ಕೊನೆಗಂಡಿತಾದರೂ, ಹಿಂದೂದೇಶದಲ್ಲಿ ತೆರೆಯಲಾದ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುತ್ತಾ ಬಂದುವು.

1921ರಲ್ಲಿ, ಲೊಡ್ರ್ ಚೆಲ್ಮ್ಸ್‌ಫೋರ್ಡನು ವೈಸರಾಯಿಯಾಗಿದ್ದಾಗ ಹಿಂದೂದೇಶದ ಜನರಿಗೆ ತಮ್ಮ ಸರಕಾರದಲ್ಲಿ ಇನ್ನೂ ಹೆಚ್ಚು ಅಧಿಕಾರ ಮತ್ತು ಜವಾಬ್ದಾರಿಯನ್ನು ಕೊಡಲಾಯಿತು. ವೈಸರಾಯರ ಕೇಂದ್ರ ಸರಕಾರಕ್ಕೆ ಸಹಾಯಮಾಡುವ ನ್ಯಾಯವಿಧಾಯಕ ಸಭೆ (Legislative Council) ಯನ್ನು ಇನ್ನಷ್ಟು ಬೆಳೆಸಿ, ಅದಕ್ಕೆ ಆಯ ವ್ಯಯದ ಪಟ್ಟಿಯನ್ನು ಕುರಿತು ಚರ್ಚಿಸಲಿಕ್ಕೂ ಸರಕಾರದ ಕಾರ್ಯಕಲಾಪಗಳ ವಿಷಯ ಪ್ರಶ್ನೆಗಳನ್ನು ಕೇಳುವುದಕ್ಕೂ ಹೀಗೆ ಹಲವು ಅಧಿಕಾರಗಳು ಕೊಡಲಾದುವು. ಈ ಸಭೆಯ ಹೆಚ್ಚಿನ ಸದಸ್ಯರು ಜನರಿಂದ ಆರಿಸಲ್ಪಟ್ಟವರಾಗಿದ್ದರು. ಅದೇ ರೀತಿ ಪ್ರಾಂತದ ಗವರ್ನರರ ಸರಕಾರದ ಸಹಾಯಕ್ಕಾಗಿ ಇದ್ದ ಪ್ರಾಂತಿಕ ನ್ಯಾಯವಿಧಾಯಕ ಸಭೆ (Legislative Assembly)ಗಳಿಗೂ ಹೆಚ್ಚಿನ ಅಧಿಕಾರಗಳು ದೊರೆತುವು. ಈ ಸಭೆಗಳಲ್ಲಿ ಬಹುಮತದ ಬೆಂಬಲವುಳ್ಳ ಧುರೀಣರನ್ನು ಗವರ್ನರರು ವಿದ್ಯಾ ಇಲಾಖೆ, ಸಹಕಾರ ಇಲಾಖೆ; ಸ್ಥಳೀಕ ಸಂಸ್ಥೆಗಳು ಮೊದಲಾದ ವಿವಿಧ ಸಂಸ್ಥೆಗಳ ಮೇಲೆ ಅಧಿಕಾರವನ್ನು ವಹಿಸಲು ಮಂತ್ರಿಗಳಾಗಿ ನೇಮಿಸತೊಡಗಿದರು.

ಶಾಸನ ಸುಧಾರಣೆ 1919

ಈ ಸುಧಾರಣೆಗಳೂ ಕೊಂಗ್ರೆಸಿಗೆ ಸಮಾಧಾನಕರವೆನಿಸಲಿಲ್ಲ. 1921ರಲ್ಲಿ ಕೊಂಗ್ರೆಸಿನವರು ಮಹಾತ್ಮಾಗಾಂಧಿಯವರ ನಾಯಕತ್ವದಲ್ಲಿ ಅಸಹಕಾರ ಚಳವಳವನ್ನು ಹೂಡಿದರು. ಈ ಚಳವಳವು ಲೊಡ್ರ್ ರೀಡಿಂಗರು ವೈಸರಾಯಿಯಾಗಿ ಬರುವಾಗ ಬಹಳ ಸ್ಫೂರ್ತಿಯಿಂದ ನಡೆಯುತಲಿದ್ದಿತು. ಒಂದು ವರ್ಷದ ತನಕ ಈ ಚಳವಳವು ನಡೆದು ಕೆಲವೆಡೆಗಳಲ್ಲಿ ಅದು ಹಿಂಸಾತ್ಮಕವಾಗಿ ಪರಿಣಮಿಸಲು ಮಹಾತ್ಮಾ ಗಾಂಧಿಯವರು 1922ರಲ್ಲಿ ಅದನ್ನು ನಿಲ್ಲಿಸಿಬಿಟ್ಟರು. ಆದರೆ ಲೊಡ್ರ್ ಆರ್ವಿನರ ಕಾಲದಲ್ಲಿ ಜನರ ಈ ಚಳವಳಿಯು ಇನ್ನೊಂದು ರೂಪದಲ್ಲಿ ನಡೆಯುತ್ತಲೇ ಇದ್ದುದರಿಂದ ಹೊಸ ಸುಧಾರಣೆಗಳನ್ನು ಮಾಡುವುದಕ್ಕೋಸ್ಕರ ಹಿಂದೂದೇಶದ ಧುರೀಣರೂ ಬ್ರಿಟಿಷ್ ಸರಕಾರದ ಪ್ರತಿನಿಧಿಗಳೂ ಸೇರಿ ಬಹುಕಾಲದವರೆಗೆ ಚರ್ಚಿಸಿ 1935ರಲ್ಲಿ ಹೊಸದೊಂದು ರಾಜಶಾಸನವನ್ನು ಜ್ಯಾರಿಗೆ

ಅಸಹಕಾರ ಚಳವಳ

ತಂದರು. ಅದರ ಪ್ರಕಾರ ಪ್ರತಿ ಪ್ರಾಂತವ ಸರಕಾರವನ್ನು ನಡೆಸಲು ಜನರಿಗೆ ಹೆಚ್ಚಿನ ಅಧಿಕಾರವು ದೊರೆಯಿತು. ಜನರಿಂದ ಆರಿಸಲ್ಪಟ್ಟ ಸದಸ್ಯರ ನ್ಯಾಯವಿಧಾಯಕ ಸಭೆಯು ಸ್ಥಾಪಿತವಾಯಿತು. ಈ ಸಭೆಯಲ್ಲಿದ್ದ ಬಹುಮತ ಪಕ್ಷದ ಧುರೀಣರನ್ನು ಗವರ್ನರರು ಮಂತ್ರಿಗಳಾಗಿ ನೇಮಿಸತಕ್ಕದೆಂದೂ ಅವರು ಪ್ರಾಂತಿಕ ರಾಜ್ಯಭಾರವನ್ನು ವಹಿಸತಕ್ಕದೆಂದೂ ನಿರ್ಣಯಿಸಲಾಯಿತು. ಕೇಂದ್ರ ಸರಕಾರದ ಮಟ್ಟಿಗೆ ಹೊಸ ಶಾಸನವು ಇನ್ನೂ ಜ್ಯಾರಿಗೆ ಬಂದಿಲ್ಲ. ನಮ್ಮ ಪ್ರಾಂತಗಳೊಡನೆ ಆಶ್ರಿತ ರಾಜ್ಯಗಳನ್ನೂ ಸೇರಿಸಿ ಒಂದು ಸಂಯುಕ್ತ ರಾಜಶಾಸನವನ್ನು ಜ್ಯಾರಿಗೆ ತರಬೇಕೆಂದು ಪ್ರಯತ್ನಗಳು ನಡೆಯುತ್ತಲಿವೆ. ಈ ಪ್ರಯತ್ನಗಳು ಸಫಲವಾದರೆ ಹೊಸ ರೀತಿಯ ಕೇಂದ್ರ ಸರಕಾರವು ಸ್ಥಾಪಿಸಲ್ಪಡುವುದು. ಈಗ ನಮ್ಮ ಮದ್ರಾಸು ಪ್ರಾಂತದ ನ್ಯಾಯವಿಧಾಯಕ ಸಭೆಯಲ್ಲಿ ವಿವಿಧ ಜಿಲ್ಲೆಗಳ ಜನರಿಂದ ಚುನಾಯಿತರಾದ 215 ಮಂದಿ ಸದಸ್ಯರಿದ್ದಾರೆ. ಅದರಲ್ಲಿನ ಬಹುಮತದ ಬೆಂಬಲವಿರುವ ಮಂತ್ರಿಮಂಡಳವು ಸರಕಾರವನ್ನು ನಡೆಸುತ್ತಲಿದೆ. ಅದೇ ರೀತಿ ಉಳಿದ ಪ್ರಾಂತಗಳಲ್ಲಿಯೂ ನಡೆಯುತ್ತಿದೆ.

1935ರ ಶಾಸನದ ಕಾನೂನು

---

19. ಆಧುನಿಕ ಹಿಂದೂದೇಶ.

ನಮ್ಮ ದೇಶದ ಸಂಸ್ಕೃತಿಯು ಬಹಳ ಪ್ರಾಚೀನವಾದುದು. ಐದಾರು ಸಾವಿರ ವರ್ಷಗಳ ಹಿಂದಿನಿಂದಲೂ ಈ ದೇಶದಲ್ಲಿ ಬಲು ನಾಗರಿಕರಾದ ಜನರು ವಾಸಿಸುತಿದ್ದರು. ಅವರು ತಮ್ಮ ಜೀವನ ಸೌಕರ್ಯಕ್ಕೆ ಬೇಕಾಗಿದ್ದುದನ್ನೆಲ್ಲಾ ತಾವೇ ಒದಗಿಸಿಕೊಳ್ಳುತಿದ್ದರು. ಮಾತ್ರವಲ್ಲದೆ ಸಮಾಜವು ಸುಗಮವಾಗಿ ನಡೆಯುವಂತೆ ಅಗತ್ಯವಾದ ಕಟ್ಟುಕಟ್ಟಲೆಗಳನ್ನು ನಿರ್ಮಿಸಿ ಸುಖಜೀವನವನ್ನು ಸಾಗಿಸುತಿದ್ದರು. ಆದರೆ ಅವರಿಂದ ನಿರ್ಮಿತವಾದ ಈ ಕಟ್ಟುಕಟ್ಟಲೆಗಳು ಕಾಲಕ್ರಮೇಣ ಅಧಿಕವಾಗಿ ಬೆಳೆದು ಸಮಾಜದ ಪ್ರಗತಿಗೆ ಹಾನಿಯನ್ನು ತಂದೊಡ್ಡಿದುವು. ಜಾತಿಭೇದಗಳು ಅಸಂಖ್ಯವಾಗಿ, ಜಾತಿನಿಯಮಗಳು ಅತ್ಯಂತ ಬಿಗುವಾಗಿ

ಪ್ರಾಚೀನ ಹಿಂದೀ ಸಂಸ್ಕೃತಿ

ಹಿಂದೂ ಸಮಾಜದ ಬಲಹೀನತೆಗೆ ಕಾರಣವಾದುವೆಂದು ಹೇಳಬಹುದು. ಆದರೆ ಹಿಂದೂ ಜನರ ವೈಶಿಷ್ಟ್ಯವು ಅವರ ಉತ್ಕೃಷ್ಟವಾದ ತತ್ವಜ್ಞಾನದಿಂದ ಒಡೆದು ತೋರುತ್ತಿದೆ. ಹಿಂದಿನ ಕಾಲದ ಜನರು ಬರೆದ ಉಪನಿಷತ್ತೇ ಮೊದಲಾದ ಧರ್ಮಗ್ರಂಥಗಳನ್ನೋದಿದರೆ, ನಮ್ಮ ಜನರ ಪಾರಮಾರ್ಥಿಕ ಜ್ಞಾನಶಕ್ತಿಯು ಎಷ್ಟು ಬೆಳೆದಿದ್ದಿತೆಂದು ಖಚಿತವಾಗುತ್ತದೆ. ಅಂತೆಯೇ ಉಳಿದ ಲಲಿತ ಕಲೆಗಳಲ್ಲಿಯೂ ನಮ್ಮ ಜನರು ಹಿಂದುಳಿದಿರಲಿಲ್ಲ. ಅವರ ಶಿಲ್ಪಕಲಾ ನೈಪುಣ್ಯ, ಅವರ ಕಾವ್ಯಗಳ ಸೌಂದರ್ಯ, ವೈದ್ಯರ ಕೌಶಲ್ಯ, ಚಿತ್ರಕಲೆಯು ಮತ್ತು ಭಾವನಾತರಂಗಗಳ ಗಾಂಭೀರ್ಯ, ಇವು ಎಷ್ಟೋ ಪಾಶ್ಚಾತ್ಯರನ್ನು ಕೂಡ ಬೆರಗುಗೊಳಿಸಿರುವುವು. ನಮ್ಮ ದೇಶದಲ್ಲಿನ ಅತ್ಯುಚ್ಚ ಶಿಲ್ಪಕಲಾ ನೈಪುಣ್ಯವನ್ನು ಪ್ರದರ್ಶಿಸುವ ಕಟ್ಟಡಗಳೂ, ಭವ್ಯವಾದ ಭವನಗಳೂ, ಉನ್ನತವಾದ ದೇವಾಲಯಗಳೂ ಮಶೀದಿಗಳೂ, ಕೆತ್ತನೆಯ ಕೆಲಸಗಳಿಂದ ತುಂಬಿರುವ ಗುಡಿಗಳೂ ಗವಿಗಳೂ, ಅಸಂಖ್ಯಾತ ಜನರನ್ನು ಆಕರ್ಷಿಸುತ್ತಿವೆ.

ಎಷ್ಟೋ ವಿದೇಶೀ ಪಂಗಡಗಳು ನಮ್ಮ ದೇಶಕ್ಕೆ ನುಗ್ಗಿ ಬಂದು ಇದನ್ನು ತಮ್ಮ ದೇಶವನ್ನಾಗಿ ಮಾಡಿಕೊಂಡುವು. ಅದುಕಾರಣ ಅವರ ಸಂಸ್ಕೃತಿಯು ಈ ದೇಶದ ಪುರಾತನ ಸಂಸ್ಕೃತಿಯೊಡನೆ ಬೆರೆತು ನಮ್ಮ ನಾಗರಿಕತೆಯಲ್ಲಿ ಹಲಕೆಲವು ಮಾರ್ಪಾಟುಗಳನ್ನು ಮಾಡಿರುತ್ತದೆ. ಕೆಲವೊಮ್ಮೆ ಹೊಸ ಜನರ ನಾಗರಿಕತೆಯು ದೇಶದ ವಾತಾವರಣಕ್ಕನುಸಾರವಾಗಿ ಮಾರ್ಪಟ್ಟಿತು. ಕೆಲವೊಮ್ಮೆ ಅವುಗಳು ನಮ್ಮ ದೇಶದ ಸಂಸ್ಕೃತಿಯನ್ನೇ ಮಾರ್ಪಡಿಸಿದುವು. ಆದರೆ ಇವೆಲ್ಲವುಗಳ ಪರಿಣಾಮದಿಂದ ನಮ್ಮ ಸಂಸ್ಕೃತಿಯು ಪೂರ್ಣ ಬದಲಾವಣೆಹೊಂದದೆ, ಅದರ ಮೂಲ ತತ್ವಗಳು ಇದ್ದಕ್ಕಿದ್ದಂತೆಯೇ ಉಳಿದಿರುವುವು. ಇಸ್ಲಾಮ್ ಮತವು ಪ್ರಚಾರಕ್ಕೆ ಬಂದುದರಿಂದ ಹಿಂದೂ ಸಮಾಜದ ಮೇಲೆ ಅದರ ಪರಿಣಾಮಗಳೆಷ್ಟೋ ಕಂಡುಬಂದುವು. ಅದರಂತೆಯೇ ಪಾಶ್ಚಾತ್ಯರ ಸಂಪರ್ಕದಿಂದಲೂ ನಮ್ಮ ನಡೆ ನುಡಿ, ಜಾತಿ ಕಟ್ಟಲೆಗಳಲ್ಲಿಯೂ ಎಷ್ಟೋ ಬದಲಾವಣೆಗಳು ಆಗಿರುತ್ತವೆ.

ಬ್ರಿಟಿಷರ ರಾಜ್ಯಸ್ಥಾಪನೆಯಿಂದ ನಮ್ಮ ದೇಶದಲ್ಲಿ ಶಾಂತತೆಯು ಸ್ಥಿರವಾಗಿ ನೆಲೆಸಿದೆ. ಸರಕಾರದ ಹೆದರಿಕೆಯು ಜನರಲ್ಲಿರುವುದರಿಂದ,

ಬಂಡಾಯಗಳೆದ್ದುದು ಬಹು ವಿರಳ. ಜನರು ನಿರ್ಭೀತಿಯಿಂದ ಎತ್ತ ಬೇಕಾದತ್ತ ಸಂಚರಿಸಬಹುದು. ಪ್ರಬಲವಾದ ನಮ್ಮ ಸೈನ್ಯವು ಮಾತ್ರ ವಲ್ಲದೆ ಬ್ರಿಟಿಷ್ ಸಾಮ್ರಾಜ್ಯದ ಸೈನ್ಯವೂ ನಮ್ಮ ರಕ್ಷಣೆಗಿರುವುದರಿಂದ ಪರರಾಷ್ಟ್ರಗಳಿಗೆ ನಾವು ಹೆದರಬೇಕಾದುದಿಲ್ಲ. ಮಹಾಯುದ್ಧದ ಕಾಲದಲ್ಲಿ ಯುರೋಪಿನಲ್ಲಿ ಅಪರಿಮಿತ ಹಾವಳಿ, ನಷ್ಟ ಸಂಕಷ್ಟಗಳು ತಲೆದೋರಿದರೂ, ನಮ್ಮ ದೇಶದಲ್ಲಿ ಅಷ್ಟೊಂದು ವಿಶೇಷವಾಗಿ ಅವು ತೋರಿಬರಲಿಲ್ಲ. ಆದರೆ ನಮ್ಮ ದೇಶವು ಬ್ರಿಟಿಷ್ ಸಾಮ್ರಾಜ್ಯದ ಒಂದು ಅಂಗವಾಗಿರುವುದರಿಂದ ಸಾಮ್ರಾಜ್ಯ ಸಮಸ್ಯೆಗಳ ಪರಿಣಾಮವು ನಮ್ಮ ದೇಶದ ಮೇಲೂ ತೋರಿಬಂದಿರುವುವು.

ಬ್ರಿಟಿಷರ ಸಂಪರ್ಕದ ಪರಿಣಾಮಗಳು

ಬ್ರಿಟಿಷರಿಗೂ ನಮಗೂ ಆದ ನೂರೈವತ್ತು ವರ್ಷಗಳ ಸಂಪರ್ಕದಿಂದ ಬ್ರಿಟಿಷ್ ರಾಜ್ಯಪದ್ಧತಿಯೇ ನಮ್ಮ ದೇಶದಲ್ಲೂ ಪ್ರಚಾರಕ್ಕೆ ಬಂದಿದೆ. ಇಂಗ್ಲಂಡಿನಲ್ಲಿದ್ದಂತೆಯೇ ಪ್ರಜೆಗಳಿಗೆ ಇಲ್ಲಿಯೂ ರಾಜಕೀಯ ಜವಾಬ್ದಾರಿಯಿದೆ. ರಾಜ್ಯದಲ್ಲಿ ಹಕ್ಕುಬಾಧ್ಯತೆಗಳಿವೆ. ಇಲ್ಲಿಯೂ ಅಲ್ಲಿರುವಂತಹ ರಾಜ್ಯಾಡಳಿತದ ಪದ್ಧತಿಗಳಿವೆ. ಬ್ರಿಟಿಷ್ ಸಾಮ್ರಾಜ್ಯದ ಇತರ ಪ್ರಮುಖ ರಾಷ್ಟ್ರಗಳಲ್ಲಿರುವಂತಹ ರೀತಿಯ ಶಾಸನವೇ ತಮಗೂ ದೊರೆಯಬೇಕೆಂದು ಇಲ್ಲಿನ ಜನರು ಚಳವಳವನ್ನು ಕೈಕೊಂಡುದರಿಂದ ಮೆಲ್ಲಮೆಲ್ಲನೆ ಇಂತಹ ರಾಜ್ಯಪದ್ಧತಿಯು ಇಲ್ಲಿಯೂ ಜಾರಿಗೆ ಬರುವಂತಾಯಿತು. ಹಿಂದೂದೇಶವೆಲ್ಲೆಲ್ಲ ಸರ್ವಸಾಧಾರಣವಾಗಿ ಒಂದೇ ತರದ ಕಾನೂನುಗಳೂ, ಒಂದೇ ರೀತಿಯ ರಾಜಕೀಯ ಧೋರಣವೂ, ಒಂದೇ ತರದ ರಾಜ್ಯಾಡಳಿತೆಯೂ ಇದ್ದು ಸರಕಾರದ ಕಾರ್ಯಕಲಾಪಗಳು ಸುವ್ಯವಸ್ಥಿತವಾಗಿ ನಡೆಯುತ್ತಿವೆ. ದೇಶದಲ್ಲಿ ರಾಷ್ಟ್ರೀಯ ಭಾವನೆಯು ದಿನೇ ದಿನೇ ಬೆಳೆಯುತ್ತಲಿದೆ. ಸರಕಾರಿ ನೌಕರರೆಲ್ಲ ತಮ್ಮ ಮೇಲಧಿಕಾರಿಗಳಿಗೆ ವಿಧೇಯರಾಗಿ ವರ್ತಿಸುತ್ತ ಸರಕಾರದ ಕಾನೂನು ಕಟ್ಟಲೆಗಳನ್ನು ಪ್ರಚಾರಕ್ಕೆ ತಂದು ಅವು ಸುಸೂತ್ರವಾಗಿ ನಡೆವಂತೆ ಸಾಧಿಸುತ್ತಿರುವರು. ಅನೇಕ ಸರಕಾರಿ ಸಂಸ್ಥೆಗಳಲ್ಲಿ ಪ್ರಜೆಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿದ್ದು, ಜನರ ಬಯಕೆಯಂತೆಯೇ ಸರಕಾರವು ನಡೆವಂತೆ ಪ್ರಯತ್ನಿಸುತ್ತಿದ್ದಾರೆ.

ನಮ್ಮ ರಾಜಕೀಯ ಕ್ಷೇತ್ರದಲ್ಲಿ ಪಾಶ್ಚಾತ್ಯರ ಹಲವು ಪದ್ಧತಿಗಳು ಕಾಲಿಟ್ಟಿವೆ ಎಂದು ಮೊದಲೇ ಹೇಳಿರುವೆವು. ಅಂತೆಯೇ ಪಾಶ್ಚಾತ್ಯರ ರೀತಿಯಲ್ಲಿ ಪ್ರತಿನಿಧಿಗಳನ್ನು ಆರಿಸುವಿಕೆ,— ಅಂದರೆ ಗುಪ್ತವಾಗಿ ಮತದಾನವನ್ನು ಮಾಡುವ ರೀತಿಯು ಪ್ರಚಾರಕ್ಕೆ ಬಂದು ಜನರಿಗೆ ರಾಜಕೀಯ ಜ್ಞಾನವುಂಟಾಗಿರುವುದು. ಪಾಶ್ಚಾತ್ಯ ರೀತಿಯ ವಿದ್ಯಾಪ್ರಚಾರದಿಂದ ಜನರಲ್ಲಿ ವಿವೇಕವು ಬೆಳೆದು, ಅಂಧಶ್ರದ್ಧೆಯು ಕಡಿಮೆಯಾಗುತ್ತ ಬಂದಿದೆ. ಸರಕಾರ ನಡೆಸುವ ಜವಾಬ್ದಾರಿಯನ್ನು ಪಾಶ್ಚಾತ್ಯರು ಹೇಗೆ ಪಡೆದರೆಂಬುದನ್ನು ತಿಳಿದುಕೊಂಡುದರಿಂದ ತಾವೂ ಅವರಂತೆಯೇ ಕಾರ್ಯವನ್ನು ಸಾಧಿಸಬೇಕೆಂದು ಜನರಲ್ಲಿ ಆಶೆಯುಂಟಾಗಿ, ಎಷ್ಟೋ ಚಳವಳಿಗಳು ನಮ್ಮ ದೇಶದಲ್ಲಿ ನಡೆದಿವೆ. ದೇಶದ ಧುರೀಣರು ಇಂತಹ ಜಾಗ್ರತಿಯನ್ನು ಜನರಲ್ಲಿ ಹುಟ್ಟಿಸುತ್ತ ಬಂದಿದ್ದಾರೆ. ರಾಜಕೀಯ ಪಕ್ಷಗಳು ಬೆಳೆದು ಅವುಗಳ ಪ್ರಚಾರ ಕಾರ್ಯದಿಂದ ಜನರಿಗೆ ರಾಜಕೀಯ ಜ್ಞಾನವು ದೊರೆಯುತ್ತಲಿದೆ. ಧುರೀಣರು ಹಳ್ಳಿಪಟ್ಟಣಗಳಿಗೆ ಹೋಗಿ ಭಾಷಣ ಕೊಡುವುದರಿಂದಲೂ, ವರ್ತಮಾನ ಪತ್ರಿಕೆಗಳಿಂದಾಗಿಯೂ, ಜನರಲ್ಲಿ ನವಜಾಗ್ರತಿಯುಂಟಾಗುತ್ತಲಿದೆ. ವರ್ತಮಾನ ಪತ್ರಿಕೆಗಳಾದರೋ, ಪ್ರಪಂಚದ ವಿದ್ಯಮಾನಗಳ ಅರಿವನ್ನುಂಟುಮಾಡಿಕೊಡುವುದರ ಒಟ್ಟಿಗೆ, ಪ್ರತಿಯೊಂದು ವಿಷಯದ ಸಮಗ್ರ ಜ್ಞಾನವನ್ನು ಕೊಡುತ್ತಲಿರುವುದರಿಂದ ಜನರಿಗೆ ಸರಕಾರವು ಏನು ಮಾಡುತ್ತಲಿದೆಯೆಂದು ತಿಳಿಯುವಂತಾಗಿದೆ. ವಿದ್ಯಾಪ್ರಚಾರವಾದಂತೆ, ವರ್ತಮಾನ ಪತ್ರಿಕೆಗಳನ್ನೋದುವಿಕೆಯು ಹೆಚ್ಚುವುದು. ಅದರಿಂದ ಜನರು ರಾಜಕೀಯ ಕೆಲಸಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸಲು ಸುಲಭವಾಗುವುದು.

ಸಮಾಜ ಸುಧಾರಣೆಗಳು

ಹೀಗೆ ಜನರ ಪ್ರಗತಿಯುಂಟಾಗುವುದು. ಈಗೀಗ ರಾಜಕೀಯ ಕ್ಷೇತ್ರಗಳಲ್ಲಿ ಗಂಡಸರಂತೆ ಹೆಂಗಸರೂ ಮುಂದೊತ್ತಿ ಬಂದು ಸಮಾಜ ಸುಧಾರಣೆಗಾಗಿ ಪ್ರಯತ್ನಿಸುತ್ತಿರುವುದು ಕೇವಲ ಅಭಿಮಾನಾಸ್ಪದವಾದ ಸಂಗತಿಯು. ನಮ್ಮ ದೇಶದಲ್ಲಿ ಈಗ ಹೆಂಗಸರಿಗೂ ಮತದಾನದ ಹಕ್ಕಿರುವುದರಿಂದ ಅನೇಕ ಹೆಂಗಸರು ಮುನಿಸಿಪಾಲಿಟಿಗಳಲ್ಲಿಯೂ, ಡಿಸ್ಟ್ರಿಕ್ಟ್ ಬೋರ್ಡುಗಳ

ಭಾರತ ಮಹಿಳೆಯರು

ಲ್ಲಿಯೂ, ಕೌನ್ಸಿಲುಗಳಲ್ಲಿಯೂ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ಸಮಾಜ ಸೇವೆಗೆ ಬದ್ಧಕಂಕಣರಾಗಿರುವರು. ಸಂಯುಕ್ತಪ್ರಾಂತದಲ್ಲಿ ಪಂಡಿತ ಜವಾಹರಲಾಲ ನೆಹರೂರವರ ತಂಗಿಯಾದ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಮಂತ್ರಿಪದವಿಯನ್ನು ಪಡೆದು ಕೆಲಸಮಾಡುತ್ತಿರುವರು. ಶ್ರೀಮತಿ ಸರೋಜಿನಿ ದೇವಿಯವರನ್ನು ಅರಿಯದ ಭಾರತೀಯನಾರು? ಅವರ ವಾಕ್ಚಾತುರ್ಯ, ಕವಿತಾಶಕ್ತಿ, ರಾಜಕೀಯ ಧುರೀಣತೆ ಮೊದಲಾದುವುಗಳಿಂದ ಎಲ್ಲರು ಅವರನ್ನು ಪ್ರಶಂಸಿಸುವಂತಾಗಿದೆ. ಇವರೇ ಮಾತ್ರವಲ್ಲ-ಇಂದು ಹಿಂದೂದೇಶದಲ್ಲಿ ನೂರಾರು ಮಹಿಳೆಯರು ಹಲವು ಕ್ಷೇತ್ರಗಳಲ್ಲಿ ಕಾರ್ಯಕ್ಕಿಳಿದು ತಮ್ಮ ಕೆಲಸವನ್ನು ಮುಂದವರಿಸುತಿದ್ದಾರೆ.

ಕಳೆದ ನೂರೈವತ್ತು ವರ್ಷಗಳಿಂದೀಚೆ ನಮ್ಮ ಜಾತಿಕಟ್ಟಲೆಗಳಲ್ಲಿಯೂ ಮತವಿಚಾರಗಳಲ್ಲಿಯೂ ಮಾರ್ಪಾಟುಗಳಾಗುತ್ತಲಿವೆ. ಜಾತಿ ನಿಯಮಗಳು ಶಿಥಿಲವಾಗುತ್ತಾ ಇವೆ. ಅಸ್ಪೃಶ್ಯರೆಂದೆನ್ನಿಸಿಕೊಳ್ಳುತಿದ್ದವರ ಉದ್ಧಾರಕ್ಕಾಗಿ ಎಲ್ಲರೂ ಪ್ರಯತ್ನಿಸಿ ಅವರು ಮುಂದಕ್ಕೆ ಬರುವಂತೆ ಮಾಡುತಿದ್ದಾರೆ. ಮಹಾತ್ಮಾ ಗಾಂಧಿಜಿಯವರಂತಹ ಧುರೀಣರ ಸ್ಥಿರ ಪ್ರಯತ್ನದ ಫಲವಾಗಿ ಅಸ್ಪೃಶ್ಯತೆಯು ಮಾಯವಾಗುತ್ತಿದೆ. ಕೆಲವೆಡೆಗಳಲ್ಲಿ ಅವರಿಗೆ ದೇವಾಲಯ ಪ್ರವೇಶದ ಹಕ್ಕು ದೊರೆತಿದೆ, ತಿರುವಾಂಕೂರಿನ ಅರಸರು ಅವರಿಗೆ ಈ ಹಕ್ಕನ್ನು ಕರುಣಿಸಿ ಸಮಾಜ ಸುಧಾರಣೆಗೆ ದಾರಿ ತೋರಿಸಿರುವರು.

ಅಸ್ಪೃಶ್ಯತೆ

ಇನ್ನು, ಹಿಂದೂ ಸಮಾಜವಲ್ಲಿ ಸೇರಿಕೊಂಡಿದ್ದ ಅಂಧಭಕ್ತಿಯೂ ಅರ್ಥವಿಲ್ಲದ ನಿಯಮಗಳೂ ಮೆಲ್ಲಮೆಲ್ಲನೆ ಹೋಗುತ್ತಲಿವೆ. ಹಿಂದೂ ಮತದ ಸುಧಾರಣೆಯನ್ನು ಮಾಡುವುದಕ್ಕಾಗಿ ಶ್ರೀ ದಯಾನಂದ ಸರಸ್ವತಿಯವರು (1824–83) ಆರ್ಯ ಸಮಾಜವನ್ನು ಸ್ಥಾಪಿಸಿ (1875) ವೇದಕಾಲದ ಸಂಪ್ರದಾಯಗಳನ್ನು ನಾವು ಅನುಸರಿಸಬೇಕೆಂದು ಬೋಧಿಸಿದರು. ಈಗ ಪಂಜಾಬಿನಲ್ಲಿ ಅವರ ಅನುಯಾಯಿಗಳು ಹಲವರಿರುತ್ತಾರೆ. ಇವರ ಉಪದೇಶಿಗಳು ಅನೇಕ ಕಡೆಗಳಿಗೆ ಹೋಗಿ ಹಿಂದೂ ಮತದ ಶ್ರೇಷ್ಠತೆಯನ್ನು ಜನರಿಗೆ ಬೋಧಿಸುತಿದ್ದಾರೆ. ಹತ್ತೊಂಬತ್ತನೇ ಶತಮಾನದ ಕೊನೆಯ ವರ್ಷ

ಧಾರ್ಮಿಕ ಜಾಗ್ರತಿ

ಗಳಲ್ಲಿ ಸ್ವಾಮಿ ವಿವೇಕಾನಂದರು (1863–1902) ಹಿಂದೂ ಧರ್ಮದಲ್ಲಿ ನವಜೀವನವನ್ನುಂಟುಮಾಡಿದರು. ಇವರು ಶ್ರೀ ರಾಮಕೃಷ್ಣ ಪರಮಹಂಸರ (1836–86) ಶಿಷ್ಯರು. ವಿವೇಕಾನಂದರು ಬಂಗಾಳದಿಂದ ಅಮೇರಿಕಕ್ಕೆ ಹೋಗಿ ಹಿಂದೂ ಮತದ ತತ್ವಗಳ ಶ್ರೇಷ್ಠತೆಯನ್ನು ಅಲ್ಲಿನ ಜನರಿಗೆ ತಿಳಿಸಿಕೊಟ್ಟರು. ಹೀಗೆ ನಮ್ಮ ದೇಶದಿಂದ ವಿದೇಶಕ್ಕೆ ಹೋಗಿ ಇಂತಹ ಕೆಲಸವನ್ನು ಕೈಕೊಂಡರು ಇವರೇ ಮೊದಲನೆಯವರು. ಆ ದೇಶದಿ ಸ್ವದೇಶಕ್ಕೆ ಹಿಂದಿರುಗಿ ರಾಮಕೃಷ್ಣ ಮಿಶನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಮಿಶನಿನ ಸನ್ಯಾಸಿಗಳು ಹಿಂದೂ ಮತಾವಲಂಬಿಗಳಾಗಿದ್ದು, ಸ್ವಾರ್ಥತ್ಯಾಗದಿಂದ ಜನೋಪಕಾರದ ಕೆಲಸಗಳನ್ನು ನಿರ್ವಹಿಸುತ್ತಾರೆ. ಮಹಾತ್ಮಾಗಾಂಧಿಯವರ ಸ್ವಚ್ಛ ಜೀವನದ ಮಹಿಮೆಯಿಂದಲೂ, ಅವರ ಅಹಿಂಸಾ ಮತ್ತು ಸತ್ಯ ಮಾರ್ಗದ ಪ್ರಚಾರದಿಂದಲೂ ಜನರಲ್ಲಿ ಧರ್ಮಾವಲಂಬನೆಯು ಹೆಚ್ಚಿದೆ. ಮೆಲ್ಲಮೆಲ್ಲನೆ ಜಾತೀಯವಾದ ಧರ್ಮಾಂಧತೆಯು ತೊಲಗಿ ಅಧುನಿಕ ಧರ್ಮವು ಬಳಕೆಯಲ್ಲಿ ಬರುತ್ತಲಿದೆ. ಕ್ರೈಸ್ತ ಧರ್ಮದ ಪ್ರಸಾರವು, ನಮ್ಮಲ್ಲಿನ ಸುಧಾರಣೆಗಳಿಗೆ ಕೆಲಮಟ್ಟಿಗೆ ಕಾರಣವಾಗಿದೆಯೆನ್ನಲೂ ಬಹುದು.

ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿಯೂ ವಿಶೇಷವಾದ ಬದಲಾವಣೆಯಾದುದನ್ನು ನಾವು ಕಾಣಬಹುದು. ಹಿಂದಿನ ಕಾಲದಲ್ಲಿ ಜನರಿಗೆ ಆವಶ್ಯಕವಾದ ವಸ್ತುಗಳೇ ಕಡಿಮೆಯಾಗಿದ್ದುವು.

ಕೃಷಿ

ಬೇಕಾದುವುಗಳನ್ನೆಲ್ಲಾ ಹಳ್ಳಿಗಳಲ್ಲೇ ಒದಗಿಸಿಕೊಳ್ಳಲು ಸಾಧ್ಯವಿತ್ತು. ಈಗಾದರೋ ಪಾಶ್ಚಾತ್ಯ ವಿಜ್ಞಾನದ ಬೆಳವಣಿಗೆಯಿಂದಲೂ, ಯಂತ್ರಗಳ ಪ್ರಚಾರದಿಂದಲೂ ಪರಿಸ್ಥಿತಿಯೇ ಬದಲಾಗಿ ಹೋಗಿರುತ್ತದೆ. ನಮ್ಮ ಆವಶ್ಯಕತೆಗಳು ಬೆಳೆದಿವೆ. ಇದರಿಂದ ನಮಗೆ ವಿದೇಶೀಯರ ಸಹಾಯವೂ ಅಗತ್ಯವಾಗಿದೆ. ನಮ್ಮ ದೇಶದಲ್ಲಿ ಮೊದಲಿನಂತೆಯೇ ಈಗಲೂ ಕೃಷಿಯೇ ಮುಖ್ಯ ಉದ್ಯೋಗವಾಗಿದೆ. ಇದರಲ್ಲಿಯೂ ಈಗ ಎಷ್ಟೋ ಸುಧಾರಣೆಗಳಾಗಿವೆ. ದೊಡ್ಡ ದೊಡ್ಡ ಕಾಲುವೆಗಳಿಂದ ಬಂಜರುಬಿದ್ದ ಮಿಲಿಯಗಟ್ಟಲೆ ಎಕ್ರೆ ವಿಶಾಲವಾದ ಸ್ಥಳಗಳು ಬಹಳ ಫಲವತ್ತಾಗಿ ಮಾರ್ಪಟ್ಟಿವೆ. ಸಿಂಧದಲ್ಲಿ ಲೊಯಿಡ್ ಡೆಮ್, ಪಂಜಾಬಿನಲ್ಲಿ ಸಟ್ಲೆಜ್ ನದಿಯ ಕಾಲುವೆ, ಮದರಾಸಿನಲ್ಲಿ

ಮೆಟ್ಟೂರು ಅಣೆಕಟ್ಟು, ಇವುಗಳಿಂದ ಬೇಸಾಯವು ಸುಲಭವಾಗಿದೆ. ಇನ್ನು ಬೇಸಾಯಕ್ಕೆ ಉಪಯೋಗಿಸುವ ಬೀಜಗಳಲ್ಲಿ ಉತ್ತಮವಾದುವುಗಳನ್ನು ಆರಿಸಿ ತೆಗೆದು ಹೆಚ್ಚಿನ ಪೈರು ಬೆಳೆವಂತೆ ಮಾಡಲು ಸರಕಾರದ ಸಂಶೋಧನಾಲಯಗಳು (Research Stations) ಎಷ್ಟೋ ಇವೆ. ಈಗ ನಮ್ಮ ದೇಶದ ಉತ್ಪತ್ತಿಯನ್ನು ದೂರದೂರದ ದೇಶಗಳಿಗೂ ಕಳುಹಿಸುವುದಕ್ಕೆ ಅನುಕೂಲವಿದೆ.

ಕೈಗಾರಿಕೆಗಳಅಭಿವೃದ್ಧಿ

ಯಂತ್ರಗಳ ಪ್ರಚಾರವು ಬೆಳೆದಂತೆ ಕೈಗಾರಿಕೆಗಳು ಹೆಚ್ಚಿವೆ. ಮೊದಲು ಚರಕಗಳ ಮೇಲೆ ನೂಲನ್ನು ತಯಾರಿಸುತ್ತಿದ್ದರು. ಈಗ ಮುಂಬಾಯಿ, ಅಹಮದಾಬಾದು, ಶೋಲಾಪುರ, ಮಧುರಾ ಮದರಾಸು ಮುಂತಾದ ಪಟ್ಟಣಗಳಲ್ಲಿ ಸ್ಥಾಪಿತವಾದ ಗಿರಣಿಗಳಲ್ಲಿ ನೂಲು ತಯಾರಾಗುತ್ತದೆ. ಹೊಸ ಕೈಗಾರಿಕೆಗಳಂತೆ ಹೊಸ ಹೊಸ ಗಣಿಗಳೂ ತೆರೆಯಲ್ಪಟ್ಟಿರುವುವು. ಕಬ್ಬಿಣ, ಕಲ್ಲಿದ್ದಲು, ಮೈಕಾ, ಮೆಂಗನೀಸ್, ಬಂಗಾರ ಮೊದಲಾದ ಖನಿಜಗಳು ನಮ್ಮಲ್ಲಿಯೂ ದೊರಕುವುದರಿಂದ ನಮ್ಮ ದೇಶದ ಐಶ್ವರ್ಯವು ಹೆಚ್ಚುತ್ತಲಿದೆ.

ನಮ್ಮ ದೇಶದಲ್ಲಿ ಇತರ ಕೈಗಾರಿಕೆಗಳೂ ಬೆಳೆದಿವೆ. ಉಣ್ಣೆ ಬಟ್ಟೆ, ಸಕ್ಕರೆ, ಕಾಗದ, ಬೆಂಕಿಪೆಟ್ಟಿಗೆ, ಗಾಜು, ಕಬ್ಬಿಣ, ಸಿಮೆಂಟು ಮೊದಲಾದ ಎಷ್ಟೋ ವಸ್ತುಗಳು ಇಲ್ಲೇ ತಯಾರಾಗುತ್ತಿವೆ. ಭಂಡವಲಗಾರರು ಹಲವು ಕೋಟಿ ರೂಪಾಯಿಗಳನ್ನು ಈ ಕೈಗಾರಿಕೆಗಳ ಮೇಲೆ ಸುರಿದಿರುತ್ತಾರೆ. ಈ ಕೈಗಾರಿಕೆಗಳ ಕಾರಖಾನೆಗಳಲ್ಲಿ 26 ಮಿಲಿಯಗಳಿಗಿಂತಲೂ ಹೆಚ್ಚಿನ ಜನರು ದುಡಿಯುತ್ತಿದ್ದಾರೆ. ಹಿಂದೂದೇಶದ ಕೈಗಾರಿಕೆಗಳ ಬೆಳವಣಿಗೆಯ ಮೇಲೆ ಕಣ್ಣಿಟ್ಟು ಸರಕಾರದವರು ವಿದೇಶೀ ವಸ್ತುಗಳ ಮೇಲೆ ತುಂಬಾ ಸುಂಕವನ್ನು ಹೊರಿಸಿರುತ್ತಾರೆ. ಅದರಂತೆ ಮಜೂರರ ಹಿತಕ್ಕಾಗಿ ಎಷ್ಟೋ ಕಾನೂನುಗಳನ್ನೂ ಜ್ಯಾರಿಗೆ ತಂದಿರುತ್ತಾರೆ.

ವ್ಯಾಪಾರ ಚಲಾವಣೆ

ಕೈಗಾರಿಕೆಗಳು ಹೆಚ್ಚಿದಂತೆ ನಮ್ಮ ವ್ಯಾಪಾರವೂ ಹೆಚ್ಚಿರುತ್ತದೆ. ಪ್ರಯಾಣ ಸೌಕರ್ಯಗಳು ಹೆಚ್ಚಿದುದರಿಂದಲೂ ವ್ಯಾಪಾರವು ಬೆಳೆದಿದೆ. ಎತ್ತಿನ ಗಾಡಿಗಳ ಬದಲು, ರೈಲ್ವೆ ಮತ್ತು ಮೋಟರು ಲಾರಿಗಳು ಬಳಕೆಗೆ ಬಂದು ಒಳನಾಡು

ಗಳಿಂದ ಸರಕುಗಳನ್ನು ಅತ್ಯಲ್ಪ ಸಮಯದೊಳಗೆ ಬಂದರುಗಳಿಗೆ ಸಾಗಿಸುವಂತಾಗಿದೆ. ಅಲ್ಲಿಂದ ದೊಡ್ಡದೊಡ್ಡ ಉಗಿಹಡಗುಗಳು ಅವನ್ನು ಪರದೇಶಗಳಿಗೆ ಕೊಂಡೊಯ್ಯುತ್ತವೆ. ಈ ರೀತಿ ನಮ್ಮ ದೇಶವು ಪರರಾಷ್ಟ್ರಗಳೊಡನೆ ವ್ಯಾಪಾರವನ್ನು ಬೆಳೆಸುತ್ತಿರುವುದು.

ಪರರಾಷ್ಟ್ರಗಳೊಡನೆ ನಮ್ಮ ರಾಜಕೀಯ ವ್ಯವಹಾರವೂ ಬೆಳೆದಿರುವುದು. ನಮ್ಮ ದೇಶವು ಬ್ರಿಟಿಷ್ ಸಾಮ್ರಾಜ್ಯದ ಅಂಗವಾದುದರಿಂದ ಅನೇಕ ಹಿಂದೀಯರು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ದಕ್ಷಿಣ ಆಫ್ರಿಕ, ಪೂರ್ವ ಆಫ್ರಿಕ, ಫೀಜಿ ದ್ವೀಪ ಮೊದಲಾದ ಕಡೆಗಳಿಗೆ ಹೋಗಿ ನೆಲೆನಿಂತಿರುವರು. ಅವರನ್ನು ಅಲ್ಲಿನ ಜನರು ತಿರಸ್ಕಾರದಿಂದ ಕಾಣುತಿದ್ದುದರಿಂದ ನಮ್ಮ ಜನರು ಬಹಳ ದುಃಖಕ್ಕೀಡಾಗಿದ್ದರು. ಅಲ್ಲಿ ಹಿಂದೀಯರಿಗೆ ರಾಜಕೀಯ ಹಕ್ಕುಗಳಿದ್ದಿಲ್ಲ. ಅಲ್ಲದೆ ವ್ಯಾಪಾರದಲ್ಲಿಯೂ ಅವರ ಮೇಲೆ ಹಲಕೆಲವು ನಿರ್ಬಂಧಗಳಿದ್ದುವು. ದಕ್ಷಿಣ ಆಫ್ರಿಕದಲ್ಲಿ ಇಂತಹ ತೊಂದರೆಗಳು ಹೆಚ್ಚಾದಾಗ ಮಹಾತ್ಮಾ ಗಾಂಧಿಯವರ ನಾಯಕತ್ವದಲ್ಲಿ ಹಿಂದೀಯರು ಚಳವಳಿಯನ್ನು ಹೂಡಿ ಕೆಲಮಟ್ಟಿಗೆ ಹಕ್ಕುಬಾಧ್ಯತೆಗಳನ್ನು ದೊರಕಿಸಿಕೊಂಡರು. ಸಾಮ್ರಾಜ್ಯದ ಬೇರೆ ಭಾಗಗಳಲ್ಲಿ ಈ ತೊಂದರೆಗಳು ಸದಾ ಇದ್ದೇ ಇರುತ್ತವೆ.

ಅಂತರರಾಷ್ಟ್ರೀಯ ವ್ಯವಹಾರಗಳು

1914ನೇ ಇಸವಿಯಲ್ಲಿ ಯುದ್ಧವಾದಂದಿನಿಂದ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಹಿಂದುಸ್ಥಾನಕ್ಕೂ ಒಂದು ಸ್ಥಾನವು ದೊರೆತಿದೆ. ಪಶ್ಚಿಮದೇಶದ ಕೆಲವು ರಾಷ್ಟ್ರಗಳೊಡನೆ ಇದೂ ಜನಾಂಗಸಂಘಕ್ಕೆ ಸೇರಿ ಅದರ ವ್ಯವಹಾರಗಳಲ್ಲಿ ಭಾಗವಹಿಸುತ್ತಿದೆ.

ಪೇಷ್ವೆಯರು

1. ಬಾಲಾಜಿ ವಿಶ್ವನಾಥ (1714-20)
    - 2. ಬಾಜಿರಾಯ 1720-40
        - 3. ಬಾಲಾಜಿ ಬಾಜಿರಾಯ 1740-61
            - ವಿಶ್ವಾಸರಾವ್ (ಪಾಣಿಪತದಲ್ಲಿ ಮಡಿದ)
            - 4. ಮಾಧವರಾವ್ 1761-72
                - 6. ಮಾಧವರಾವ್ ನಾರಾಯಣ 1774-95
            - ನಾರಾಯಣರಾವ್ 1772-73
        - 5. ರಾಘೋಬ 1773
            - ಬಾಜಿರಾಯ (1796-1818)
                - ನಾನಾಸಾಹೇಬ (ದತ್ತಪುತ್ರ)
    - ಚಿಮ್ನಾಜಿ
        - ಸದಾಶಿವರಾವ್ ಬಾವು

ಕೊನೆಯ ಮೊಗಲ್ ಅರಸರು

- ಔರಂಗಜೇಬ 1658-1712
    - ಬಹದೂರ್ ಷಹ 1713-19
        - ಜಹಾಂದರ 1712-13
            - ಆಲಮಗೀರ 1754-59
                - ಷಾಹ ಆಲಮ್ 1759-1806
                    - ಅಕಬರ 1806-37
                        - ಬಹದೂರ್ ಷಹ 1837-57
        - ಮಗ
            - ಫರುಕಸಿಯರ 1713-19
        - ಮಗ
            - ಮಹಮ್ಮದ್ ಷಹ 1719-48
                - ಅಹಮ್ಮದ್ ಷಹ 1748-54

ಪ್ರಶ್ನೆಗಳು

1. (a) ಮೊಹೆಂಜೊಡೆರೊ ಎಲ್ಲಿದೆ?
   (b) ಅಲ್ಲಿ ಏನು ದೊರೆತಿದೆ?
   (c) ಅದರಿಂದ ನಮಗೆ ಏನು ತಿಳಿಯುತ್ತದೆ?

2. (a) ಆರ್ಯರು ಮೊದಲು ಹಿಂದುಸ್ಥಾನದಲ್ಲಿ ಎಲ್ಲಿ ನೆಲಸಿದ್ದರು?
   (b) ಅವರ ಧರ್ಮದ ವಿಷಯ ನಿಮಗೆ ಏನು ತಿಳಿದಿರುವುದು?

3. (a) ಗೌತಮ ಬುದ್ಧನು ಏಕೆ ಅರಮನೆಯನ್ನು ಬಿಟ್ಟುಹೋದನು?
   (b) ಅವನ ಮುಖ್ಯ ತತ್ವಗಳು ಯಾವುವು?
   (c) ಬೌದ್ಧ ಸಂಘಗಳೆಂದರೇನು?

4. (a) ಅಲೆಕ್ಸಾಂಡರನು ಯಾರು?
   (b) ಅವನು ಹಿಂದುಸ್ಥಾನದ ಯಾವ ಭಾಗವನ್ನು ಗೆದ್ದುಕೊಂಡನು?

5. (a) ಮೌರ್ಯ ಸಾಮ್ರಾಜ್ಯವು ಎಲ್ಲಿ ಸ್ಥಾಪಿತವಾಯಿತು?
   (b) ಅಶೋಕನ ಕಾಲದ ಮೌರ್ಯ ಸಾಮ್ರಾಜ್ಯದ ಪಟ ಬಿಡಿಸಿರಿ.
   (c) ಅಶೋಕನು ಬೌದ್ಧನಾದುದೇಕೆ?
   (d) ಅವನು ಪ್ರಜೆಗಳಿಗಾಗಿ ಏನೆಲ್ಲ ಮಾಡಿದನು?
   (e) ಮೌರ್ಯ ಸಾಮ್ರಾಜ್ಯವು ಹೇಗೆ ಆಳಲ್ಪಡುತಿತ್ತು?

6. (a) ಮೌರ್ಯ ಸಾಮ್ರಾಜ್ಯವು ನಷ್ಟವಾದ ತರುವಾಯ ಸ್ಥಾಪಿತವಾದ ರಾಜ್ಯಗಳ ಹೆಸರುಗಳನ್ನು ಕೊಡಿರಿ.
   (b) ಅವುಗಳನ್ನು ಯಾರು ಆಳುತಿದ್ದರು?
   (c) ಕಣಿಷ್ಕನು ಅಶೋಕನನ್ನು ಯಾವ ರೀತಿಯಲ್ಲಿ ಹೋಲುತ್ತಾನೆ?
   (d) ಮಹಾಯಾನ ಪಂಥದ ಮುಖ್ಯ ಆಚರಣೆಗಳು ಯಾವುವು?

7. (a) ಸಮುದ್ರಗುಪ್ತನ ದಿಗ್ವಿಜಯವನ್ನು ವಿವರಿಸಿರಿ.
   (b) ಚಂದ್ರಗುಪ್ತ ವಿಕ್ರಮಾದಿತ್ಯನು ಯಾವ ರಾಜ್ಯಗಳನ್ನು ಗೆದ್ದುಕೊಂಡನು?

8. (a) ಗುಪ್ತರ ಕಾಲದಲ್ಲಿ ಹಿಂದೂದೇಶಕ್ಕೆ ಬಂದ ಯಾತ್ರಿಕನಾರು?
   (b) ಅವನು ಏಕೆ ಬಂದನು?
   (c) ಅವನು ಯಾವ ಯಾವ ಭಾಗಗಳನ್ನು ಸಂದರ್ಶಿಸಿದನು?

9. (a) ಹರ್ಷನು ಹೇಗೆ ಥಾನೇಶ್ವರದ ಅರಸನಾದನು?

(b) ಅವನು ಸೋಲಿಸಿದ ಅರಸನು ಯಾರು?
(c) ಹರ್ಷನು ತನ್ನ ಸಾಮ್ರಾಜ್ಯವನ್ನು ಹೇಗೆ ಆಳಿದನು?

10. (a) ಚೋಳ ಅರಸರಲ್ಲಿ ಪ್ರಮುಖನಾರು?
(b) ಅವನು ಜಯಿಸಿದ ರಾಜ್ಯಗಳು ಯಾವುವು?

11. (a) ಘಜನಿ ಮಹಮೂದನು ಹಿಂದೂದೇಶಕ್ಕೆ ಏಕೆ ಬಂದನು?
(b) ಘಜನಿಯ ವೈಭವದ ಕುರಿತು ಬರೆಯಿರಿ.

12. (a) ಘೋರಿ ಮಹಮ್ಮದನು ಢಿಲ್ಲಿಯನ್ನು ಹೇಗೆ ಗೆದ್ದುಕೊಂಡನು?
(b) ಗುಲಾಮ ಅರಸರೊಳಗೆ ಬಾಲ್ಬನನನ್ನು ಏಕೆ ಪ್ರಮುಖನೆಂದು ಹೇಳಬಹುದು?

13. (a) ಅಲ್ಲಾವುದ್ದೀನನು ಹೇಗೆ ಢಿಲ್ಲಿಯ ಅರಸನಾದನು?
(b) ಅಲ್ಲಾವುದ್ದೀನನು ಗೆದ್ದುಕೊಂಡ ರಾಜ್ಯಗಳಾವುವು?
(c) ಅವನು ಯಾವ ರೀತಿಯಲ್ಲಿ ರಾಜ್ಯಭಾರ ಮಾಡಿದನು?

14. (a) ಮಹಮ್ಮದ ತಗ್ಲಕನು ಮಾಡಿದ ಮೂಢ ಕೆಲಸಗಳು ಯಾವುವು?
(b) ಢಿಲ್ಲಿ ಸಾಮ್ರಾಜ್ಯವು ಕೆಟ್ಟುಹೋಗಲು ಕಾರಣವೇನು?

15. (a) ಬಹ್ಮನಿ ರಾಜ್ಯವು ಹೇಗೆ ಸ್ಥಾಪಿತವಾಯಿತು?
(b) ವಿಜಯನಗರವು ಹೇಗೆ ಸ್ಥಾಪಿತವಾಯಿತು?
(c) ವಿಜಯನಗರದ ಅತಿ ಪ್ರಮುಖ ಅರಸನು ಯಾರು?
(d) ಅವನ ವಿಷಯ ನಿಮಗೆ ತಿಳಿದುದನ್ನು ಬರೆಯಿರಿ.

16. (a) ಮೊಗಲ ಸಾಮ್ರಾಜ್ಯವು ಹೇಗೆ ಸ್ಥಾಪಿತವಾಯಿತು?
(b) ಮೊದಲನೆಯ ಪಾಣಿಪತ ಕದನವು ಯಾರಾರೊಳಗೆ ನಡೆಯಿತು?
(c) ಅದರ ಪರಿಣಾಮವೇನು?

17. (a) ಹುಮಾಯೂನನು ಪಟ್ಟವನ್ನು ಹೇಗೆ ಕಳೆದುಕೊಂಡನು?
(b) ಶೇರ್ ಷಹನ ರಾಜ್ಯಭಾರ ಕ್ರಮವನ್ನು ವಿವರಿಸಿರಿ.
(c) ಎರಡನೆಯ ಪಾಣಿಪತ ಕದನವು ನಡೆಯಲು ಕಾರಣವೇನು?

18. (a) ಅಕ್ಬರನು ಗೆದ್ದುಕೊಂಡ ರಾಜ್ಯಗಳು ಯಾವುವು?
(b) ಅವನು ರಜಪೂತರೊಡನೆ ಹೇಗೆ ವರ್ತಿಸಿದನು?
(c) ಇದರಿಂದ ಅವನಿಗೆ ದೊರೆತ ಲಾಭವೇನು?

19. (a) ಅವರಂಗಜೇಬನು ಹೇಗೆ ಢಿಲ್ಲಿ ಪಟ್ಟಕ್ಕೆ ಬಂದನು?
(b) ಹಿಂದೂಗಳ ಕಡೆಗೆ ಅವರಂಗಜೇಬನ ಧೋರಣವಾವುದು?
(c) ಅವನ ದಕ್ಷಿಣದ ಯುದ್ಧಯಾತ್ರೆಯ ವಿಷಯ ಬರೆಯಿರಿ.

20. (a) ಸಿಕ್ಖರು ಯುದ್ಧಪ್ರಿಯರಾದುದು ಹೇಗೆ?
(b) ಮರಾಟರ ಸಾಮ್ರಾಜ್ಯವನ್ನು ಯಾರು ಸ್ಥಾಪಿಸಿದರು?

21. (a) ಶಿವಾಜಿಯ ಸಾಮ್ರಾಜ್ಯದ ಒಂದು ನಕಾಶೆಯನ್ನು ಬಿಡಿಸಿರಿ.
(b) ಶಿವಾಜಿಯ ವಿಜಯಕ್ಕೆ ಕಾರಣಗಳಾವುವು?
(c) ಶಿವಾಜಿಯ ತರುವಾಯ ಮರಾಟರು ಮೊಗಲರೊಡನೆ ಹೇಗೆ ಯುದ್ಧ ಮಾಡಿದರು?
(d) ಮೂರನೆಯ ಪಾಣಿಪತ ಕದನಕ್ಕೆ ಕಾರಣಗಳಾವುವು?
(e) ಇದರಲ್ಲಿ ಮರಾಟರು ಸೋತುಹೋಗಲು ಕಾರಣವೇನು?

22. (a) ಪಾಶ್ಚಾತ್ಯರು ಹಿಂದೂದೇಶಕ್ಕೆ ಏಕೆ ಬಂದರು?
(b) ಪೋರ್ತುಗೀಸರು, ಇಂಗ್ಲಿಷರು, ಫ್ರೆಂಚರು ಕಾರಖಾನೆಗಳನ್ನು ಕಟ್ಟಿಸಿದ ಸ್ಥಳಗಳು ಯಾವುವು?
(c) ಹಿಂದೂದೇಶದ ನಕಾಶ ಬಿಡಿಸಿ ಅವುಗಳನ್ನು ಗುರುತಿಸಿರಿ.

23. (a) ಇಂಗ್ಲಿಷರಿಗೂ, ಫ್ರೆಂಚರಿಗೂ ಕರ್ನಾಟಕದಲ್ಲಿ 1750ರಲ್ಲಿ ಯುದ್ಧವಾಗಲು ಕಾರಣವೇನು?
(b) ಈ ಯುದ್ಧದ ಪರಿಣಾಮವೇನು?
(c) ಫ್ರೆಂಚರ ರಾಜಕೀಯ ಅಧಿಕಾರವು ಹಿಂದೂದೇಶದಲ್ಲಿ ಹೇಗೆ ಕೊನೆಗಾಣಿತು?

24. (a) ಇಂಗ್ಲಿಷರು ಬಂಗಾಳದಲ್ಲಿ ಮೀರ್ ಜಾಫರನನ್ನು ಹೇಗೆ ನವಾಬನಾಗಿ ಮಾಡಿದರು?
(b) ಅಲ್ಲಾಹಾಬಾದು ಒಪ್ಪಂದದ ಶರ್ತಗಳು ಯಾವುವು?

25. (a) ಮರಾಟರಿಗೂ ಇಂಗ್ಲಿಷರಿಗೂ ಮೊದಲನೆಯ ಯುದ್ಧವಾಗಲು ಕಾರಣವೇನು?
(b) ಈ ಯುದ್ಧವನ್ನು ಕೊನೆಗಾಣಿಸಿದ ಒಪ್ಪಂದದ ಶರ್ತಗಳು ಯಾವುವು?

26. (a) ಹೈದರ್ ಆಲಿಯು ಹೇಗೆ ಮೈಸೂರಿನ ಅಧಿಕಾರಿಯಾದನು?
(b) ಅವನಿಗೂ ಇಂಗ್ಲಿಷರಿಗೂ ವೈರವು ಹುಟ್ಟಲು ಕಾರಣವೇನು?

27. (a) ಸೈನ್ಯಸಹಾಯ ಮೈತ್ರಿ ಎಂದರೇನು?
(b) ಅದನ್ನು ಯಾರು ಜ್ಯಾರಿಗೆ ತಂದರು?
(c) ಈ ಮೈತ್ರಿಗೆ ಅವನ ಕಾಲದಲ್ಲಿ ಯಾರಾರು ಸೇರಿದರು?
(d) ಇದರಿಂದ ಇಂಗ್ಲಿಷರಿಗೆ ದೊರೆತ ಲಾಭವೇನು?

28. (a) ಲೊರ್ಡ್ ಹೇಸ್ಟಿಂಗ್ಸನ ಕಾಲದಲ್ಲಿ ದೊರೆತ ರಾಜ್ಯಗಳಾವುವು?
(b) ಆ ಪ್ರದೇಶಗಳು ಹೇಗೆ ದೊರೆತುವು?

(c) ಹಿಂದೂದೇಶದ ಪಟವನ್ನು ಬಿಡಿಸಿ ಅದರಲ್ಲಿ 1823ರಲ್ಲಿನ ಇಂಗ್ಲಿಷ್ ಸಾಮ್ರಾಜ್ಯವನ್ನು ಗುರುತಿಸಿರಿ.

29. (a) ಬೆಂಟಿಂಕನ ಸುಧಾರಣೆಗಳನ್ನು ಬರೆಯಿರಿ.
(b) ಇಂಗ್ಲಿಷರಿಗೂ ಅಫಘಾನರಿಗೂ ಒಕ್‌ಲೆಂಡಿನ ಕಾಲದಲ್ಲಿ ಯುದ್ಧವಾಗಲು ಕಾರಣವೇನು?
(c) ಈ ಯುದ್ಧವು ಹೇಗೆ ಕೊನೆಗಂಡಿತು?

30. (a) ಇಂಗ್ಲಿಷರು ಪಂಜಾಬನ್ನು ಯಾರ ಕಾಲದಲ್ಲಿ ಗೆದ್ದುಕೊಂಡರು?
(b) ಅದನ್ನು ಹೇಗೆ ಗೆದ್ದುಕೊಂಡರು?
(c) ಡಾಲ್‌ಹೌಸಿಯ ಕಾಲದಲ್ಲಿ ಯಾವ ಯಾವ ರಾಜ್ಯಗಳು ಇಂಗ್ಲಿಷ್ ಸಾಮ್ರಾಜ್ಯಕ್ಕೆ ಸೇರಿದುವು?

31. (a) ಸಿಪಾಯಿ ದಂಗೆಗೆ ಕಾರಣಗಳು ಯಾವುವು?
(b) ಸಿಪಾಯಿ ದಂಗೆಯ ಮುಖ್ಯ ಪರಿಣಾಮಗಳು ಯಾವುವು?

32. (a) ವಿಕ್ಟೋರಿಯಾ ಮಹಾರಾಣಿಯವರ ಜಾಹೀರುನಾಮೆಯಲ್ಲಿ ಏನೆಲ್ಲ ಅಡಕವಾಗಿದೆ?
(b) ಐದನೆಯ ಅಫಘಾನ ಯುದ್ಧಕ್ಕೆ ಕಾರಣಗಳು ಯಾವುವು?